
● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
10ನೇ ತರಗತಿ ಪಾಸಾದವರಿಗೆ ಅಂಚೆ ಇಲಾಖೆಯಲ್ಲಿವೆ 44,228 ಹುದ್ದೆಗಳು



ಆಳ-ಅಗಲ
ಖಾಸಗಿ ವಲಯದಲ್ಲಿ ಮೀಸಲಾತಿ ಬೇಕು ಖಚಿತ ಕಾರ್ಯನೀತಿ

ಡಬಲ್ ಡೆಕರ್: ಪ್ರಾಯೋಗಿಕವಾಗಿ ಸಂಚಾರ ಶುರು 4

ಪ್ರಧಾನಿ ಪಡಸಾಲೆಗೆ ಬಿಜೆಪಿ ಬಿಕ್ಕಟ್ಟು 11

ಜಿಡಿಪಿ ಶೇ 7ರಷ್ಟು ಪ್ರಗತಿ: ಎಡಿಬಿ 10

ಟ್ರಂಪ್‌ಗೆ ಇರಾನ್‌ನಿಂದ ಬೆದರಿಕೆ 10

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹76,620 (ಬೆಂಗಳೂರು)	₹95,500 (ಬೆಂಗಳೂರು)

ಸತತ ಮಳೆ: 111 ಅಡಿ ತಲುಪಿದ ಕೆಆರ್‌ಎಸ್ ಮಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಶ್ರೀರಂಗಪಟ್ಟಣ: ದಕ್ಷಿಣ ಕನ್ನಡ, ಕೊಡಗು ಸೇರಿದಂತೆ ಹಲವೆಡೆ ಮಳೆಯ ಅಬ್ಬರ ಬುಧವಾರವೂ ಮುಂದುವರಿದಿದ್ದರೆ, ಕೆಲವೆಡೆ ಮಳೆಯ ರಭಸ ಕಡಿಮೆಯಾಗಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನೀರಿನ ಮಟ್ಟ ಬುಧವಾರ ಸಂಜೆ ವೇಳೆ 111.50 ಅಡಿಗೆ ತಲುಪಿದೆ. ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಿದ್ದು, 34,779 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಎರಡು ದಿನಗಳಲ್ಲಿ ಅಣೆಕಟ್ಟೆಗೆ 3.5 ಅಡಿಗಳಷ್ಟು ನೀರು ಹರಿದು ಬಂದಿದೆ. ಕುಡಿಯಲು ಮತ್ತು ಕೆರೆ, ಕಟ್ಟೆಗಳನ್ನು ತುಂಬಿಸಲು 2,376 ಕ್ಯುಸೆಕ್ ಅನ್ನು ನದಿ ಮತ್ತು ನಾಲೆಗಳಿಗೆ ಹರಿಸಲಾಗುತ್ತಿದೆ.

ಒಟ್ಟು 49.452 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 33.258 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 89.5 ಅಡಿ ನೀರಿನ ಸಂಗ್ರಹವಿತ್ತು.

ನಿರಂತರ ಮಳೆ ಮುಂದುವರಿದ ಆತಂಕ 7

ಉದ್ಯಮದಿಂದ ತೀವ್ರ ಆಕ್ಷೇಪ ● ಮಂಡನೆಗೆ ಸಿದ್ಧವಾಗಿದ್ದ ಮಸೂದೆಗೆ ತಡೆ

ಖಾಸಗಿ ಮೀಸಲು ಸಂಘರ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಸರ್ಕಾರದ ನಡೆಗೆ ಉದ್ಯಮ ವಲಯದಿಂದ ತೀವ್ರ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ, ಈ ಅಧಿವೇಶನದಲ್ಲಿ ಮಂಡಿಸಲು ಸಿದ್ಧಪಡಿಸಿದ್ದ ಮಸೂದೆಯನ್ನು ತಕ್ಷಣಕ್ಕೆ ತಡೆ ಹಿಡಿಯಲಾಗಿದೆ.

ಸ್ಥಳೀಯರಿಗೆ ಮೀಸಲಾತಿ ಕಲ್ಪಿಸುವ ಸರ್ಕಾರದ ಈ ನಡೆಗೆ ಉದ್ಯಮ ವಲಯದಿಂದ ವ್ಯಾಪಕ ಆಕ್ಷೇಪ ವ್ಯಕ್ತವಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, 'ಮಸೂದೆ ಇನ್ನೂ ಸಿದ್ಧತೆಯ ಹಂತದಲ್ಲಿದೆ. ಮಸೂದೆ ಸಂಬಂಧ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ. ಈ ಸಂಬಂಧ ರಚಿಸಲಾಗಿರುವ ಕರಡು ಮಸೂದೆಗೆ ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿತ್ತು.

> **ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ದೊರೆಯಬೇಕು ಎಂಬುದಕ್ಕೆ ನಮ್ಮ ಆದ್ಯತೆ. ಆದರೆ ಉದ್ಯಮಗಳಿಗೆ ಹಾನಿಯಾಗದೇ ಇರುವ ಹಾಗೆ ಜಾರಿಗೆ ತರುತ್ತೇವೆ**
> **ಎಂ.ಬಿ.ಪಾಟೀಲ,** ಬೃಹತ್ ಕೈಗಾರಿಕೆ ಸಚಿವ

7ನೇ ಪುಟ ನೋಡಿ

ಮಸೂದೆಯಲ್ಲಿ ಇದ್ದದ್ದು... 7

ಪೋಸ್ಟ್ ಅಳಿಸಿ, ಹೊಸ ಪೋಸ್ಟ್ ಮಾಡಿದ ಮುಖ್ಯಮಂತ್ರಿ

'ರಾಜ್ಯದ ಖಾಸಗಿ ಉದ್ದಿಮೆಗಳ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳಲ್ಲಿ ಕನ್ನಡಿಗರಿಗೆ ಶೇಕಡ 100ರಷ್ಟು ಮೀಸಲಾತಿ ನೀಡುವ ಮಸೂದೆಗೆ ಸಂಪುಟ ಒಪ್ಪಿಗೆ ನೀಡಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಸಂಜೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು. ಆದರೆ ಆ ಪೋಸ್ಟ್ ಅನ್ನು ಅಳಿಸಿ, ಮತ್ತೆ ಮತ್ತೆ ಹೊಸ ಪೋಸ್ಟ್ ಮಾಡಿದರು.

ಉದ್ಯಮಿಗಳಿಂದ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ ಬುಧವಾರ ಮಧ್ಯಾಹ್ನ ಆ ಪೋಸ್ಟ್ ಅನ್ನು ಸಿದ್ದರಾಮಯ್ಯ ಅಳಿಸಿದರು. ಸಂಜೆಯ ವೇಳೆಗೆ ಮತ್ತೊಂದು ಪೋಸ್ಟ್‌ನಲ್ಲಿ, 'ಖಾಸಗಿ ಕೈಗಾರಿಕೆಗಳು, ಇತರೆ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆಡಳಿತಾತ್ಮಕ ಹುದ್ದೆಗಳಲ್ಲಿ ಶೇ 50 ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಲ್ಲಿ ಶೇ 75 ಮೀಸಲಾತಿ ನಿಗದಿಪಡಿಸುವ ಮಸೂದೆಗೆ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ' ಎಂದು ತಿಳಿಸಿದರು.

7ನೇ ಪುಟ ನೋಡಿ

> **ಇದು ತಾರತಮ್ಯದಿಂದ ಕೂಡಿದ ಮತ್ತು ಪ್ರತಿಗಾಮಿ ಸ್ವರೂಪದ ಮಸೂದೆ. ಇದರ ಬದಲಿಗೆ ಕನ್ನಡಿಗರ ಉದ್ಯೋಗಾರ್ಹತೆ ಹೆಚ್ಚಿಸಲು ಅವರಿಗೆ ಅಗತ್ಯ ವೃತ್ತಿಪರ ತರಬೇತಿ ನೀಡಿ**
> **ಮೋಹನದಾಸ್ ಪೈ**
> ಮಣಿಪಾಲ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ

> **ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂದು, ಐಟಿ ಸೇವೆಯಲ್ಲಿ ನಮ್ಮ ಅಗ್ರಸ್ಥಾನಕ್ಕೆ ಧಕ್ಕೆ ಮಾಡಿಕೊಳ್ಳಲಾಗದು. ಪ್ರತಿಭಾನ್ವಿತರ ಆಯ್ಕೆಗೆ ಅವಕಾಶವಿರಬೇಕು**
> **ಕಿರಣ್ ಮಜುಂದಾರ್ ಶಾ**
> ಬಯೋಕಾನ್ ಮುಖ್ಯಸ್ಥೆ

> **ಸ್ಥಳೀಯರಿಗೆ ಮೀಸಲಾತಿಯ ಮೇಲ್ವಿಚಾರಣೆಗೆ ಕಂಪನಿಗಳಲ್ಲಿ ಸರ್ಕಾರಿ ಅಧಿಕಾರಿಗಳನ್ನು ನಿಯೋಜನೆ ಮಾಡಿಬಿಡಿ. ದೂರದೃಷ್ಟಿಯಿಲ್ಲದ ಈ ನಡೆ, ಉದ್ಯಮಗಳಿಗೆ ಮಾರಕ**
> **ಆರ್.ಕೆ.ಮಿಶ್ರಾ**
> ಅಸೋಚಾಮ್ ಸಹ-ಅಧ್ಯಕ್ಷ

> **ಈ ನಡೆಯನ್ನು ಸ್ವಾಗತಿಸುತ್ತೇವೆ. ಆದರೆ, ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರಲು ಪ್ರತಿಭಾನ್ವಿತರ ಅಗತ್ಯವಿದೆ. ಹೀಗಾಗಿ ಮೀಸಲಾತಿ ಪ್ರಮಾಣವನ್ನು ಶೇ 25ಕ್ಕೆ ಇಳಿಸಬೇಕು**
> **ರಮೇಶ್ ಚಂದ್ರ ಲಹೋಟಿ**
> ಅಧ್ಯಕ್ಷರು, ಎಫ್‌ಕೆಸಿಸಿಐ

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಕಾಯ್ದೆ ಉಲ್ಲಂಘಿಸಿ ₹400 ಕೋಟಿ ಬಳಕೆ

ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರ: ಟೆಂಡರ್ ಕರೆಯದೇ ಸಾಮಗ್ರಿ ಪೂರೈಕೆ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ, ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರ ₹400 ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗಳನ್ನು ಕೈಗೊಂಡಿದೆ.

ಕರ್ನಾಟಕ ರಾಜ್ಯ ರಾಜೀವ್ ಗಾಂಧಿ ವಸತಿ ನಿಗಮದ ಅಧೀನದಲ್ಲಿರುವ ಹ್ಯಾಬಿಟೇಟ್ ಕೇಂದ್ರವು ನಿಗಮದ ಕೆಲಸಗಳೂ ಸೇರಿ ವಿವಿಧ ಇಲಾಖೆಗಳ ಕೋರಿಕೆಯ ಮೇರೆಗೆ ಮನೆ, ಕಟ್ಟಡಗಳು, ರಸ್ತೆ ಸೇರಿದಂತೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುತ್ತದೆ.

10ನೇ ಪುಟ ನೋಡಿ

ಒಂದು ಯಂತ್ರಕ್ಕೆ ₹3.43 ಲಕ್ಷ

ಕೆಕೆಆರ್‌ಡಿಬಿ ಅನುದಾನ ಬಳಸಿಕೊಂಡು ಹ್ಯಾಬಿಟೇಟ್ ಕೇಂದ್ರ ಶಾಲೆಗಳಿಗೆ ಪೂರೈಸಿರುವ ಪ್ರತೀ ಶುದ್ಧ ಕುಡಿಯುವ ನೀರಿನ ಘಟಕದ ಬೆಲೆ ₹3.43 ಲಕ್ಷ. ಮಾರುಕಟ್ಟೆ ದರಕ್ಕೂ, ಖರೀದಿ ದರಕ್ಕೂ ಅಜಗಜಾಂತರವಿದೆ. ಸ್ಮಾರ್ಟ್ ತರಗತಿಗಳಿಗೆ ಅಗತ್ಯವಾದ ಸಾಮಗ್ರಿಗಳ ಪೂರೈಕೆ ಸೇರಿದಂತೆ ಎಲ್ಲದರಲ್ಲೂ ಅವ್ಯವಹಾರ ನಡೆದಿದೆ. 4 (ಜಿ) ವಿನಾಯತಿ ದುರ್ಬಳಕೆ ಮಾಡಿಕೊಂಡು, ಟೆಂಡರ್ ಕರೆಯದೇ ನೇರವಾಗಿ ಸಾಮಗ್ರಿಗಳನ್ನು ಖರೀದಿ ಮಾಡಿರುವುದು ಅವ್ಯವಹಾರಕ್ಕೆ ದಾರಿಯಾಗಿದೆ. ಸರ್ಕಾರ ಇದಕ್ಕೆ ಕಾರಣರಾದ ಹ್ಯಾಬಿಟೇಟ್ ಕೇಂದ್ರದ ನಿರ್ದೇಶಕರು, ಯೋಜನಾ ನಿರ್ದೇಶಕರು ಹಾಗೂ ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಕ್ರಮ ಕೈಗೊಳ್ಳಬೇಕು. ತನಿಖೆಗೆ ಆದೇಶಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ನಾಗೇಶ್ ಒತ್ತಾಯಿಸಿದ್ದಾರೆ.

> **ಶುದ್ಧ ಕುಡಿಯುವ ನೀರಿನ ಘಟಕ ಸೇರಿದಂತೆ ಯಾವುದೇ ಅನುಷ್ಠಾನದಲ್ಲೂ ಲೋಪವಾಗಿಲ್ಲ, ಅವ್ಯವಹಾರ ನಡೆದಿಲ್ಲ. ನಿಯಮದಂತೆ ಕ್ರಮವಹಿಸಲಾಗಿದೆ**
> **ಎನ್. ಸುಶೀಲಮ್ಮ,**
> ವ್ಯವಸ್ಥಾಪಕ ನಿರ್ದೇಶಕಿ, ರಾಜೀವ್ ಗಾಂಧಿ ವಸತಿ ನಿಗಮ





ಭೋವಿ ಗುರುಪೀಠ; ಕರುಣೆಯ ಕಡಲು...

ಮನದಲ್ಲಿ ಶ್ರೀ ಸಿದ್ಧರಾಮೇಶ್ವರರ ವಿಚಾರಗಳನ್ನೇ ತುಂಬಿಕೊಂಡಿರುವ ಶ್ರೀಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ, ಭೋವಿ ಗುರುಪೀಠದ ಪೀಠಾಧ್ಯಕ್ಷ ಶ್ರೀಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ನಡೆದ ಹಾದಿಯಲ್ಲಿ ಜ್ಞಾನದ ಬೆಳಕಿದೆ. ಸಮಾಜ ಕಟ್ಟುವ ಕ್ರಿಯೆಯಲ್ಲಿ ಸಹಸ್ರ ಸವಾಲುಗಳನ್ನೆದುರಿಸಿ ಸಾಗಿ ಬಂದಿರುವ ಅವರು ಹಲವು ಮೈಲಿಗಲ್ಲು ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಮುದಾಯದ ಜನರಲ್ಲಿದ್ದ ಮುಗ್ಧ ಭಕುತಿಗೆ ಜ್ಞಾನದ ಬೆಸುಗೆ ಹಚ್ಚಿ ಸಂಸ್ಕಾರದ ಸ್ಪರ್ಶ ನೀಡಿದ್ದಾರೆ. ದೇಹ ದಂಡಿಸಿ, ರಟ್ಟೆಯಲ್ಲಿರುವ ಬಲವನ್ನೇ ನಂಬಿ ಬದುಕುವ ಶ್ರಮಜೀವಿಗಳ ಮನಸ್ಸುಗಳಿಗೆ ಅಧ್ಯಾತ್ಮದ ಉಳಿಪೆಟ್ಟು ನೀಡಿ ಸೇವೆಯ ಮೂರುತಿ ಕೆತ್ತಿದ್ದಾರೆ. ಮೂಢನಂಬಿಕೆ, ಕಂದಾಚಾರ, ದುಶ್ಚಟಗಳಿಂದ ಬಳಲಿದ್ದ ಭಾವನೆಗಳಿಗೆ ಗುರು ಕರುಣೆಯ ದೃಷ್ಟಿ ಬೀರಿ ಹೊಸ ದಾರಿ ತೋರಿಸಿದ್ದಾರೆ. ಕರುಣೆಯ ಕಡಲಾಗಿ ಎಲ್ಲರನ್ನೂ, ಎಲ್ಲವನ್ನೂ ತಮ್ಮತ್ತ ಸೆಳೆದುಕೊಳ್ಳುತ್ತಾ ಸಮಾಜದಲ್ಲಿ ತಮ್ಮವರ ಗೌರವ, ಘನತೆಯ ಬದುಕಿಗಾಗಿ ಮುಂದಡಿ ಇಡುತ್ತಿದ್ದಾರೆ.

ವಡ್ಡರೆಂದರೆ ಗುಡ್ಡರು, ಶಾಪಗ್ರಸ್ತರು, ಗುರುವನ್ನು ಗುಂಡಿಯಲ್ಲಿ ಮುಚ್ಚಿದವರು ಎಂಬೆಲ್ಲಾ ಭಾವನೆಗಳಿದ್ದ ಹೊತ್ತಿನಲ್ಲಿ ಶ್ರೀ ಸಿದ್ಧರಾಮೇಶ್ವರರ ವಚನಗಳ ಮುಲಾಮು ಹಚ್ಚಿ ಹೊಸ ದೃಷ್ಟಿಕೋನ ಕೊಟ್ಟವರು ಶ್ರೀಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ. ದುಡಿತ ಮತ್ತು ಕುಡಿತದಿಂದ ಸಂಕುಚಿತವಾಗಿದ್ದ ಮನೋಭಾವಗಳಿಗೆ ಆಶೀರ್ವಚನಗಳ ಮೂಲಕ ಹೊಸ ದಿಕ್ಕು ತೋರಿಸಿದವರು. ಮನಸ್ಸು, ಮನೆ, ಗ್ರಾಮ, ಪಟ್ಟಣ, ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದಲ್ಲೂ ಶ್ರೀ ಸಿದ್ದರಾಮೇಶ್ವರರ ಚಿಂತನೆಗಳ ತಂಗಾಳಿ ಸೂಸಿ ಹೊರ ಪರಿಮಳ ಸೃಷ್ಟಿಸಿದವರು. ನಾರಾಯಣ ಗುರುವಿನ ವಿದ್ಯೆಯೇ ಸ್ವಾತಂತ್ರ್ಯ, ಡಾ.ಬಿ.ಆರ್.ಅಂಬೇಡ್ಕರ್ ಶಿಕ್ಷಣದಿಂದಲೇ ಬದಲಾವಣೆ ಮಾತುಗಳಿಗೆ ಅನುಗುಣವಾಗಿ ಮಠವನ್ನು ವಿದ್ಯಾಕಾಶಿಯನ್ನಾಗಿ ಮಾಡಿರುವ ಸ್ವಾಮೀಜಿ ಯುವ ಪೀಳಿಗೆಗೆ ವೇದವಾಕ್ಯ ನೀಡಿದವರು.

ಶ್ರೀಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ನಡೆದ ಹಾದಿಯಲ್ಲಿ ಹೂವುಗಳಿರದಿದ್ದರೂ, ಕಲ್ಲು, ಮುಳ್ಳು ಚುಚ್ಚಿ ರಕ್ತ ಚೆಲ್ಲಿದರೂ, ಮುಂದಡಿ ಹೆಜ್ಜೆ ಇಟ್ಟವರು ನಿರ್ಲಕ್ಷ್ಯ ನೋಟ ಬೀರಿದರೂ ಎಲ್ಲವನ್ನೂ ನುಂಗಿ, ಸಹಿಸಿ ಸಮಾಜಕ್ಕೆ ಸಮಾಜಕ್ಕೆ ಸಿಹಿ ಕಂಚುವ ಕೆಲಸ ಮಾಡುತ್ತಲಿದ್ದಾರೆ. ಅವರ ಕಣ್ಣುಗಳ ನೋಟದಲ್ಲೇ ಒಂದು ಮೊನಚಾದ ಸೆಳೆತವಿದ್ದು ತಮ್ಮ ಜ್ಞಾನ ಶಕ್ತಿ, ಅಂತಃಕರಣ ಶಕ್ತಿ, ಅಪರಿಮಿತಿ ವಿಶ್ವಾಸ, ಭರವಸೆಗಳ ಮೂಲಕ ಸಮಾಜಕ್ಕೆ ದಾರಿದೀಪವಾಗಿ ಬೆಳಗುತ್ತಿದ್ದಾರೆ.

ಗುರುಸ್ಥಾನ ಅಲಂಕರಿಸಿದ ಇಮ್ಮಡಿಶ್ರೀ:

'ಆರೇನೆಂದರೂ ಓರಂತಿಪ್ಪುದೇ ಸಮತೆ;
ಆರು ಜರೆದರೂ ಅವರನ್ನ ಮನದ ಕಾಳಿಕೆಯ
ಕಳೆದರೆಂಬುದೇ ಸಮತೆ;
ಆರು ಸ್ತೋತ್ರ ಮಾಡಿದರೂ ಅವರೆನ್ನ ಜನ್ಮದ
ಹಗೆಗಳಂತೆ ಸಮತೆ,
ಇಂತಿದು ಗುರುಕಾರುಣ್ಯ.
ಮನವಚನಕಾಯದಲ್ಲಿ ಅಹಿತವಿಲ್ಲದೆ,
ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ, ನಿಮ್ಮವರ
ನೀನೆಂಬುದೇ ಸಮತೆ'

ಹನ್ನೆರಡನೆಯ ಶತಮಾನದ ಶಿವಶರಣ ಸಿದ್ದರಾಮೇಶ್ವರರು ಕಾಯಕ ಮಾಡುತ್ತಾ ಜನರನ್ನು ಒಗ್ಗೂಡಿಸಿಕೊಂಡು ಸಮುದಾಯದ ಬದುಕಿಗೆ ಹಗಲಿರುಳು ಶ್ರಮಿಸಿದರು. ಯಾವುದೇ ತಾರತಮ್ಯವಿಲ್ಲದೆ ದುರ್ಬಲರಿಗೂ ಸಮಾಜದಲ್ಲಿ ಸಮಾನ ಅವಕಾಶ, ಸೌಲಭ್ಯ ಮತ್ತು ಸೇವೆ ಲಭ್ಯವಾಗಬೇಕು ಎಂದು ಬರೆದ 'ಆರೇನೆಂದರೂ ಓರಂತಿಪ್ಪುದೇ ಸಮತೆ' ವಚನಕ್ಕೆ ಕಳಸವಿಟ್ಟಂತೆ

ರಜತ ಮಹೋತ್ಸವ ಸಮಾರಂಭ ಜು.20ಕ್ಕೆ

ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ, ಭೋವಿಗುರುಪೀಠದ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ದೀಕ್ಷಾ ರಜತ ಮಹೋತ್ಸವ ಸಮಾರಂಭ ಜುಲೈ 20ರಂದು ಚಿತ್ರದುರ್ಗದ ಭೋವಿ ಗುರುಪೀಠದ ಆವರಣದಲ್ಲಿ ನಡೆಯಲಿದೆ. ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹಾಗೂ ಕೇಂದ್ರ ಮತ್ತು ರಾಜ್ಯ ಸಚಿವರು, ಶಾಸಕರು ಭಾಗವಹಿಸುವರು.

ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ದೀಕ್ಷಾ ರಜತ ಮಹೋತ್ಸವ

25 ವರ್ಷದಿಂದ ಭೋವಿ ಸಮುದಾಯದ ಏಳ್ಗೆಗೆ ಹಗಲಿರುಳು ಶ್ರಮಿಸುತ್ತಿದ್ದಾರೆ ಶ್ರೀಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ, ಭೋವಿ ಗುರುಪೀಠದ ಪೀಠಾಧ್ಯಕ್ಷ ಶ್ರೀಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ.

'ನಡೆನುಡಿ ಗಳೊಂದಾದವರಿಗೊಲಿವೆ ಕಂಡಯ್ಯಾ: ನುಡಿಯೆ ಬ್ರಹ್ಮವಾದವರ ನೀನೊಲ್ಲೆಯಯ್ಯಾ

ಮೃಡನೆ, ಕಪಿಲಸಿದ್ಧಮಲ್ಲಿಕಾರ್ಜುನಲಿಂಗ ನುಡಿಯ ಬ್ರಹ್ಮಂಗಳಿಂದಪ್ಪುದೇನೊ.
ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯಾ
ನುಡಿಯೆ ಬ್ರಹ್ಮವಾದವರ ನೀನೊಲ್ಲೆಯಯ್ಯಾ
ಮೃಡನೆ, ಕಪಿಲಸಿದ್ಧಮಲ್ಲಿಕಾರ್ಜುನಲಿಂಗ
ನುಡಿಯ ಬ್ರಹ್ಮಂಗಳಿಂದಪ್ಪುದೇನೊ'

ಅಸಂಘಟಿತವಾಗಿದ್ದ ಭೋವಿ ಸಮುದಾಯದ ಕೋಲ್ಮಿಂಚಾಗಿ ಕಾಣಿಸಿಕೊಂಡ 37 ವರ್ಷ ವಯಸ್ಸಿನ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, 'ನಡೆನುಡಿಗಳೊಂದಾದವರಿಗೊಲಿವೆ ಕಂಡಯ್ಯಾ..' ಎಂಬ ವಚನದಂತೆ ಮಾತಿನ ಜಾಣ್ಮೆ ಮರೆಯದೆ ತಾನಾಡುವ ಪ್ರತಿ ನುಡಿಗೆ ಕಂಕಣಬದ್ಧವಾಗಿ ಹಿಡಿದ ಕೆಲಸವನ್ನು ಪೂರ್ಣಗೊಳಿಸುವವರೆಗೂ ವಿಶ್ರಮಿಸಿದೆ ಸಮಾಜಕ್ಕೆ ಒಳಿತನ್ನು ಮಾಡುತ್ತಿದ್ದಾರೆ.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಆಗಿ ಜಗತ್ತಿಗೆ ತಿಳಿಯುವ ಮುನ್ನ ಪೂರ್ವಶ್ರಮದಲ್ಲಿ ನಿಜಗುಣೇಶ್ವರಸ್ವಾಮಿ ಎಂಬ ಹೆಸರಲ್ಲಿ ಬಾಲ್ಯವನ್ನು ಕಳೆದರು. 1986 ಜುಲೈ 18ರಂದು ದಾವಣಗೆರೆಯಲ್ಲಿ ಜನಿಸಿದ ಸ್ವಾಮೀಜಿ ಕುಟುಂಬದಲ್ಲಿ ಮುದ್ದು ಮಗನಾಗಿ ಬೆಳೆದವರು. ಮನೆಯಲ್ಲಿ ಅಧ್ಯಾತ್ಮ ವಾತಾವರಣವಿದ್ದ ಕಾರಣಕ್ಕೆ ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಬಾಲ್ಯದಲ್ಲೇ ಪೂಜೆ, ಪಾಠ, ಪ್ರವಚನಗಳು ಕರಗತವಾಗಿದ್ದವು.

ನಿತ್ಯದ ಆಟೋಪಚಾರ ಮುಗಿದ ಬಳಿಕ ರಾಮಾಯಣ, ಮಹಾಭಾರತದ ಕತೆ ಕೇಳುತ್ತಾ ನಿದ್ದೆಗೆ ಜಾರುತ್ತಿದ್ದರು. ದಾವಣಗೆರೆಯಲ್ಲಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರಿಗೆ ಪ್ರಸಾದ ನೀಡಲು ಮಠಕ್ಕೆ ಹೋಗುತ್ತಿದ್ದ ಇವರಿಗೆ ಗುರುಗಳು ನಿಜಗುಣ ಶಿವಯೋಗಿ, ವಿವೇಕಾನಂದ, ಸಿದ್ಧರಾಮೇಶ್ವರ ಜೀವನ ಚರಿತೆ, ಜ್ಞಾನ ಮಾರ್ಗದ 'ಜ್ಞಾನ ಸಿಂಧು' ಕೃತಿಗಳನ್ನು ಓದಲು ನೀಡುತ್ತಿದ್ದರು.

ಕಠಿಣ ಭಾಷೆಯನ್ನು ಅರ್ಥ ಮಾಡಿಕೊಂಡು ಗುರುಗಳು ಕೇಳುತ್ತಿದ್ದ ಪ್ರಶ್ನೆಗಳಿಗೆ ನಿರರ್ಗಳವಾಗಿ ಉತ್ತರ ನೀಡುತ್ತಿದ್ದರು. ಬಾಲಕನ ನಡೆ-ನುಡಿ ಗಮನಿಸಿದ ಸಿದ್ಧರಾಮೇಶ್ವರ ಸ್ವಾಮೀಜಿ, ಸಮುದಾಯವನ್ನು ಮುನ್ನಡೆಸುವ ಶಕ್ತಿ ಬಾಲಕನಲ್ಲಿದೆ ಎಂಬುದನ್ನು ಅರಿತರು. ತಮ್ಮ ಮನದ ಇಂಗಿತವನ್ನು 'ನಿಜಗುಣೇಶ್ವರಸ್ವಾಮಿ' ಅವರ ತಂದೆಯ ಬಳಿ ಪ್ರಸ್ತಾಪಿಸುತ್ತಾರೆ. ಒಂದಿಷ್ಟು ಚರ್ಚೆಗಳು ನಡೆದ ಬಳಿಕ 1998ರಲ್ಲಿ ದಾವಣಗೆರೆಯ ಸಿದ್ಧರಾಮೇಶ್ವರ ಸ್ವಾಮೀಜಿ ಅವರಿಂದ ಲಿಂಗದೀಕ್ಷೆ (ಲಾಂಚನ ದೀಕ್ಷೆ) ಪಡೆದ ಗುರುಗಳು ಅತಿ ಕಿರಿಯ ವಯಸ್ಸಿನಲ್ಲಿ ಸಮಾಜ ಸೇವೆಗೆ ಸಮರ್ಪಣೆ ಮಾಡಿಕೊಂಡರು. ಈ ಸುಸಂದರ್ಭಕ್ಕೆ ಈಗ ಬೆಳ್ಳಿ ಮಹೋತ್ಸವದ (25 ವರ್ಷ) ಸಂಭ್ರಮ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

1999ರಲ್ಲಿ ಡಾ.ಶಿವಮೂರ್ತಿ ಮುರುಘಾ ಶರಣರ ಅಮೃತ ಹಸ್ತದಿಂದ ಸನ್ಯಾಸ ದೀಕ್ಷೆ ಪಡೆದು ಬಸವತತ್ವ ಮೈಗೂಡಿಸಿಕೊಂಡರು. ಬಸವಾದಿ ಶರಣರ ದಾರಿಯಲ್ಲಿ ಸಾಗುತ್ತ ಮೌಢ್ಯ, ಕಂದಾಚಾರ ಹೋಗಲಾಡಿಸಿ ಭೋವಿ ಸಮುದಾಯಕ್ಕೆ ದೀಪವಾದರು. ವಲಸೆ ಪ್ರವೃತ್ತಿ ಹೊಂದಿದ ಜನರ ಬದುಕು ಹಸನಗೊಳಿಸುವ ಪಣತೊಟ್ಟರು. ಅಧ್ಯಾತ್ಮದ ದೀವಿಗೆ ಹಿಡಿದು ಮುಂದಡಿ ಇಡುತ್ತಿರುವ ಪ್ರತಿ ಹೆಜ್ಜೆ ಸಮುದಾಯದ ಏಳಿಗೆಯ ಮೆಟ್ಟಿಲಾಗುತ್ತಿದೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಗುರುಗಳು ಅವಿರತವಾಗಿ ಶ್ರಮಿಸುತ್ತಿರುವ ರೀತಿಗೆ ಸಮುದಾಯ ಋಣಿಯಾಗಿದೆ.

ಬೆರಳಿಗೆ ಬಿದ್ದ ಉಳಿ ಪೆಟ್ಟು: ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಪೂರ್ವಶ್ರಮದಲ್ಲಿ ಸಾಮಾನ್ಯರಂತೆ ಬಾಲ್ಯ ಕಳೆದವರು. ಸಾಗರದಂತೆ ತಂದೆ, ತಾಯಿ, ಅಕ್ಕನ ಪ್ರೀತಿ ಇವರಿಗಿತ್ತು. ಕಲ್ಲಿನ ಶಿಲ್ಪ ಕಲೆಯ ವೃತ್ತಿ ಮಾಡುತ್ತಿದ್ದ ತಂದೆ ಕಲ್ಲಿಗೆ ಉಳಿಯಿಟ್ಟು ಸುತ್ತಿಗೆಯಿಂದ ಹೊಡೆಯುವುದನ್ನು ಗಮನಿಸಿದ ಇವರು ತಾವು ತಂದೆಯಂತೆ ಶಿಲ್ಪಿಯಾಗುವ ಆಸಕ್ತಿ ಬೆಳೆಸಿಕೊಂಡವರು.

ಹೀಗೆ ಉಳಿ ಹಿಡಿದಿದ್ದ ಕೈ ಬೆರಳಿಗೆ ಸುತ್ತಿಗೆಯ ಪೆಟ್ಟು ಬಿದ್ದಿತ್ತು. ಮಗನಿಗೆ ಆಗಿದ್ದ ಗಾಯ ಕಂಡ ತಾಯಿ ಶಿಕ್ಷಣದತ್ತ ಗಮನ ಹರಿಸುವಂತೆ ಸೂಚಿಸಿದರು. ಶಿಲೆಯನ್ನು ಕಟೆದು ಮೂರ್ತರೂಪ ನೀಡುವ ಕಲೆಯನ್ನು ಸಿದ್ಧಿಸಿಕೊಳ್ಳುವ ಅಪೇಕ್ಷೆ ಅಲ್ಲಿಯೇ ಉಳಿಯಿತು.



ಭರತನಾಟ್ಯದಲ್ಲಿ ಪರಿಣತಿ: ಅಧ್ಯಾತ್ಮದಲ್ಲಿ ತೀವ್ರ ಒಲವು ಹೊಂದಿದ್ದ ನಿಜಗುಣೇಶ್ವರಸ್ವಾಮಿ ಅವರಿಗೆ ಲಲಿತ ಕಲೆಗಳೆಂದರೆ ಅಚ್ಚುಮೆಚ್ಚು. ತಂದೆ ಶಿಲ್ಪ ಕಲೆ, ಭರತನಾಟ್ಯದಲ್ಲಿ ಪರಿಣಿತಿ ಸಾಧಿಸಿದ್ದ ಕಾರಣ ಕಲೆ ರಕ್ತಗತವಾಗಿ ಬಂದಿದೆ. ಶಾಲೆಗಳಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಸದಾ ಒಂದು ಹೆಜ್ಜೆ ಮುಂದೆ ಇರುತ್ತಿದ್ದರು.

ಪ್ರಬಂಧ, ಆಶುಭಾಷಣ, ಚರ್ಚಾಸ್ಪರ್ಧೆ, ಚಿತ್ರಕಲೆ, ಮಣ್ಣಿನ ಕಲಾಕೃತಿ ರಚನೆ, ಭರತನಾಟ್ಯ, ಹಾಡು, ನೃತ್ಯ ಸ್ಪರ್ಧೆಯಲ್ಲಿ ಸದಾ ಪ್ರಥಮ ಸ್ಥಾನ ಖಚಿತವಾಗಿತ್ತು. ಕಲೆಯಲ್ಲಿಯೂ ಇವರು ಅಧ್ಯಾತ್ಮವನ್ನೇ ಧ್ಯಾನ ಮಾಡುತ್ತಿದ್ದರು. ನಾಮಬಲಕ್ಕೆ ತಕ್ಕಂತೆ ವ್ಯಕ್ತಿತ್ವ ರೂಪುಗೊಂಡಿದ್ದನ್ನು ಕಂಡು ಶಿಕ್ಷಕರು ಚಕಿತರಾಗಿದ್ದರು.

ವಿದ್ಯಾರ್ಥಿ ವೇತನದಲ್ಲೇ ಶಿಕ್ಷಣ: ಬಾಲ್ಯದಿಂದಲೂ ಓದಿನಲ್ಲಿ ಅಗ್ರಸ್ಥಾನದಲ್ಲಿದ್ದ ನಿಜಗುಣೇಶ್ವರಸ್ವಾಮಿ 'ಮೆರಿಟ್' ವಿದ್ಯಾರ್ಥಿ ವೇತನದಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿದರು. ದಾವಣಗೆರೆ ಹಾಗೂ ಚಿತ್ರದುರ್ಗದಲ್ಲಿ ಪ್ರಾಥಮಿಕ, ಪ್ರೌಢ, ಪದವಿ ಶಿಕ್ಷಣ ಪೂರ್ಣಗೊಳಿಸಿದರು.

ಕಲಾ ವಿಭಾಗದಲ್ಲಿ ಪದವಿಪೂರ್ವ ಶಿಕ್ಷಣ ಮುಗಿಸಿ, ಐಚ್ಛಿಕ ಕನ್ನಡ, ರಾಜ್ಯಶಾಸ್ತ್ರ, ಇತಿಹಾಸದಲ್ಲಿ ಪದವಿ ಪೂರ್ಣಗೊಳಿಸಿದ್ದಾರೆ. ಬಾಲ್ಯದಿಂದಲೇ ಕನ್ನಡದಲ್ಲಿ ಪ್ರಬುದ್ಧತೆ ಸಾಧಿಸಿದ್ದ ಇವರಿಗೆ ಕೇಶಿರಾಜನ ಶಬ್ಧಮಣಿದರ್ಪಣದ ಸೂತ್ರಗಳು ಇಂದಿಗೂ ಸುಲಲಿತ.

ಬೆಳ್ಳಿ ಮಹೋತ್ಸವದ 25 ಮೈಲುಗಲ್ಲು

- ಲಾಂಛನ ದೀಕ್ಷೆ 1999
- ದಾವಣಗೆರೆಯ ಸಿದ್ದರಾಮೇಶ್ವರ ರಥೋತ್ಸವವನ್ನು ಧಾರ್ಮಿಕ ಸಾಂಸ್ಕೃತಿಕ ಕೇಂದ್ರವಾಗಿ ಪರಿವರ್ತನೆ
- ಮಧ್ಯ ಕರ್ನಾಟಕದಲ್ಲಿ ಗುರುಪೀಠ ಸ್ಥಾಪನೆ
- ಬಾಗಲಕೋಟೆಯಲ್ಲಿ ಪಟ್ಟಾಧಿಕಾರ
- ಹಳ್ಳಿ, ಹಟ್ಟಿ, ಗ್ರಾಮ, ಕಾಲೊನಿಗಳಲ್ಲಿ ಸಿದ್ದರಾಮೇಶ್ವರ ಸಂದೇಶ ಯಾತ್ರೆ
- ದುಶ್ಚಟಗಳ ಭಿಕ್ಷೆ, ಸದ್ಗುಣಗಳ ದೀಕ್ಷೆ. ಹಳ್ಳಿಗಳಲ್ಲಿ ಪ್ರಾಣಿ ಬಲಿ ನಿಷೇಧ ಕುರಿತ ಜಾಗೃತಿ
- ಗದಗ, ಶಿವಮೊಗ್ಗ, ದಾವಣಗೆರೆ, ಬಾಗಲಕೋಟೆ, ಚಿತ್ರದುರ್ಗಗಳಲ್ಲಿ ಕಟ್ಟಡ ನಿರ್ಮಾಣ
- ಉಚಿತ ಪ್ರಸಾದ ನಿಲಯ, ವಸತಿ, ಶಿಕ್ಷಣ ಆರಂಭ
- ರಾಜ್ಯ ಮಟ್ಟದ ಸಮಾವೇಶಗಳು
- ಶ್ರೀ ಸಿದ್ದರಾಮೇಶ್ವರ ಜಯಂತಿಗೆ ಹೊಸ ಆಯಾಮ
- ರಾಷ್ಟ್ರ ಮಟ್ಟದ ಸಂಘಟನೆಗೆ ಚಾಲನೆ
- ಭೋವಿ ಅಭಿವೃದ್ಧಿ ನಿಗಮ ಸ್ಥಾಪನೆಗೆ ಪರಿಣಾಮಕಾರಿ ದಿಕ್ಸೂಚಿ
- ಪ್ರವಾಹ ಪ್ರದೇಶದ ಸಂತ್ರಸ್ತರಿಗೆ ಆಸರೆ
- ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಸಹಾಯ
- ಜನಾಂಗದ ಅಧ್ಯಯನ ಪ್ರವಾಸ
- ಮೀಸಲಾತಿ ಹೋರಾಟ
- ಕೋವಿಡ್ ಸಂದರ್ಭದಲ್ಲಿ ಆಹಾರ ಧಾನ್ಯದ ಕಿಟ್ ವಿತರಣೆ
- ವಿದೇಶಗಳಲ್ಲಿ ವಿದ್ಯಾಭ್ಯಾಸಕ್ಕೆ ಮಾರ್ಗದರ್ಶನ
- ಯುವಕರಿಗೆ ಸಮರ್ಥ ನಾಯಕತ್ವ ಹೊಂದಲು ಕಾರ್ಯಾಗಾರ
- ಜಾತಿ ಕಲಹಗಳ ಶಮನ, ಸೌಹಾರ್ದ ಗ್ರಾಮಗಳ ನಿರ್ಮಾಣ
- ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಆಧ್ಯಾತ್ಮಿಕ ಪ್ರಗತಿಗೆ ನಿರಂತರ ಸೇವೆ. ಮಕ್ಕಳಿಗೆ ವೈಚಾರಿಕ ಪ್ರವಚನ ಸರಣಿ
- ಅನಾಥ, ಅಬಲೆಯರಿಗೆ ಆಶ್ರಯ
- ಗಣಿಗಾರಿಕೆಯಲ್ಲಿ ಭೋವಿ ಜನಾಂಗದವರಿಗೆ ಆದ್ಯತೆಗೆ ಒತ್ತಾಯ
- ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ರಕ್ತದಾನ ಶಿಬಿರ. ಅನುಯಾಯಿಗಳಿಂದ ರಕ್ತದಾನ ಮೈಲಿಗಲ್ಲು
- ರಾಷ್ಟ್ರೀಯ ಭೋವಿ, ಒಡ್ಡರ ಜನೋತ್ಸವ

ಧಾರ್ಮಿಕ ಔನ್ನತ್ಯದಲ್ಲಿ ಭೋವಿ ಗುರುಪೀಠ

ಗುರುಪರಂಪರೆ, ಮಠದ ಸಂಸ್ಕಾರಗಳಿಂದ ದೂರ ಉಳಿದಿದ್ದ ಭೋವಿ ಸಮುದಾಯವನ್ನು ಧಾರ್ಮಿಕ ತಳಹದಿಯ ಮೇಲೆ ಕಟ್ಟುವ ಸವಾಲು ಚಿಕ್ಕ ವಯಸ್ಸಿಗೆ ಸ್ವಾಮೀಜಿ ಹೆಗಲ ಮೇಲೆ ಬಿದ್ದಿತು. ಇಳಕಲ್‌ನ ಯಂಕಪ್ಪ ಬಂಡಿ ಅವರು ಸಮುದಾಯಕ್ಕೆ ಗುರುಪೀಠ ಸ್ಥಾಪಿಸುವ ಪ್ರಸ್ತಾವ ಮುಂದಿಟ್ಟರು. ಇದಕ್ಕೆ ಸ್ಪಷ್ಟ ರೂಪ ನೀಡಿದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಗುರುಪೀಠ ಔನ್ನತ್ಯ ತಲುಪುವವರೆಗೆ ವಿರಮಿಸಿಲ್ಲ. ಗುರುಕುಲದಿಂದ ಸ್ವತಂತ್ರರಾಗಿ ಬಂದ ಸ್ವಾಮೀಜಿ 2009ರಲ್ಲಿ ಚಿತ್ರದುರ್ಗದ ಹೊರವಲಯದ ಗುಡಿಸಲಲ್ಲಿ ಮಠ ಆರಂಭಿಸಿದರು. ಆಗ ಸ್ವಾಮೀಜಿ ಅವರಿಗೆ ಹಾವು, ಚೇಳುಗಳೇ ಸ್ನೇಹಿತರಂತಿದ್ದವು. ಆರಂಭಿಕ ವರ್ಷಗಳಲ್ಲಿ ಗುಡಿಸಲು ನಿವಾಸಿಗಳಾಗಿ ಮಠದ ಪರಂಪರೆಯನ್ನು ಶ್ರೀಮಂತಗೊಳಿಸಲು ಮುಂದಡಿ ಇಟ್ಟರು. ಚಿತ್ರದುರ್ಗ ಗುರುಪೀಠಕ್ಕೆ ಮೊದಲ, ದಾವಣಗೆರೆ ಮಠಕ್ಕೆ ಎರಡನೇ ಹಾಗೂ ಬಾಗಲಕೋಟೆಯ ಮೂಲ ಗುರುಪೀಠಕ್ಕೆ 3ನೇಯ ಪೀಠಾಧಿಪತಿಗಳಾಗಿ ಸಮುದಾಯ ಸಂಘಟಿಸಿದರು. ಚಿತ್ರದುರ್ಗದಲ್ಲಿ 2009ರಂದು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ರಾಜ್ಯ ಮಟ್ಟದ ಸಮಾವೇಶ ಆಯೋಜಿಸಿ ಸಮಾಜ ಸಂಘಟನೆಯ ಸಾಮರ್ಥ್ಯ ತೋರಿಸಿದರು. ನೂರಾರು ಮಠಾಧೀಶರ ನೇತೃತ್ವದಲ್ಲಿ ಬಾಗಲಕೋಟೆ ಮೂಲ ಗುರುಪೀಠಕ್ಕೆ 2010ರಲ್ಲಿ ಪಟ್ಟಾಧಿಕಾರ ನೆರವೇರಿತು. ಶಿವಮೊಗ್ಗ, ಗದಗ ಜಿಲ್ಲೆಗೂ ಶಾಖಾ ಮಠ ವಿಸ್ತರಿಸಿವೆ. ರಾಜ್ಯದ ಎಲ್ಲ ಜಿಲ್ಲೆಯಲ್ಲಿ ಶಾಖಾ ಮಠ ತೆರೆಯುವ ಅಪೇಕ್ಷೆ ಇಮ್ಮಡಿಶ್ರೀ ಅವರಿಗೆ ಇದೆ. ಭೋವಿ ಸಮುದಾಯ ಕಾಯಕ ಹಾಗೂ ಶ್ರಮಿಕ ವರ್ಗ. ಶಿಕ್ಷಣದ ಕೊರತೆಯಿಂದ ಮೌಢ್ಯ, ಕಂದಾಚಾರ ಹಾಸುಹೊಕ್ಕಾಗಿದೆ. ಮಠವನ್ನು ಧಾರ್ಮಿಕ, ವೈಚಾರಿಕ ಕೇಂದ್ರವಾಗಿ ರೂಪಿಸಬೇಕು ಎಂಬುದು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ ಗುರಿ. ಸಿದ್ದರಾಮೇಶ್ವರರ ವಚನಗಳನ್ನು ಅರ್ಥೈಸಿ ಪ್ರತಿ ಮನೆಗೆ ತಲುಪಿಸುವ ಉದ್ದೇಶವನ್ನು ಇಮ್ಮಡಿಶ್ರೀ ಹೊಂದಿದ್ದಾರೆ. ಬಡವರೇ ಹೆಚ್ಚಾಗಿರುವ ಸಮುದಾಯದಲ್ಲಿ ದಾನಿಗಳ ಸಂಖ್ಯೆ ವಿರಳ. ಮಠವನ್ನು ಉನ್ನತ ಮಟ್ಟಕ್ಕೆ ಏರಿಸಲು ಪಣತೊಟ್ಟಿರುವ ಗುರುಗಳು ಸರ್ವ ರೀತಿಯಲ್ಲಿ ಪ್ರಯತ್ನಿಸಿ ಮಠದ ಹೆಸರಿನಲ್ಲಿ ₹ 1 ಕೋಟಿಯನ್ನು ಠೇವಣಿ ಇಟ್ಟಿದ್ದಾರೆ. ಈ ಠೇವಣಿ ಮೊತ್ತವನ್ನು ₹ 100 ಕೋಟಿಗೆ ಹೆಚ್ಚಿಸುವ ಗುರಿ ಸ್ವಾಮೀಜಿ ಎದುರಿಗೆ ಇದೆ. ಈ ಠೇವಣಿಯಲ್ಲಿಯೇ ಮಠ ಮುನ್ನಡೆಯಬೇಕು ಎಂಬುದು ಸ್ವಾಮೀಜಿ ಕಾಳಜಿ.



ಮಕ್ಕಳ ಶೈಕ್ಷಣಿಕ ದತ್ತು: ಭೋವಿ ಗುರುಪೀಠವು ಸಮುದಾಯದ ಮಕ್ಕಳಿಗೆ ಆಶ್ರಯ ಕಲ್ಪಿಸಿದೆ. ಉಚಿತ ಊಟ, ವಾಸ್ತವ್ಯ ಹಾಗೂ ಶಿಕ್ಷಣ ನೀಡಿ ಸಮಾಜದ ಮುಖ್ಯವಾಹಿನಿಗೆ ಕರೆತರುವ ಮಹತ್ತರವಾದ ಜವಾಬ್ದಾರಿ ನಿಭಾಯಿಸುತ್ತಿದೆ. ಅನಾಥರು ಹಾಗೂ ಏಕಪೋಷಕ ಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಲಾಗಿದೆ. ಪದವಿ, ಎಂಜಿನಿಯರಿಂಗ್ ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತಿದೆ. ಆಟೊ ಚಾಲಕ ಹಾಗೂ ಕಲ್ಲು ಒಡೆಯುವ ಕಾಯಕದಲ್ಲಿರುವ ಇಬ್ಬರು ಭಕ್ತರ ಮಕ್ಕಳ ವೈದ್ಯಕೀಯ ಶಿಕ್ಷಣದ ವೆಚ್ಚವನ್ನು ಮಠ ಭರಿಸುತ್ತಿದೆ. ಈ ಸೇವಾ ಕಾರ್ಯಕ್ಕೆ ಭಕ್ತರು ಬೆನ್ನೆಲುಬಾಗಿ ನಿಂತಿದ್ದಾರೆ. ಮಠದ ನೆರವಿನಿಂದ ವ್ಯಾಸಂಗ ಮಾಡಿ ಉದ್ಯೋಗದಲ್ಲಿರುವವರು ಕಾಣಿಕೆ, ದೇಣಿಗೆ ರೂಪದಲ್ಲಿ ಕೃತಜ್ಞತೆ ಸಲ್ಲಿಸುತ್ತಿದ್ದಾರೆ. ಉದ್ಯೋಗ ಅರಸಿ ಗುಳೆ ಹೋಗುವ ಭೋವಿ ಜನಾಂಗ ಶಿಕ್ಷಣದತ್ತ ಗಮನಹರಿಸಿದ್ದು ಕಡಿಮೆ. ಸಮುದಾಯದ ಮಕ್ಕಳನ್ನು ಅಕ್ಷರಸ್ಥರನ್ನಾಗಿ ಮಾಡಲು ಸ್ವಾಮೀಜಿ ಶಿಕ್ಷಣ ಸಂಸ್ಥೆಯೊಂದನ್ನು ಆರಂಭಿಸಿದ್ದಾರೆ. ಚಿಕ್ಕದಾಗಿ ಆರಂಭವಾದ ಶಿಕ್ಷಣ ಸಂಸ್ಥೆ, ದಶಕದಲ್ಲಿ ದೊಡ್ಡದಾಗಿ ಬೆಳೆದಿದೆ. ಎಲ್‌ಕೆಜಿಯಿಂದ ಪದವಿಪೂರ್ವ ಕಾಲೇಜುವರೆಗಿನ ಶಿಕ್ಷಣ ಸಂಸ್ಥೆ ಚಿತ್ರದುರ್ಗದಲ್ಲಿದೆ. ಸಮುದಾಯದ ಮಕ್ಕಳಿಗೆ ಸ್ನಾತಕೋತ್ತರ ಹಂತದವರೆಗೆ ಉಚಿತ ಶಿಕ್ಷಣ ನೀಡಬೇಕು ಎಂಬುದು ಸ್ವಾಮೀಜಿ ಬಯಕೆ.





ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರೊಂದಿಗೆ ಇಮ್ಮಡಿ ಶ್ರೀ



ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ



ಡಿ.ಕೆ. ಶಿವಕುಮಾರ್ ಅವರೊಂದಿಗೆ ಇಮ್ಮಡಿ ಶ್ರೀ



ಸಚಿವ ಸಂತೋಷ್ ಲಾಡ್ ಅವರೊಂದಿಗೆ ಇಮ್ಮಡಿ ಶ್ರೀ



ಕೇಂದ್ರ ಸಚಿವ ಕುಮಾರಸ್ವಾಮಿ ಅವರೊಂದಿಗೆ ಇಮ್ಮಡಿ ಶ್ರೀ



ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿವರಾಜ ತಂಗಡಗಿ, ಅರವಿಂದ ಲಿಂಬಾವಳಿ ಅವರೊಂದಿಗೆ ಇಮ್ಮಡಿ ಶ್ರೀ



ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಅವರು ಇಮ್ಮಡಿ ಶ್ರೀಗಳನ್ನು ಸನ್ಮಾನಿಸಿದ ಕ್ಷಣ



ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡರೊಂದಿಗೆ ಇಮ್ಮಡಿ ಶ್ರೀ



ಅನ್ನ, ಅಕ್ಷರ, ಆರ್ಥಿಕ ಸದೃಢತೆಯೇ ಗುರಿ

ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮನದ ಮಾತು

- **ಭೋವಿ ಗುರುಪೀಠದ ಪೀಠಾಧ್ಯಕ್ಷರಾಗಿ, ಸಮಾಜದ ಮಾರ್ಗದರ್ಶಕಾಗಿ ಎರಡೂವರೆ ದಶಕದಿಂದ ಸಾಗಿ ಬಂದ ಹಾದಿ ಹೇಗಿತ್ತು?**
- ಸಾಗಿ ಬಂದ ಹಾದಿ ಹೂವಿನ ಹಾಸಿಗೆಯಂತೂ ಆಗಿರಲಿಲ್ಲ. ಗುರು ಪರಂಪರೆಯ ಸ್ವೀಕಾರದ ಮನೋಭಾವ ಸಮುದಾಯದ ಸದಸ್ಯರಲ್ಲಿ ಅಷ್ಟಾಗಿ ಇರಲಿಲ್ಲ. ಸಮಷ್ಟಿ ಭಾವನೆಯಿಂದ ಸಮಾಜ ಕಟ್ಟಲು ಹೊರಟು ನಿಂತಾಗ ಸಹಕಾರ ಕಂಡುಬರಲಿಲ್ಲ. ಜನರಿಗೆ ಶ್ರೀ ಸಿದ್ದರಾಮೇಶ್ವರರ ಬಗ್ಗೆ ಅಲ್ಪಸ್ವಲ್ಪ ಮಾಹಿತಿ ತಿಳಿದಿದ್ದು ಬಿಟ್ಟರೆ ಅವರನ್ನು ಅನುಸರಿಸುವ ಕ್ರಮ ಇರಲಿಲ್ಲ.

ಅಂತಹ ಸಂದರ್ಭದಲ್ಲಿ ನಾವು ಸಮಾಜದ ಜನರ ಮನಸ್ಸುಗಳನ್ನು ಕಟ್ಟುವ ಕೆಲಸಕ್ಕೆ ಆದ್ಯತೆ ನೀಡಿದೆವು. ಮನೆಮನೆಗಳಿಗೆ ಶ್ರೀ ಸಿದ್ದರಾಮೇಶ್ವರರ ವಿಚಾರಗಳನ್ನು ತಿಳಿಸುವ ಉದಾತ್ತ ಗುರಿ ನಮ್ಮ ಮುಂದೆ ಇತ್ತು. ಆ ಸಂದರ್ಭದಲ್ಲಿ ಹಳ್ಳಿಗಳಿಗೆ ಹೊರಟಾಗ ಪರಿಶಿಷ್ಟ ಸಮುದಾಯಗಳ ಕಾಲೊನಿಗಳಿಗೆ ತೆರಳಲು ದಾರಿಗಳೂ ಇರಲಿಲ್ಲ. ಸಾಕಷ್ಟು ಸವಾಲು, ಕಡುಕಷ್ಟಗಳನ್ನು ಅನುಭವಿಸಬೇಕಾಯಿತು. ನೂರಾರು ಕಠಿಣ ಸವಾಲುಗಳನ್ನು ಎದುರಿಸಬೇಕಾದ ಪರಿಸ್ಥಿತಿ ಇತ್ತು.

ಈಗಿನಂತೆ ನಮ್ಮ ಬಳಿ ಯಾವುದೇ ಸೌಲಭ್ಯಗಳಿರಲಿಲ್ಲ. ಸ್ವಂತ ವಾಹನದ ಮಾತೂ ಇಲ್ಲ. ಹತ್ತಾರು ಕಿಲೋಮೀಟರ್‌ಗಟ್ಟಲೆ ನಡೆದೇ ಹೋಗಬೇಕು, ನಂತರ ಸೈಕಲ್, ಸ್ಕೂಟರ್, ಸಣ್ಣಪುಟ್ಟ ವಾಹನಗಳಲ್ಲಿ ಓಡಾಡಿ ಶ್ರೀಸಿದ್ದರಾಮೇಶ್ವರರ ಚಿಂತನೆಗಳನ್ನು ಜನರ ಮನಸ್ಸಿನಲ್ಲಿ ಮೂಡಿಸುವ ಪ್ರಯತ್ನಕ್ಕೆ ನಿಧಾನವಾಗಿ ಫಲ ಸಿಕ್ಕುತ್ತಾ ಸಾಗಿತು. ದುಡಿತ ಹಾಗೂ ಕುಡಿತದ ಚಟದಿಂದ ಬಳಲುತ್ತಿದ್ದ ಸಮಾಜದ ಸದಸ್ಯರನ್ನು ಅಧ್ಯಾತ್ಮ ಚಿಂತನೆಯತ್ತ ಕರೆದುತರುವುದು ಸಣ್ಣ ವಿಚಾರವಾಗಿರಲಿಲ್ಲ. ಕಂದಾಚಾರ, ಮೂಢನಂಬಿಕೆಗಳು ನಮ್ಮ ಹಾದಿಗೆ ಅಡ್ಡಿಯಾಗಿದ್ದವು. ಆದರೆ ಜನರಲ್ಲಿ ಒಂದು ಮುಗ್ಧ ಭಕ್ತಿ ಇದ್ದ ಕಾರಣಕ್ಕೆ ಅವರನ್ನು ಅಧ್ಯಾತ್ಮದತ್ತ ಸೆಳೆಯುವಲ್ಲಿ ಯಶಸ್ವಿಯಾಯಿತು. 'ದುಶ್ಚಟಗಳ ಭಿಕ್ಷೆ– ಸದ್ಗುಣಗಳಿಗೆ ದೀಕ್ಷೆ' ಕಾರ್ಯಕ್ರಮಗಳ ಮೂಲಕ ಸಮಾಜದ ಜನರನ್ನು, ಹಲವು ಗ್ರಾಮಗಳನ್ನು ದುಶ್ಚಟ ಮುಕ್ತ ಗ್ರಾಮವನ್ನಾಗಿ ನಿರ್ಮಾಣ ಮಾಡಲಾಯಿತು.

ಧರ್ಮದ ಕಡೆ ಭಕ್ತರು ಮುಖ ಮಾಡದೇ ಇದ್ದಾಗ ಧರ್ಮವೇ ಭಕ್ತರ ಕಡೆಗೆ ಸಾಗುವಂತಹ ಚಿಂತನೆ ನಮ್ಮದಾಗಿತ್ತು. ವಿಶ್ವಾಸ, ಭರವಸೆಯ ಹಾದಿಯಲ್ಲಿ ಸಿದ್ದರಾಮೇಶ್ವರರ ಜಯಂತಿ ಕಾರ್ಯಕ್ರಮ, ಶಿಕ್ಷಣ ಜಾಗೃತಿ, ನಾಯಕತ್ವ ಕಾರ್ಯಾಗಾರ ಮುಂತಾದ ಕಾರ್ಯಕ್ರಮಗಳ ಮೂಲಕ ಸಮುದಾಯದ ಶಿಕ್ಷಣದ ತಳಹದಿಯ ಮೇಲೆ ಸಂಸ್ಕಾರಯುತ ಜೀವನಮಟ್ಟ ನಿರ್ಮಿಸುವತ್ತ ನಮ್ಮ ನಡಿಗೆ ಸಾಗಿತು. ಈ 25 ವರ್ಷಗಳಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ನಾವು ಕಾಣಬಹುದಾಗಿದೆ.

ಭಕ್ತರ ಔದಾರ್ಯದಿಂದಾಗಿ ನಮ್ಮ ಪ್ರಯತ್ನಕ್ಕೆ ಒಂದು ಸ್ಥಾನ ಸಿಕ್ಕಿದೆ. ಗುರುವಾಣಿಯನ್ನು ವೇದವಾಕ್ಯವೆಂದು ಸ್ವೀಕಾರ ಮಾಡಿ ನಮ್ಮ ಮಾತುಗಳನ್ನು ಅಪ್ಪಿಕೊಂಡು ಒಪ್ಪಿಕೊಂಡು ನಡೆಸುವ ಭಕ್ತ ಸಮೂಹ ನಮ್ಮೊಂದಿಗೆ ಹೆಜ್ಜೆ ಹಾಕುತ್ತಿದೆ.

- **ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳೂ ಹೇಗೆ ನಡೆದವು?**
- ಜನರಲ್ಲಿ ಸಮುದಾಯದ ಬಗ್ಗೆ, ಶ್ರೀಸಿದ್ದರಾಮೇಶ್ವರರ ವಚನಗಳ ಬಗ್ಗೆ ಸಣ್ಣದಾಗಿ ಅರಿವಿತ್ತು. ಅದನ್ನು ದುಪ್ಪಟ್ಟು ಮಾಡುವಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಯಿತು. ಜನರಲ್ಲಿ ಮೊದಲಿನಿಂದಲೂ ಒಂದು ಆಸಕ್ತಿ ಇತ್ತು, ಆದರೆ ಒಂದು ಸ್ಪಷ್ಟ ಚಿತ್ರಣವಿರಲಿಲ್ಲ. ಆ ಚಿತ್ರಣವನ್ನು ಜನರ ಕಣ್ಣಮುಂದೆ ಕಟ್ಟಿಕೊಡುವ ಕೆಲಸಗಳನ್ನು ನಾವು ಮಾಡಿದೆವು.

ಸಿದ್ಧರಾಮೇಶ್ವರ ಶರಣರ ವಚನಗಳ ಬಗ್ಗೆ ಕಾರ್ಯಾಗಾರಗಳನ್ನು ಆಯೋಜನೆ ಮಾಡಿದಾಗ ಜನರಿಗೆ ಒಂದು ಮಾಹಿತಿ ಸಿಗುತ್ತಾ ಸಾಗಿತು. ದೊಡ್ಡಮಟ್ಟದಲ್ಲಿ ಅವುಗಳನ್ನು ಮಾಡಿದಾಗ ಜನರಿಗೆ ಇನ್ನಷ್ಟು ಮಾಹಿತಿಗಳು ತಿಳಿದವು. ಉಪನ್ಯಾಸಕರ ತಂಡವನ್ನೇ ಸೃಷ್ಟಿಸಿ ಜನರಿಗೆ ತಿಳಿ ಹೇಳಲಾಯಿತು. ಮನೆಮನೆಯಲ್ಲೂ ಶ್ರೀಸಿದ್ದರಾಮೇಶ್ವರರ ಚಿಂತನೆಗಳ ಶಿಬಿರ, ವ್ಯಕ್ತಿತ್ವ ವಿಕಸನ ಮುಂತಾದ ಕಾರ್ಯಕ್ರಮ ನಡೆಸಲಾಯಿತು. ಜೊತೆಗೆ ಹಳ್ಳಿಹಳ್ಳಿಗಳಲ್ಲಿ ನಡೆದ ಜಯಂತಿ ಕಾರ್ಯಕ್ರಮಗಳ ಮೂಲಕ ಸಿದ್ಧರಾಮೇಶ್ವರರ ಚಿಂತನೆಗಳನ್ನು ಮನಸ್ಸಿನ ಮೇಲೆ ಹರಿಸುವ ಕೆಲಸ ಮಾಡಲಾಯಿತು.

- **ದಾಸೋಹ ಪರಿಕಲ್ಪನೆ ಹೇಗೆ ಆರಂಭವಾಯಿತು.**
- ಮೂರು 'ಅ'ಗಳು ನಮ್ಮ ಕಣ್ಣ ಮುಂದೆ ಇದ್ದವು. ಅನ್ನ, ಅಕ್ಷರ ಹಾಗೂ ಆರ್ಥಿಕ ಸದೃಢತೆ ನಮ್ಮ ಉದ್ದೇಶವಾಗಿತ್ತು. ಅವುಗಳ ಗುರಿಸಾಧನೆಗಾಗಿ ನಾವು ಶ್ರಮಿಸುತ್ತಾ ಸಾಗಿದೆವು. ಮಠಕ್ಕೆ ಬಂದವರೆಲ್ಲರೂ ಹಸಿದು ಹೋಗಬಾರದು, ಏನಾದರೂ ಉಂಡು ಹೋಗಬೇಕು ಎಂಬ ಉದ್ದೇಶಕ್ಕೆ ದೊಡ್ಡ ಸ್ಪಂದನೆ ಸಿಕ್ಕಿತು. ನಮ್ಮ ಮಠದಲ್ಲಿ ಎಂದಿಗೂ ಅನ್ನ ದಾಸೋಹಕ್ಕೆ ಕೊರತೆ ಆಗಿಲ್ಲ.

ನಂತರ ಅಕ್ಷರಕ್ಕೆ ಪ್ರಾಧಾನ್ಯತೆ ನೀಡಿದ ಫಲವಾಗಿ ಕಸುಬು ಅರಸಿ ಊರು ಬಿಟ್ಟು ಹೋದವರ ಮಕ್ಕಳಿಗೆ ನಮ್ಮ ಮಠ ಪೋಷಕನಾಗಿ ಅವರನ್ನು ಪೊರೆಯಿತು, ಶೈಕ್ಷಣಿಕವಾಗಿ ಅವರ ಬೆನ್ನೆಲುಬಾಗಿ ನಿಂತುಕೊಂಡಿತು. ದಾಸೋಹ ಪರಿಕಲ್ಪನೆಯಲ್ಲಿ ಜಾತಿ, ವಿಜಾತಿಗಳ ಬೇಧ ಭಾವ ಇರಲಿಲ್ಲ. ನಮ್ಮ ಶಾಲೆಗಳಲ್ಲಿ ಶೇ 50ರಷ್ಟು ಸುಮುದಾಯದ ಮಕ್ಕಳು ಉಳಿದವರು ಬೇರೆ ಸಮುದಾಯದ ಮಕ್ಕಳಿದ್ದಾರೆ.

ಅವರೆಲ್ಲರ ಬದುಕು ರೂಪಿಸುವ ಕಾರ್ಯವಾಗಿ ಇಂದು ದೇಶ ವಿದೇಶದಲ್ಲಿ ನಮ್ಮ ವಿದ್ಯಾರ್ಥಿಗಳು ಬದುಕು ರೂಪಿಸಿಕೊಂಡಿದ್ದಾರೆ.

- **ಭೋವಿ ಅಭಿವೃದ್ಧಿ ನಿಗಮದ ಉದ್ದೇಶ ಈಡೇರಿದೆಯಾ?**
- ಸಮುದಾಯದ ಒತ್ತಾಸೆಯಂತೆ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ನಿಗಮ ರಚನೆಯ ಘೋಷಣೆ ಮಾಡಿದರು. ಸಿದ್ದರಾಮಯ್ಯ ಅವರು ಉದ್ಘಾಟಿಸಿದರು.

ಯಾವುದೇ ನಿಗಮವಾದರೂ ಅದು ಚಲನಶೀಲವಾಗಿರಬೇಕು. ನಿಗಮಕ್ಕೆ ಇಲ್ಲಿಯವರೆಗೂ ನಿಯಮಾನುಸಾರ ಅನುದಾನ ಬಿಡುಗಡೆ ಆಗಿಲ್ಲ. ನಿಗಮ ಕಾನೂನಾತ್ಮಕವಾಗಿ ಮುನ್ನಡೆದರೆ ಮಾತ್ರ ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಸಾಧ್ಯ. ಜನಸಂಖ್ಯೆಗೆ ಅನುಗುಣವಾಗಿ ಶೇ 11ರಷ್ಟು ಮೀಸಲಾತಿ ಸೌಲಭ್ಯ ಸಿಗಬೇಕಾಗಿತ್ತು. ಆದರೆ ನಮಗೆ ಧಕ್ಕಿದ್ದು ಅತೀ ಕಡಿಮೆ. ಹೀಗಾಗಿ ನಿಗಮ ಉದ್ದೇಶ ಇಲ್ಲಿಯವರೆಗೂ ಈಡೇರಿಲ್ಲ. ಮುಂದಾದರೂ ನಿಗಮ ಉದ್ದೇಶ ಈಡೇರಲಿದೆ ಎಂಬ ನಿರೀಕ್ಷೆಯಲ್ಲೇ ಇದ್ದೇವೆ.

- **ಶೂನ್ಯದಿಂದ ಆರಂಭವಾದ ಗುರುಪೀಠ ಒಂದು ಭೌತಿಕ ರೂಪ ಪಡೆದದ್ದು ಹೇಗೆ?**
- ಮುರುಘಾ ಪರಂಪರೆಯಲ್ಲಿ ದಾನವಾಗಿ ಸಿಕ್ಕ ಜಮೀನಿನಿಂದ ನಮ್ಮ ಪಯಣ ಆರಂಭವಾಗುತ್ತದೆ. ಗುಡಿಸಲಿನಿಂದಲೇ ನಮ್ಮ ನಡಿಗೆ ಆರಂಭಿಸಿದೆವು. ಹಾವು, ಚೇಳು, ಹಲ್ಲಿ, ಕರಡಿ, ನರಿಗಳನ್ನು ನಮ್ಮ ಅಕ್ಕಪಕ್ಕದಲ್ಲೇ ಕಂಡಿದ್ದೇವೆ. ಅವುಗಳದ್ದು ತಪ್ಪಿಲ್ಲ, ನಾವೇ ಅವುಗಳ ಜಾಗಕ್ಕೆ ಹೋಗಿದ್ದೇವೆ. ನಾವು ಅವುಗಳನ್ನು ಕೊಲ್ಲದೆ, ಹಿಂಸಿಸದೆ ರಕ್ಷಿಸುವ ಕೆಲಸ ಮಾಡಿದೆವು.

ನಂತರ ಭಕ್ತರು ತೋರಿದ ಅಪರಿಮಿತ ಪ್ರೀತಿಯಿಂದ ಗುರುಪೀಠ ಒಂದು ಭೌತಿಕ ಸ್ಥಾನ ಪಡೆಯಿತು. ಹನಿಹನಿ ಕೂಡಿಸಿ ಒಂದೊಂದೇ ಸಣ್ಣ ಹೆಜ್ಜೆ ಇಡುತ್ತಾ ಮುಂದೆ ಸಾಗಿದೆವು. ಗುಡಿಸಲಿನಿಂದ ಸಣ್ಣ ಕುಟೀರ ರೂಪಗೊಂಡಿತು. ಭಕ್ತರು ಕೊಟ್ಟ ದಾನದ ಪೈಸೆಪೈಸೆಗೂ ಲೆಕ್ಕ ಇಟ್ಟು ಶಿಸ್ತಾಗಿ ನಿರ್ವಹಣೆ ಮಾಡಿದ ಫಲವಾಗಿ ಇಂದು ಗುರುಪೀಠಕ್ಕೆ ಭೌತಿಕವಾಗಿ ಒಂದು ಸ್ಥಾನ ಸಿಕ್ಕಿದೆ.

- **ಮುಂದಿನ ಹಾದಿ ಹೇಗಿದೆ?**
- ರಟ್ಟೆಯನ್ನೇ ನಂಬಿ ಬದುಕುವ ಸಮುದಾಯಕ್ಕೆ ಉದ್ಯೋಗ ಭಾಗ್ಯ ದೊರೆಯಬೇಕು. ಪ್ರಮುಖವಾಗಿ ಗಣಿ ಇಲಾಖೆಯಿಂದ ಸಿಗುವ ಸೌಲಭ್ಯಗಳು ನಮ್ಮವರಿಗೆ ಆದ್ಯತೆಯ ಮೇಲೆ ದೊರೆಯಬೇಕು. ಗಣಿಗಾರಿಕೆಯಲ್ಲಿ ಭೋವಿ ಸಮುದಾಯಕ್ಕೆ ಶೇ 25ರಷ್ಟು ಮೀಸಲಾತಿ ನೀಡಬೇಕು ಎಂಬು ನಮ್ಮ ಹೋರಾಟ ಮುಂದುವರಿಯಲಿದೆ. ಸರ್ಕಾರಕ್ಕೆ ನಾವು ರಾಜಧನ ಪಾವತಿಸಲು ಸಿದ್ಧರಿದ್ದೇವೆ. ಬೇಡುವ ಕೈಗಳು ಸರ್ಕಾರದ ಬೊಕ್ಕಸವನ್ನೂ ತುಂಬಿಸಲಿವೆ. ಈ ನಿಟ್ಟಿನಲ್ಲಿ ನಮಗೆ ಮೀಸಲಾತಿ ಸೌಲಭ್ಯ ದೊರೆಯಬೇಕು.

ಕುಲವೃತ್ತಿ ನಂಬಿದವರಿಗೆ ಶಿಕ್ಷಣ ಆಧಾರವಾಗಬೇಕು ಎಂಬ ಜಾಗೃತಿ ಮುಂದುವರಿಯಲಿದೆ. ನಮ್ಮ ಯುವಕರು ಉದ್ಯೋಗ ಅರಸುವುದಷ್ಟೇ ಅಲ್ಲ, ತಾವೇ ಉದ್ಯೋಗ ಸೃಷ್ಟಿಮಾಡಿಕೊಳ್ಳಬೇಕು ಎಂಬ ಸಂದೇಶದೊಂದಿಗೆ ನಾವು ಮುನ್ನಡೆಯುತ್ತೇವೆ. ಜೊತೆಗೆ ವಿಜ್ಞಾನಕ್ಕೆ ಪೂರಕವಾದ, ವಚನಾಧಾರಿತವಾದ ಧರ್ಮದ ಹಾದಿಯಲ್ಲಿ ನಾವು ಮುನ್ನಡೆಯುತ್ತೇವೆ.







ಮೊಹರಂ ಅಂಗವಾಗಿ ಬೆಂಗಳೂರಿನ ಜಾನ್ಸನ್ ಮಾರುಕಟ್ಟೆ ಬಳಿ ಬುಧವಾರ ಶಿಯಾ ಮುಸ್ಲಿಮರು ಶೋಕ ಮೆರವಣಿಗೆ ನಡೆಸಿದರು (ಎಡ ಚಿತ್ರ). ಇಮಾಮ್ ಹುಸೇನ್ ಮತ್ತು ಅವರ ಸಹಚರರ ತ್ಯಾಗ ಹಾಗೂ ಧೈರ್ಯದ ಪ್ರತೀಕವಾಗಿ ದೇಹದಂಡಿಸಿ ತಮ್ಮನ್ನೇ ತಾವು ನೋವಿಗೆ ಒಡ್ಡಿಕೊಂಡರು ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಹಸನ್– ಹುಸೇನ್ ತ್ಯಾಗ ಸ್ಮರಿಸಿದ ಮುಸ್ಲಿಮರು

ಮೊಹರಂ: ದೇಹದಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಗ, ಬಲಿದಾನದ ಸಂಕೇತವಾಗಿ ನಗರದ ಜಾನ್ಸನ್ ಮಾರುಕಟ್ಟೆ ಬಳಿ ಶಿಯಾ ಮುಸ್ಲಿಮರು ಭಕ್ತಿ ಭಾವದಿಂದ ಬುಧವಾರ ಮೊಹರಂ ಆಚರಿಸಿದರು. ಮೆರವಣಿಗೆ ನಡೆಸಿ, ದೇಹದಂಡನೆ ಮಾಡಿ ಹಸನ್– ಹುಸೇನ್ ತ್ಯಾಗವನ್ನು ಸ್ಮರಿಸಿದರು.

ಶೋಕಾಚರಣೆ ಸಂಕೇತವಾಗಿ ಕಪ್ಪುಬಟ್ಟೆ ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡರು. ಸ್ತಬ್ಧಚಿತ್ರಗಳು ಸಾಗಿಬಂದವು. ಸಾವಿರಾರು ಮಂದಿ ಪಾಲ್ಗೊಂಡಿದ್ದರಿಂದ ಮಾರುಕಟ್ಟೆಯ ಅಕ್ಕಪಕ್ಕದ ರಸ್ತೆಯಲ್ಲಿ ಮಧ್ಯಾಹ್ನ ವಾಹನ ಸಂಚಾರ ನಿರ್ಬಂಧಿಸಲಾಯಿತು.

ಮಕ್ಕಳು, ಯುವಕರು ಮತ್ತು ವೃದ್ಧರು ದೇಹದಂಡನೆ ಮಾಡಿಕೊಂಡರು. 'ಆಲಿ ದೂಲಾ' ಎಂದು ಕೂಗುತ್ತಾ ದಾರಕ್ಕೆ ಕಟ್ಟಿದ್ದ ಬ್ಲೇಡ್‌ಗಳ ಗೊಂಚಲನ್ನು ಜನರು ತಮ್ಮ ಎದೆಗೆ ಹಾಗೂ ಬೆನ್ನಿಗೆ ಹೊಡೆದುಕೊಂಡರು. ಅವರ ದೇಹದಿಂದ ರಕ್ತ ಚಿಮ್ಮಿತು. ಬಹುತೇಕರು ಎದೆಗೆ ಕೈಗಳಿಂದ ಬಡಿದುಕೊಂಡು ಶೋಕ ಗೀತೆಗಳನ್ನು ಹಾಡಿದರು.

ಮೆರವಣಿಗೆಗೆ ಮೊದಲು ಜಾನ್ಸನ್ ಮಾರುಕಟ್ಟೆ ಬಳಿಯ ಅಲಿ ಅಸ್ಗರ್ ಮಸೀದಿಯಲ್ಲಿ ಪ್ರಾರ್ಥನೆ ನಡೆಯಿತು. ಅಲ್ಲದೇ ನಗರದ ವಿವಿಧ ಮಸೀದಿಗಳಲ್ಲೂ ಪ್ರಾರ್ಥನೆ ಸಲ್ಲಿಸಲಾಯಿತು.

ಜಾನ್ಸನ್ ಮಾರುಕಟ್ಟೆ ಬಳಿ ಪೊಲೀಸರು ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು. ಆಂಬುಲೆನ್ಸ್, ಶುಶ್ರೂಷಕರನ್ನು ಸ್ಥಳದಲ್ಲಿ ನಿಯೋಜಿಸಲಾಗಿತ್ತು.

ಭಾವೈಕ್ಯದ ಪ್ರತೀಕವಾಗಿರುವ ಮೊಹರಂ ಅನ್ನು ರಾಜಧಾನಿ ಸುತ್ತಮುತ್ತಲ ಬಡಾವಣೆಗಳಲ್ಲೂ ಶ್ರದ್ಧಾಭಕ್ತಿಯಿಂದ ಆಚರಿಸಿದರು. ಕೆಲವರು ಅಲ್ಲಾ ಮತ್ತು ಬೀಬಿ ಫಾತಿಮಾರ ಹೆಸರಿನಲ್ಲಿ ಹಾಡಿದ ಹಾಡುಗಳಿಗೆ ಜನರು ಭಾವುಕರಾದರು. ದೀರ್ಘ ದಂಡ ನಮಸ್ಕಾರ ಹಾಕಿ ಧನ್ಯರಾದರು.

'ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಮೊಮ್ಮಕ್ಕಳಾದ ಹಸನ್– ಹುಸೇನ್ ಧರ್ಮದ ಉಳಿವಿಗಾಗಿ ಹಾಗೂ ನ್ಯಾಯಕ್ಕಾಗಿ ಹೋರಾಡಿ ಯುದ್ಧದಲ್ಲಿ ಮರಣ ಹೊಂದಿದರು. ಅವರ ಸಾವಿನ ಸ್ಮರಣಾರ್ಥ ಈ ಶೋಕಾಚರಣೆ ಆಚರಿಸುತ್ತಿದ್ದೇವೆ' ಎಂದು ಸಮಾಜದ ಮುಖಂಡರು ಹೇಳಿದರು.

ಶಿವಾಜಿನಗರದಲ್ಲೂ ಆಚರಣೆ

ಶಿವಾಜಿನಗರದ ಹಜರತ್ ಕಂಬಲ್‌ಪೋಷ್ ರಸ್ತೆಯಲ್ಲಿ ಪ್ರತಿಷ್ಠಾಪಿಸಲಾದ ಆಲಾಯಿ ದೇವರ ಸನ್ನಿಧಿಯಲ್ಲಿ ವಿಶೇಷ ಪ್ರಾರ್ಥನೆಗಳು ನಡೆದವು. ವ್ರತಾಚರಣೆ ಮಾಡಿದ್ದ ಮುಸ್ಲಿಮರಿಗೆ ಮಸೀದಿಯಲ್ಲಿ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

ಡೆಂಗಿ: 5 ಆಸ್ಪತ್ರೆಯಲ್ಲಿ ಹಾಸಿಗೆ ಮೀಸಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದಲ್ಲಿ ಡೆಂಗಿ ಪ್ರಕರಣಗಳು ಏರಿಕೆಯಾಗುತ್ತಿರುವುದರಿಂದ ಈ ಜ್ವರ ಪೀಡಿತರ ಚಿಕಿತ್ಸೆಗೆ ಐದು ಆಸ್ಪತ್ರೆಗಳನ್ನು ಗುರುತಿಸಿ, ಹಾಸಿಗೆಗಳನ್ನು ಮೀಸಲಿಡುವಂತೆ ಆರೋಗ್ಯ ಇಲಾಖೆಯು ಸೂಚಿಸಿದೆ.

ಕೆ.ಸಿ.ಜನರಲ್ ಆಸ್ಪತ್ರೆ, ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ ಹಾಗೂ ಜಯನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ತಲಾ 25 ಹಾಸಿಗೆಗಳನ್ನು ಮೀಸಲಿಡಲು ಸೂಚಿಸಲಾಗಿದೆ. ಯಲಹಂಕ ತಾಲ್ಲೂಕು ಆಸ್ಪತ್ರೆ ಮತ್ತು ಕೆ.ಆರ್.ಪುರ ತಾಲ್ಲೂಕು ಆಸ್ಪತ್ರೆಯಲ್ಲಿ ತಲಾ 10 ಹಾಸಿಗೆಗಳನ್ನು ಡೆಂಗಿ ಪೀಡಿತರ ಚಿಕಿತ್ಸೆಗೆ ಇರಿಸಲು ತಿಳಿಸಲಾಗಿದೆ.

ಡೆಂಗಿ ಪೀಡಿತರಿಗೆ ನಿಗದಿತ ಸಮಯದಲ್ಲಿ ಆರೈಕೆ ಮತ್ತು ಚಿಕಿತ್ಸೆ ನೀಡುವ ಮೂಲಕ ಸಾವುಗಳನ್ನು ತಡೆಗಟ್ಟಬಹುದಾಗಿದೆ. ಪರಿಣಾಮಕಾರಿ ನಿರ್ವಹಣೆ ಮತ್ತು ನಿರ್ಣಾಯಕ ಚಿಕಿತ್ಸೆ ಒದಗಿಸಲು ಮುಂದಿನ ಆದೇಶದವರೆಗೂ ಹಾಸಿಗೆಗಳನ್ನು ಮೀಸಲಿಡಬೇಕು ಎಂದು ಸೂಚಿಸಲಾಗಿದೆ.

ಸದ್ಯ 171 ಡೆಂಗಿ ಪೀಡಿತರು ನಗರದ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.



'ಮಳೆ ನೀರು ಸುಗ್ಗಿ ಕೇಂದ್ರ'ದಲ್ಲಿ ಮಕ್ಕಳಿಗೆ ನೀರಿನ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಲಾಯಿತು

ಹಿರಿಯ ನಾಗರಿಕರ ಪ್ರಕೋಷ್ಠಕ್ಕೆ ನೇಮಕ

ಬೆಂಗಳೂರು: ಬೆಂಗಳೂರು ಉತ್ತರ ಜಿಲ್ಲೆ ಬಿಜೆಪಿ ಹಿರಿಯ ನಾಗರಿಕರ ಪ್ರಕೋಷ್ಠದ ಸಂಚಾಲಕರನ್ನಾಗಿ ಎಸ್.ಗೋವಿಂದರಾಜುಲು ಮತ್ತು ಸಹ ಸಂಚಾಲಕರನ್ನಾಗಿ ಎ.ನಾರಾಯಣ ಸ್ವಾಮಿ ಅವರನ್ನು ನೇಮಿಸಲಾಗಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಎಸ್.ಹರೀಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರಿನ ಸಂರಕ್ಷಣೆ ಚಿತ್ರಕಲೆ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಿನ ಸಂರಕ್ಷಣೆ ವಿಷಯವಾಗಿ ಜಲಮಂಡಳಿ ಸಿಬ್ಬಂದಿಯ ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆಯನ್ನು ಬುಧವಾರ ಆಯೋಜಿಸಲಾಗಿತ್ತು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕ್ಷೇಮಾಭಿವೃದ್ಧಿ ನೌಕರರ ಸಂಘದಿಂದ ಅಂಬೇಡ್ಕರ್ ಜಯಂತಿ ಪ್ರಯುಕ್ತ ಸರ್ ಎಂ. ವಿಶ್ವೇಶ್ವರಯ್ಯ ಮಳೆ ನೀರು ಸುಗ್ಗಿ ಕೇಂದ್ರದಲ್ಲಿ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.


ಕಾರ್ಯಕ್ರಮದಲ್ಲಿ, ಮಕ್ಕಳಿಗೆ ನೀರಿನ ಸಂರಕ್ಷಣೆ, ಮಳೆ ನೀರು ಸಂಗ್ರಹದ ಬಗ್ಗೆ ಮಾಹಿತಿ ನೀಡಲಾಯಿತು. ಕಿರುಚಿತ್ರ, ಮಾದರಿಗಳನ್ನು ಪ್ರದರ್ಶಿಸಿ ಜಾಗೃತಿ ಮೂಡಿಸಲಾಯಿತು.

'ದೇಶದಲ್ಲಿ ಮೊದಲ 'ಮಳೆ ನೀರು ಸುಗ್ಗಿ ಕೇಂದ್ರ'ವನ್ನು ನಿರ್ಮಿಸಿದ ಕೀರ್ತಿ ಬೆಂಗಳೂರು ಜಲಮಂಡಳಿಯದ್ದು' ಎಂದು ನಿವೃತ್ತ ಪಿಆರ್‌ಒ ಬಿ. ಎಂ. ಮಂಜುನಾಥ್ ಹೇಳಿದರು.

ಚಿತ್ರಕಲೆ ಸ್ಪರ್ಧೆಯಲ್ಲಿ 40ಕ್ಕೂ ಹೆಚ್ಚು ನೌಕರರ ಮಕ್ಕಳು ಪಾಲ್ಗೊಂಡಿದ್ದರು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ನೌಕರರ ಸಂಘದ ಅಧ್ಯಕ್ಷ ಸದಾಶಿವ ಕಾಂಬಳೆ, ಹೆಚ್ಚುವರಿ ಮುಖ್ಯ ಎಂಜಿನಿಯರ್ ಕೆ.ಲಕ್ಷ್ಮೀಕಾಂತ್ ಭಾಗವಹಿಸಿದ್ದರು.

ವಾದ್ಯಾರ್‌ಗೆ 'ವ್ಯಾಸಜ್ಯೋತಿ ಪ್ರಶಸ್ತಿ'

ಬೆಂಗಳೂರು: ಭಾರತೀಯ ವಿದ್ಯಾಭವನ ಮತ್ತು ಜ್ಯೋತಿ ಚಾರಿಟಬಲ್ ಟ್ರಸ್ಟ್ ನೀಡುವ 'ವ್ಯಾಸಜ್ಯೋತಿ ಪ್ರಶಸ್ತಿ'ಗೆ ವಿದ್ವಾಂಸ ಅನಂತನಾರಾಯಣ ವಾದ್ಯಾರ್ ಆಯ್ಕೆ ಆಗಿದ್ದಾರೆ.



ಇದೇ 21ರ ಬೆಳಿಗ್ಗೆ 11.30ಕ್ಕೆ ಭಾರತೀಯ ವಿದ್ಯಾ ಭವನದ ಕೆಆರ್‌ಜಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಜ್ಯೋತಿ ಚಾರಿಟಬಲ್ ಟ್ರಸ್ಟ್‌ನ ವಿಶ್ವಸ್ಥ ಎಂ. ನರಸಿಂಹನ್ ಪ್ರಶಸ್ತಿ ಪ್ರದಾನ ಮಾಡುತ್ತಾರೆ. ವಿದ್ಯಾಭವನದ ಅಧ್ಯಕ್ಷ ಎಚ್.ಎಂ. ಸುರೇಶ್ ಅಧ್ಯಕ್ಷತೆ ವಹಿಸುತ್ತಾರೆ.

ಇದೇ ಕಾರ್ಯಕ್ರಮದಲ್ಲಿ ಪಿ.ಎಸ್. ಗೀತಾ ಅವರು 'ಗುರುವಿನ ಮಹತ್ವ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

'ಸಂತ್ರಸ್ತ ರೈತರಿಗೆ ನಿವೇಶನ ಒದಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು– ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಗಾಗಿ ಜಮೀನು ಕಳೆದುಕೊಂಡ ರೈತರಿಗೆ ಕೂಡಲೇ ನಿವೇಶನ ಹಂಚಿಕೆ ಮಾಡಬೇಕು' ಎಂದು ಕರ್ನಾಟಕ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಕೆ.ಎನ್.ಲಿಂಗೇಗೌಡ 'ಬಿಎಂಐಸಿ ಯೋಜನೆಗಾಗಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕಿನ ಗ್ರಾಮಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಡೆಸಲಾಗಿತ್ತು. ಭೂಮಿ ಕಳೆದುಕೊಂಡ ಕುಟುಂಬಗಳಿಗೆ ಸರ್ಕಾರ ಒಪ್ಪಂದದ ಪ್ರಕಾರ, ಪರಿಹಾರವಾಗಿ ನೀಡುವ ನಿವೇಶನಗಳು ಹಂಚಿಕೆಯಾಗಿಲ್ಲ. ಬೀದಿಗೆ ಬಿದ್ದಿರುವ ರೈತರ ಕುಟುಂಬಗಳಿಗೆ ನಿವೇಶನ ಒದಗಿಸಲು ಕ್ರಮವಹಿಸಬೇಕು' ಎಂದು ಒತ್ತಾಯಿಸಿದರು.

ಕಾರು ಚಲಾಯಿಸಿ ಸಂಚಾರಕ್ಕೆ ಚಾಲನೆ ನೀಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಡಬಲ್ ಡೆಕರ್: ಪ್ರಾಯೋಗಿಕ ಸಂಚಾರ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಗಿಗುಡ್ಡ–ಸೆಂಟ್ರಲ್ ಸಿಲ್ಕ್ ಬೋರ್ಡ್ ಮೆಟ್ರೊ ಮಾರ್ಗದಲ್ಲಿ 'ಡಬಲ್ ಡೆಕರ್' ಮೇಲ್ಸೇತುವೆಯಲ್ಲಿ ಪ್ರಾಯೋಗಿಕ ವಾಹನ ಸಂಚಾರ ಬುಧವಾರ ಆರಂಭಗೊಂಡಿತು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಶಾಸಕ ಸತೀಶ್ ರೆಡ್ಡಿಯವರನ್ನು ಕೂರಿಸಿಕೊಂಡು ಕಾರು ಚಲಾಯಿಸಿ. ರಸ್ತೆಯಲ್ಲಿ ಸಂಚಾರಕ್ಕೆ ಚಾಲನೆ ನೀಡಿದರು.

ರೋಡ್ ಕಂ ರೈಲ್ (ಡಬಲ್ ಡೆಕರ್) ಮೇಲ್ಸೇತುವೆ ಯೋಜನೆಯು ₹449 ಕೋಟಿ ವೆಚ್ಚದಲ್ಲಿ ನಿರ್ಮಾಣ ಗೊಳ್ಳುತ್ತಿದ್ದು, ರಾಗಿಗುಡ್ಡದಿಂದ ಕೇಂದ್ರ ರೇಷ್ಮೆ ಮಂಡಳಿವರೆಗಿನ ಕಾಮಗಾರಿ ಪೂರ್ಣಗೊಂಡಿದೆ. ಸದ್ಯ ಪ್ರಾಯೋಗಿಕವಾಗಿ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ. ಎಲ್ಲಿಯಾದರೂ ಲೋಪ ಕಂಡುಬಂದರೆ ವಾಹನ ಸಂಚಾರ ಸ್ಥಗಿತಗೊಳಿಸಿ, ಸಮಸ್ಯೆ ಸರಿಪಡಿಸಲಾಗುವುದು. ಮುಂದೆ ಅಧಿಕೃತವಾಗಿ ಉದ್ಘಾಟನೆ ಮಾಡಲಾಗುವುದು ಎಂದು ಡಿ.ಕೆ. ಶಿವಕುಮಾರ್ ಮಾಹಿತಿ ನೀಡಿದರು.

'ಸಿಲ್ಕ್ ಬೋರ್ಡ್ ಸುತ್ತಮುತ್ತ ವಾಹನದಟ್ಟಣೆಯನ್ನು ಕಡಿಮೆ ಮಾಡಲು ರಾಮಲಿಂಗಾರೆಡ್ಡಿ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿದ್ದ ಸಮಯದಲ್ಲಿ ಬಿಎಂಆರ್‌ಸಿಎಲ್‌ನ ಆಗಿನ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಸಿಂಗ್ ಖರೋಲ ಜೊತೆಗೆ ಚರ್ಚಿಸಿ ಡಬಲ್ ಡೆಕರ್ ಯೋಜನೆ ರೂಪಿಸಿದ್ದರು. ಇದು ಮಾದರಿಯಾದ ಯೋಜನೆಯಾಗಿದೆ' ಎಂದು ಶ್ಲಾಘಿಸಿದರು.

ರಾಗಿಗುಡ್ಡದಿಂದ ಎಚ್‌ಎಸ್‌ಆರ್ ಲೇಔಟ್ ಮತ್ತು ಹೊಸೂರು ರಸ್ತೆಯನ್ನು ತಲುಪಲು ಈ ಮೇಲ್ಸೇತುವೆ ಮೇಲೆ ಸಂಚರಿಸುವ ವಾಹನಗಳಿಗೆ ಯಾವುದೇ ಸಿಗ್ನಲ್‌ಗಳು ಇರುವುದಿಲ್ಲ. ಹಾಗಾಗಿ ವೇಗವಾಗಿ ಸಂಚರಿಸಲು ಸಾಧ್ಯ ಎಂದು ವಿವರಿಸಿದರು.

ಕೆ.ಆರ್.ಪುರ ಮತ್ತು ಹೊಸೂರು ರಸ್ತೆ ಕಡೆಗೆ ಹೋಗುವ ಪ್ರಯಾಣಿಕರಿಗೆ ಸಮಯ ಉಳಿತಾಯವಾಗಲಿದೆ ಎಂದು ತಿಳಿಸಿದರು.

3.36 ಕಿ.ಮೀ: ರಸ್ತೆ ಮೇಲ್ಸೇತುವೆ 3.36 ಕಿಲೋಮೀಟರ್ ಉದ್ದ ಇದೆ. ರ್‍ಯಾಂಪ್ ಎ. 1.10 ಕಿ.ಮೀ, ರ್‍ಯಾಂಪ್ ಬಿ. 280 ಮೀಟರ್, ರ್‍ಯಾಂಪ್ ಸಿ. 490 ಮೀಟರ್, ರ್‍ಯಾಂಪ್ ಡಿ. 1.14 ಕಿ.ಮೀ. ಹಾಗೂ ರ್‍ಯಾಂಪ್ ಇ. 230 ಮೀಟರ್ ಉದ್ದವಿದೆ. ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್‌ಬೋರ್ಡ್‌ವರೆಗೆ ಲೂಪ್ ಮತ್ತು ಇಳಿಜಾರುಗಳೊಂದಿಗೆ ಮೇಲ್ಸೇತುವೆ ನಿರ್ಮಾಣಗೊಂಡಿದೆ. ರಾಗಿಗುಡ್ಡ ಕಡೆಗೆ 1.37 ಕಿ.ಮೀ. ಮೇಲ್ಸೇತುವೆ ಕಾಮಗಾರಿ ನಿರ್ಮಾಣ ಗೊಳ್ಳುತ್ತಿದೆ. 2025ರ ಜೂನ್ ವೇಳೆಗೆ ಈ ರಸ್ತೆಯಲ್ಲಿಯೂ ಕಾರ್ಯಾಚರಣೆ ಆರಂಭ ಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರದವರೆಗಿನ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಡಿಸೆಂಬರ್‌ನಲ್ಲಿ ಮೆಟ್ರೊ ಸಂಚಾರ ಆರಂಭಗೊಳ್ಳಲಿದೆ ಎಂದರು.

ಶಾಸಕ ಸಿ.ಕೆ. ರಾಮಮೂರ್ತಿ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಉಪಸ್ಥಿತರಿದ್ದರು.



ರಾಗಿಗುಡ್ಡ–ಸೆಂಟ್ರಲ್ ಸಿಲ್ಕ್ ಬೋರ್ಡ್ ಡಬಲ್ ಡೆಕರ್ ರಸ್ತೆಯಲ್ಲಿ ಬುಧವಾರ ಪ್ರಾಯೋಗಿಕವಾಗಿ ಸಂಚಾರ ಆರಂಭವಾಯಿತು ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಮುಖ್ಯಾಂಶಗಳು

- ಡಬಲ್ ಡೆಕರ್‌ನಲ್ಲಿ ಸಿಗ್ನಲ್ ರಹಿತ ಸಂಚಾರ
- ಒಂದು ಬದಿಯ ರಸ್ತೆಯಲ್ಲಿ ಮಾತ್ರ ಸಂಚಾರ

100 ಕಿ.ಮೀ. ಡಬಲ್ ಡೆಕರ್ ರಸ್ತೆಗೆ ಚಿಂತನೆ

ರಾಗಿಗುಡ್ಡ–ಸಿಲ್ಕ್‌ಬೋರ್ಡ್ ಡಬಲ್ ಡೆಕರ್ ಮಾದರಿಯಲ್ಲಿಯೇ ನಗರದಲ್ಲಿ 100 ಕಿ.ಮೀ.ನಷ್ಟು ಟ್ರಾಫಿಕ್ ಸಿಗ್ನಲ್ ಮುಕ್ತ ರಸ್ತೆ ನಿರ್ಮಾಣ ಮಾಡುವ ಚಿಂತನೆ ಇದೆ. ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಈಗಾಗಲೇ ಯೋಜನೆ ಆರಂಭವಾಗಿ ಪಿಲ್ಲರ್ ಹಾಕಿರುವ ಮೆಟ್ರೊ ಮಾರ್ಗಗಳನ್ನು ಹೊರತುಪಡಿಸಿ ಮುಂದೆ ನಿರ್ಮಾಣ ಗೊಳ್ಳಲಿರುವ ಎಲ್ಲ ಮೆಟ್ರೊ ಮಾರ್ಗಗಳಲ್ಲಿ ಡಬಲ್ ಡೆಕರ್ ಯೋಜನೆ ಜಾರಿಗೆ ತರಲಾಗುವುದು. ವಾಹನದಟ್ಟಣೆ ಹೆಚ್ಚಿರುವ ಪ್ರದೇಶಗಳಲ್ಲಿ ಟ್ರಾಫಿಕ್ ಸಿಗ್ನಲ್ ಮುಕ್ತ ರಸ್ತೆ ಮಾಡಲಾಗುವುದು. ಪ್ರತಿ ಕಿಲೋಮೀಟರ್‌ಗೆ ₹ 150 ಕೋಟಿ ವೆಚ್ಚವಾಗಲಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಹಂತಹಂತವಾಗಿ ಈ ಯೋಜನೆ ಜಾರಿಗೆ ತರಲಾಗುವುದು' ಎಂದರು.

ಸುದ್ದಿ 2 ನಿಮಿಷ

ಸಾಲ ತೀರಿಸಲು ಸರಗಳ್ಳತನ

ಬೆಂಗಳೂರು: ಸಹೋದರಿ ಮದುವೆಗೆ ಮಾಡಿಕೊಂಡಿದ್ದ ಸಾಲ ತೀರಿಸಲು ಸರ ಕಳವು ಮಾಡುತ್ತಿದ್ದ ಫುಡ್ ಡೆಲಿವರಿ ಬಾಯ್‌ನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋಡಿಪಾಳ್ಯ ನಿವಾಸಿ ಸಂಜೀವ್ ಕುಮಾರ್(32) ಬಂಧಿತ. ಆರೋಪಿಯಿಂದ ₹7 ಲಕ್ಷ ಮೌಲ್ಯದ 105 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮದ್ದೂರಿನ ಕೆ.ಎಂ. ದೊಡ್ಡಿಯ ಮೂಲದ ಸಂಜೀವ್ ಕುಮಾರ್, ಕೆಲವು ವರ್ಷಗಳಿಂದ ಬೆಂಗಳೂರಿನ ಕೋಡಿಪಾಳ್ಯದಲ್ಲಿ ಪತ್ನಿ ಜತೆ ವಾಸಿಸುತ್ತಿದ್ದಾರೆ. ಜೀವನ ನಿರ್ವಹಣೆಗೆ ಫುಡ್ ಡೆಲಿವರಿ ಬಾಯ್ ಆಗಿ ಕೆಲಸ ಮಾಡಿಕೊಂಡಿದ್ದರು.



ಒಂದೂವರೆ ವರ್ಷಗಳ ಹಿಂದೆ ₹5 ಲಕ್ಷ ಸಾಲ ಪಡೆದು ಸಹೋದರಿ ಮದುವೆ ಮಾಡಿದ್ದರು. ಆದರೆ, ನಿಗದಿತ ಸಮಯದಲ್ಲಿ ಸಾಲ ತೀರಿಸಿರಲಿಲ್ಲ. ಸಾಲಗಾರರ ಒತ್ತಡ ಹೆಚ್ಚಾಗಿತ್ತು ಎನ್ನಲಾಗಿದೆ. ಹೀಗಾಗಿ ಫುಡ್ ಡೆಲಿವರಿ ಜತೆಗೆ ಸರ ಕಳ್ಳತನ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಇತ್ತೀಚೆಗೆ ಕೋಡಿಪಾಳ್ಯ ಕ್ರಾಸ್‌ನಲ್ಲಿ ಮಹಿಳೆಯೊಬ್ಬರು ಮಗಳನ್ನು ಶಾಲಾ ಬಸ್‌ಗೆ ಹತ್ತಿಸಿ ವಾಪಸ್ ಹೋಗುವಾಗ, ಎದುರಿನಿಂದ ಬೈಕ್‌ನಲ್ಲಿ ಹೋದ ಆರೋಪಿ, ಆಕೆಯ ಸರ ಕಸಿದುಕೊಂಡು ಪರಾರಿ ಆಗಿದ್ದರು. ಮಹಿಳೆ ನೀಡಿದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಈತನ ಬಂಧನದಿಂದ ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ 4 ಸರ ಕಳವು, ಆರ್.ಆರ್.ನಗರ ಮತ್ತು ಕುಂಬಳಗೋಡು ಠಾಣೆಯಲ್ಲಿ ದಾಖಲಾಗಿದ್ದ 3 ಸರ ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಎಲ್ಲರೂ ಒಂದಲ್ಲ ಒಂದು ದಿನ ಸಾಯಲೇಬೇಕು: ಭೋಲೆ ಬಾಬಾ

ಲಖನೌ (ಪಿಟಿಐ): ಉತ್ತರ ಪ್ರದೇಶದ ಹಾಥರಸ್‌ನಲ್ಲಿ ಇತ್ತೀಚೆಗೆ ಸತ್ಸಂಗ ನಡೆಸಿದ್ದ ಸ್ವಯಂ ಘೋಷಿತ ದೇವಮಾನವ ಭೋಲೆ ಬಾಬಾ ಅವರು ಕಾಸ್‌ಗಂಜ್‌ನ ಬಹದ್ದೂರ್ ನಗರ ಗ್ರಾಮದಲ್ಲಿರುವ ಆಶ್ರಮ ತಲುಪಿದ್ದಾರೆ ಎಂದು ಅವರ ವಕೀಲರು ಬುಧವಾರ ತಿಳಿಸಿದ್ದಾರೆ.

'ಹಾಥರಸ್‌ನಲ್ಲಿ ನಡೆದ ಅವಘಡಕ್ಕೆ ವಿಷಾದವಿದೆ. ಆದರೆ, ಎಲ್ಲರೂ ಒಂದಲ್ಲ ಒಂದು ದಿನ ಸಾಯಲೇಬೇಕಲ್ಲ' ಎನ್ನುವ ಧಾಟಿಯಲ್ಲಿ ಬಾಬಾ ಹಿಂದಿಯಲ್ಲಿ ಮಾತನಾಡಿರುವುದಾಗಿ 'ಪಿಟಿಐ ವಿಡಿಯೊ' ವರದಿ ಮಾಡಿದೆ.

ಜುಲೈ 2ರಂದು ಹಾಥರಸ್ ಜಿಲ್ಲೆಯ ಫೂಲರಾಯ್ ಗ್ರಾಮದಲ್ಲಿ ನಡೆಯುತ್ತಿದ್ದ ಸತ್ಸಂಗದಲ್ಲಿ ಸಂಭವಿಸಿದ ಕಾಲ್ತುಳಿತದಿಂದ 121 ಜನರು ಮೃತಪಟ್ಟಿದ್ದರು. ಘಟನೆಯ ತನಿಖೆಗಾಗಿ ಉತ್ತರ ಪ್ರದೇಶದ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ಮತ್ತು ನ್ಯಾಯಾಂಗ ಆಯೋಗವನ್ನು ರಚಿಸಿದೆ.

ಕೊಲೆ ಪ್ರಕರಣ: 20 ವರ್ಷ ಬಳಿಕ ನಿರ್ದೇಶಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಲ್ಸನ್ ಗಾರ್ಡನ್ ಠಾಣಾ ವ್ಯಾಪ್ತಿಯಲ್ಲಿ 2004ರಲ್ಲಿ ನಡೆದಿದ್ದ ಕೊಲೆ ಪ್ರಕರಣದ ಆರೋಪಿಯನ್ನು 20 ವರ್ಷಗಳ ನಂತರ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ನಿರ್ದೇಶಕ ಗಜೇಂದ್ರ ಅಲಿಯಾಸ್ ಗಜಾ (46) ಬಂಧಿತ ಆರೋಪಿ. 2004ರಲ್ಲಿ ನಡೆದಿದ್ದ ಗಲಾಟೆಯಲ್ಲಿ ಕೊತ್ತ ರವಿ ಎಂಬುವವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು.

ಈ ಸಂಬಂಧ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ, ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ಸಿಸಿಬಿ ಪೊಲೀಸರು ತನಿಖೆ ನಡೆಸಿ, ಪ್ರಕರಣದ ಕೆಲವು ಆರೋಪಿಗಳನ್ನು ಬಂಧಿಸಿದ್ದರು. ಆದರೆ, ಗಜೇಂದ್ರ ತಲೆ ಮರೆಸಿಕೊಂಡಿದ್ದ.



ಗಜೇಂದ್ರ

ಕೃತ್ಯ ಎಸಗಿದ ಬಳಿಕ ಗಜೇಂದ್ರ ತಮಿಳುನಾಡಿನ ವೆಲ್ಲೂರಿಗೆ ತೆರಳಿ ತಲೆಮರೆಸಿಕೊಂಡಿದ್ದ. ಸುಮಾರು ಮೂರೂವರೆ ವರ್ಷ ವೆಲ್ಲೂರಿನಲ್ಲಿದ್ದ ಆರೋಪಿ, ನಗರಕ್ಕೆ ಬಂದು ಸುದ್ದಗುಂಟೆಪಾಳ್ಯದಲ್ಲಿ ಬಾಡಿಗೆ ಮನೆ ಪಡೆದು ನೆಲೆಸಿದ್ದ.

ಮನೆ ಮಾಲೀಕರಿಗೆ ಸಿನಿಮಾ ನಿರ್ದೇಶನ ಮಾಡುತ್ತಿರುವುದಾಗಿ ಮಾಹಿತಿ ನೀಡಿದ್ದ. ಪೊಲೀಸರು ಪ್ರಕರಣವನ್ನು ಮರೆತಿರಬಹುದು ಎಂದು ಭಾವಿಸಿದ್ದ ಆರೋಪಿ ನಗರದಲ್ಲಿ ಓಡಾಟ ನಡೆಸುತ್ತಿದ್ದ. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ರೌಡಿಶೀಟರ್ ಕೊತ್ತ ರವಿ: ರೌಡಿಶೀಟರ್ ಕೊತ್ತ ರವಿ ಕೊಲೆ ಪ್ರಕರಣದಲ್ಲಿ ಗಜೇಂದ್ರ 18ನೇ ಆರೋಪಿ. ಎರಡು ಗುಂಪುಗಳ ನಡುವೆ ನಡೆದ ಗಲಾಟೆಯಲ್ಲಿ ರವಿಯನ್ನು ಕೊಲೆ ಮಾಡಲಾಗಿತ್ತು.

'ಆರೋಪಿಗೆ ಸಾಕಷ್ಟು ಬಾರಿ ಹುಡುಕಾಟ ನಡೆಸಲಾಗಿತ್ತು. ಮನೆಗೂ ತೆರಳಿ ನೋಟಿಸ್ ನೀಡಲಾಗಿತ್ತು. ಗಜೇಂದ್ರ ಪುಟಾಣಿ ಪವರ್ ಸೇರಿದಂತೆ ಕನ್ನಡದಲ್ಲಿ ಕೆಲವು ಚಿತ್ರಗಳ ನಿರ್ದೇಶನ ಮಾಡಿದ್ದ. ತಮಿಳು ಭಾಷೆಯ ಚಿತ್ರಗಳಲ್ಲೂ ಕೆಲಸ ಮಾಡಿದ್ದ' ಎಂದು ಮೂಲಗಳು ಹೇಳಿವೆ.

ವಿಶ್ವನಾಥ್‌ಗೆ ವ್ಯಂಗ್ಯಚಿತ್ರ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘವು ಜಿ. ಕೃಷ್ಣಕಾಂತ್ ನೆನಪಿನಲ್ಲಿ ನೀಡುವ 2024ರ ಸಾಲಿನ ವಾರ್ಷಿಕ ಪ್ರಶಸ್ತಿಗೆ ಎಚ್.ಎಸ್. ವಿಶ್ವನಾಥ್ ಆಯ್ಕೆ ಆಗಿದ್ದಾರೆ.



ಪ್ರಶಸ್ತಿಯು ₹5000 ನಗದು ಮತ್ತು ಫಲಕವನ್ನು ಒಳಗೊಂಡಿದೆ. ವಿಶ್ವನಾಥ್ ಅವರ ವ್ಯಂಗ್ಯಚಿತ್ರಗಳು 1973 ರಿಂದ ಕನ್ನಡದ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅನೇಕ ವ್ಯಂಗ್ಯಚಿತ್ರ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.



ಬ್ಲಾಂಕೆಟ್ ವಿತರಣೆ

ಭಾರತಿ ನಗರ ನಾಗರಿಕರ ವೇದಿಕೆ ವತಿಯಿಂದ ಕಾಕ್ಸ್ ಟೌನ್‌ನ ಗಂಗಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಬುಧವಾರ ಹಿರಿಯ ನಾಗರಿಕರಿಗೆ ನಟಿಯರಾದ ತಾರಾ ಅನುರಾಧಾ, ಸುಧಾರಾಣಿ, ಕಾರ್ಮಿಕ ಇಲಾಖೆ ಹೆಚ್ಚುವರಿ ಆಯುಕ್ತ ಮಂಜುನಾಥ್ ಹಾಗೂ ಭಾರತಿನಗರ ನಾಗರಿಕರ ವೇದಿಕೆ ಅಧ್ಯಕ್ಷ ಎನ್.ಎಸ್.ರವಿ ಅವರು ಬ್ಲಾಂಕೆಟ್ ವಿತರಿಸಿದರು.

ಅಪಘಾತ: ವಿದ್ಯಾರ್ಥಿ ಸೇರಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ ಸೇರಿ ಇಬ್ಬರು ಮೃತಪಟ್ಟಿದ್ದು, ಒಬ್ಬ ವಿದ್ಯಾರ್ಥಿ ಗಾಯಗೊಂಡಿದ್ದಾರೆ.

ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಅಪಘಾತದಲ್ಲಿ ಅತಿವೇಗವಾಗಿ ಬಂದ ಬೈಕ್‌ವೊಂದು ರಸ್ತೆ ದಾಟುತ್ತಿದ್ದ ಎಂಜಿನಿಯರ್ ವಿದ್ಯಾರ್ಥಿಗಳಿಗೆಡಿಕ್ಕಿಹೊಡೆದಪರಿಣಾಮಕಲಬುರಗಿಯ ಕಿರಣ್(19) ಮೃತಪಟ್ಟಿದ್ದಾರೆ. ಚೇತನ್(19) ಗಾಯಗೊಂಡಿದ್ದಾರೆ.

ಎಂವಿಐಟಿ ಜಂಕ್ಷನ್ ಬಳಿ ಈ ಘಟನೆ ನಡೆದಿದೆ. ಕೃತ್ಯ ಎಸಗಿದ ಬೈಕ್ ಸವಾರ ವಿಜಯ್(25) ಎಂಬಾತನನ್ನು ಬಂಧಿಸಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು. ಯಲಹಂಕದ ಎಂವಿಐಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಥಮ ವರ್ಷದ ಬಿ.ಇ ವ್ಯಾಸಂಗ ಮಾಡುತ್ತಿರುವ ಕಿರಣ್, ಕಾಲೇಜು ಸಮೀಪದ ಹಾಸ್ಟೆಲ್‌ನಲ್ಲಿ ವಾಸವಾಗಿದ್ದರು.

ಮಂಗಳವಾರ ರಾತ್ರಿ ತನ್ನ ಐವರು ಸ್ನೇಹಿತರ ಜತೆ ಹಾಸ್ಟೆಲ್ ಸಮೀಪದ ಬರ್ಗರ್ ಸೆಂಟರ್‌ಗೆ ಹೋಗಿ ವಾಪಸ್ಸಾ ಗುತ್ತಿದ್ದರು. ಈ ವೇಳೆ ರಸ್ತೆ ವಿಭಜಕ ದಾಟುವಾಗ ಕೆಂಪೇಗೌಡ ವಿಮಾನ ನಿಲ್ದಾಣ ರಸ್ತೆ ಕಡೆಯಿಂದ ನಗರದ ಕಡೆಗೆ ವೇಗವಾಗಿ ಬಂದ ಬೈಕ್ ಏಕಾಏಕಿ ಕಿರಣ್ ಹಾಗೂ ಚೇತನ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಿರಣ್ ಮತ್ತು ಚೇತನ್ ರಸ್ತೆಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು.

ಕೂಡಲೇ ಸ್ನೇಹಿತರು, ಸ್ಥಳೀಯರ ನೆರವಿನಿಂದ ಸಮೀಪದ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆಯೇ ಕಿರಣ್ ತೀವ್ರ ರಕ್ತಸ್ರಾವದಿಂದ ಮೃತಪಟ್ಟಿ ದ್ದಾರೆ. ಚೇತನ್ ಕಾಲಿಗೆ ಗಂಭೀರ ಪೆಟ್ಟುಬಿದ್ದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ಬೈಕ್ ಸವಾರ ಸಾವು: ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕ್‌ವೊಂದು ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೂಡ್ಲು ನಿವಾಸಿ ಶಶಿಕುಮಾರ್(35) ಮೃತಪಟ್ಟವರು.

ಮಂಗಳವಾರ ರಾತ್ರಿ 10.30ಕ್ಕೆ ಸಿಂಗಸಂದ್ರದ ಸಿಲ್ವರ್ ಕೌಂಟಿ ರಸ್ತೆಯ ಬಿರ್ಲಾ ಜಂಕ್ಷನ್ ಬಳಿ ಈ ಘಟನೆ ನಡೆದಿದೆ. ಎಚ್‌ಎಸ್‌ಆರ್ ಲೇಔಟ್‌ನ ಟ್ರಾವೆಲ್ಸ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಬೈಕ್ ಸವಾರ, ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ ಆಗುತ್ತಿದ್ದ ವೇಳೆ ಅಪಘಾತ ನಡೆದಿದೆ.

ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿ ನೆರವು

ಸೌದಿಯಲ್ಲಿ ಸಂಕಷ್ಟದಲ್ಲಿದ್ದ ಯುವಕನ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌದಿ ಅರೇಬಿಯಾದಲ್ಲಿ ಸುಮಾರು ಹತ್ತು ತಿಂಗಳು ಊಟ, ವಸತಿಗಾಗಿ ಪರದಾಡಿದ್ದ, ರಾಮನಗರದ ಯುವಕ ಮೊಹಮ್ಮದ್ ಅಶ್ಫಾಕ್ ಅವರನ್ನು ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿ ಸ್ವದೇಶಕ್ಕೆ ಕರೆತಂದಿದೆ.

ಸಹೋದರಿ ಮದುವೆಗಾಗಿ ಹಣ ಸಂಪಾದಿಸಲು ಸುಮಾರು ₹2 ಲಕ್ಷ ವೆಚ್ಚ ಮಾಡಿ ಏಜೆಂಟ್ ಮೂಲಕ ಸೌದಿ ಅರೇಬಿಯಾಗೆ ತೆರಳಿದ್ದ, ಅಲ್ಲಿ ಸಮಸ್ಯೆಗೆ ಸಿಲುಕಿದ್ದ ಮೊಹಮ್ಮದ್ ಅಶ್ಫಾಕ್ ಅವರು ಆ ದೇಶದಲ್ಲಿ ನರಕಯಾತನೆ ಅನುಭವಿಸಿದ್ದರು. ಅವರನ್ನು ಸುರಕ್ಷಿತವಾಗಿ ರಾಜ್ಯಕ್ಕೆ ಕರೆತರುವಲ್ಲಿ ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿ ಯಶಸ್ವಿ ಆಗಿದೆ.

ಶಿವಾಜಿನಗರದ ಜಾನ್ಸನ್ ಮಾರುಕಟ್ಟೆಯ ಮೊಹಮ್ಮದ್ ಫೀರ್ ಎಂಬುವವರು ಮೊಹಮ್ಮದ್ ಅಶ್ಫಾಕ್‌ನಿಗೆ ಸೌದಿ ಅರೇಬಿಯಾದಲ್ಲಿ ಅಮೆಜಾನ್ ಕಂಪನಿಯಲ್ಲಿ ಸಹಾಯಕ ಹುದ್ದೆ ಕೊಡಿಸುವುದಾಗಿ ₹1 ಲಕ್ಷ ಪಡೆದಿದ್ದರು. ಬಳಿಕ ಸೆಪ್ಟೆಂಬರ್‌ನಲ್ಲಿ ಮುಂಬೈಗೆ ಕರೆಸಿಕೊಂಡು ಒಂದು ತಿಂಗಳು ಮೊಹಮ್ಮದ್ ಅಶ್ಫಾಕ್ ಅವರನ್ನು ಇರಿಸಿಕೊಂಡಿದ್ದರು. ಅಲ್ಲಿಂದ ಟ್ರಾವೆಲರ್ ಎಂದು ಸೌದಿ ಅರೇಬಿಯಾಗೆ ಕಳುಹಿಸಿದ್ದು, ಅಲ್ಲಿ ಎರಡು ತಿಂಗಳು ಕೆಲಸ, ಸಂಬಳವಿಲ್ಲದೆ ಕಾಯಿಸಿದ್ದರು ಎನ್ನಲಾಗಿದೆ. ಹೇಳಿದ್ದ ಕಂಪನಿಯಲ್ಲಿ ಕೆಲಸ ಕೊಡಿಸದೇ ಕೊನೆಗೆ ಯಾವುದೋ ಸಂಸ್ಥೆಯಲ್ಲಿ ಕೊಡಿಸಲಾಗಿತ್ತು. ಹೆಚ್ಚಿನ ಸಂಪಾದನೆಯಿಲ್ಲದೆ ಮೊಹಮ್ಮದ್ ಅಶ್ಫಾಕ್ ಅವರು ತೊಂದರೆಗೆ ಒಳಗಾಗಿದ್ದರು.



ರಾಜ್ಯಕ್ಕೆ ಸುರಕ್ಷಿತವಾಗಿ ಮರಳಿದ ಮೊಹಮ್ಮದ್ ಅಶ್ಫಾಕ್ ಅವರನ್ನು ಅವರ ತಾಯಿ ನೂರ್‌ಬಾನು ಅವರಿಗೆ ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷೆ ಆರತಿ ಕೃಷ್ಣ ಅವರು ಒಪ್ಪಿಸಿದರು.

'ಕುಟುಂಬದವರಿಗೆ ಅಲ್ಲಿನ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಿದ್ದರು. ಕೆಲವು ದಾಖಲೆಗಳಿಲ್ಲದ ಕಾರಣಕ್ಕೆ ಅಲ್ಲಿನ ಸ್ಥಳೀಯರೂ ಅಶ್ಫಾಕ್ ಅವರಿಗೆ ನೆರವು ನೀಡಿರಲಿಲ್ಲ. ಬಳಿಕ ಜೆಡ್ಡಾಗೆ ಬಂದು ಮಸೀದಿಯೊಂದರಲ್ಲಿ ವಾಸ್ತವ್ಯ ಮಾಡಿದ್ದರು. ಅಲ್ಲಿನ ಕನ್ನಡ ಸಂಘದ ಸದಸ್ಯರಾದ ಜಲಾಲ್ ಬೇಗ್ ಅವರಿಗೆ ವಿಷಯ ತಿಳಿಸಿದ್ದರು. ನಂತರ ಜೆಡ್ಡಾ ಕನ್ನಡ ಸಂಘದ ಮಾಜಿ ಅಧ್ಯಕ್ಷ ಮಹಮ್ಮದ್ ಸೈಫ್ ಉದ್ದಿನ್ ಅವರು ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷೆ ಆರತಿ ಕೃಷ್ಣ ಅವರನ್ನು ಸಂಪರ್ಕಿಸಿದ್ದರು. ನಂತರ, ಮೊಹಮ್ಮದ್ ಅಶ್ಫಾಕ್ ಅವರನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಕರೆಸಿಕೊಳ್ಳಲಾಗಿತ್ತು.

'ಕಾನ್ಸುಲ್ ಜನರಲ್ ಅವರನ್ನು ಸಂಪರ್ಕಿಸಿ ಮೊಹಮ್ಮದ್ ಅಶ್ಫಾಕ್ ಅವರನ್ನು ಸ್ವದೇಶಕ್ಕೆ ಕರೆತರುವ ಪ್ರಯತ್ನ ಮಾಡಲಾಯಿತು. ಕೆಲವು ಏಜೆಂಟ್‌ಗಳು ಈ ರೀತಿಯಾಗಿ ವರ್ಕ್ ಪರ್ಮಿಟ್ ಸೇರಿದಂತೆ ಟ್ರಾವೆಲರ್ ಎಂದು ತೋರಿಸಿ ಹೊರದೇಶಗಳಲ್ಲಿ ಕೆಲಸ ಕೊಡಿಸುವುದಾಗಿ ವಂಚಿಸುವ ಕೆಲಸ ಮಾಡುತ್ತಿದ್ದಾರೆ. ಎಚ್ಚರಿಕೆ ವಹಿಸಬೇಕು' ಎಂದು ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷೆ ಆರತಿ ಕೃಷ್ಣ ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಕ್ಟೋಬರ್‌ನಿಂದ ಈ ರೀತಿಯ 18 ಪ್ರಕರಣಗಳು ದಾಖಲಾಗಿವೆ. ಕಾಂಬೋಡಿಯಾ ಮತ್ತು ವಿಯೆಟ್ನಾಂನಿಂದ ಮೂವರು, ಕೊಲ್ಲಿ ರಾಷ್ಟ್ರಗಳಿಂದ 15 ಮಂದಿಯನ್ನು ರಕ್ಷಿಸಿ, ಕರೆ ತರಲಾಗಿದೆ ಎಂದು ಮಾಹಿತಿ ನೀಡಿದರು.

'ವಿದೇಶದಲ್ಲಿ ಪುತ್ರ ಸಮಸ್ಯೆಗೆ ಸಿಲುಕಿದ್ದಾನೆ ಎಂದು ಏಜೆಂಟ್ ಮಹಮ್ಮದ್ ಪೀರ್ ಅವರಿಗೆ ಅನೇಕ ಬಾರಿ ತಿಳಿಸಿದ್ದೆ. ಅವರು ಗಮನ ಹರಿಸಲಿಲ್ಲ. ಫೆಬ್ರುವರಿಯಲ್ಲಿ ಅಶೋಕ್‌ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೆ. ಅದೂ ಪ್ರಯೋಜನ ಆಗಲಿಲ್ಲ. ಜುಲೈ 8ರಂದು ಆರತಿ ಕೃಷ್ಣ ಅವರನ್ನು ಭೇಟಿ ಮಾಡಿ, ಮಾಹಿತಿ ನೀಡಿದ್ದೆ. ಜುಲೈ 14ರಂದು ಆತ ಮನೆಗೆ ಬಂದಿದ್ದಾನೆ' ಎಂದು ಯುವಕನ ತಾಯಿ ನೂರ್‌ಬಾನು ಹೇಳಿದರು.





ಎನ್‌ಆರ್ ರಸ್ತೆಯಲ್ಲಿ ತ್ಯಾಜ್ಯ ತುಂಬಿದ್ದ ಆಟೊಗಳಿಂದ ಬರುತ್ತಿದ್ದ ದುರ್ವಾಸನೆ ಸಹಿಸಲಾಗದೆ ಯುವತಿಯರು ಮೂಗುಮುಚ್ಚಿಕೊಂಡು ಹೆಜ್ಜೆ ಹಾಕಿದರು (ಎಡ ಚಿತ್ರ). ಹೊಂಬೇಗೌಡನಗರ ಸರ್ಕಾರಿ ಶಾಲೆ ಮುಂಭಾಗವೇ ಬಿದ್ದಿದ್ದ ಕಸದ ರಾಶಿ ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಫಲಿಸಿದ ಮಾತುಕತೆ; ಬುಧವಾರ ರಾತ್ರಿಯಿಂದಲೇ ವಿಲೇವಾರಿ ಶುರು

ಬಡಾವಣೆಗಳಲ್ಲೇ ಉಳಿದ ಕಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಟ್ಟಗಾನಹಳ್ಳಿ, ಕಣ್ಣೂರು ಕಲ್ಲಿನ ಕ್ವಾರಿಯಲ್ಲಿ ತ್ಯಾಜ್ಯ ಸುರಿಯುವುದನ್ನು ತಡೆದು, ಪ್ರತಿಭಟಿಸಿದ್ದರಿಂದ ನಗರದ ಹಲವೆಡೆ ಆಟೊ, ಲಾರಿ, ರಸ್ತೆಗಳಲ್ಲೇ ಕಸ ಉಳಿದುಕೊಂಡಿತ್ತು.

ಬಿಬಿಎಂಪಿ ಅವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡುತ್ತಿದೆ ಎಂದು ಭೂಭರ್ತಿ ಹಾಗೂ ಸಂಸ್ಕರಣಾ ಘಟಕಗಳಿಗೆ ತ್ಯಾಜ್ಯ ಸಾಗಣೆಯನ್ನು ಸ್ಥಳೀಯರು ತಡೆದಿದ್ದರು. ಇದರಿಂದ ನಗರದ ಎಲ್ಲ ಭಾಗಗಳಲ್ಲಿ ತ್ಯಾಜ್ಯ ರಸ್ತೆಯಲ್ಲಿಯೇ ಉಳಿದುಕೊಂಡಿತ್ತು.

ಮನೆಮನೆಯಿಂದ ಕಸ ಸಂಗ್ರಹ ಮಾಡುವ ಕಾರ್ಯವೂ ಬುಧವಾರ ನಡೆಯಲಿಲ್ಲ. ಕಸ ತುಂಬಿಸಿಕೊಂಡಿದ್ದ ಆಟೊಗಳು ರಸ್ತೆಗಳಲ್ಲಿಯೇ ನಿಂತಿದ್ದವು. ಹಲವು ರಸ್ತೆಗಳಲ್ಲೇ ಕಸ ಹಾಕಲಾಗಿತ್ತು. ಜನರು ದುರ್ವಾಸನೆ ತಡೆಯಲಾರದೆ ಮೂಗುಮುಚ್ಚಿಕೊಂಡು ಸಾಗಿದರು.

ಮಾತುಕತೆ ಯಶಸ್ವಿ: ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರು ಬುಧವಾರ ಆ ಪ್ರದೇಶದ ನಾಯಕರೊಂದಿಗೆ ಸಮಾಲೋಚನೆ ನಡೆಸಿ, ಸಮಸ್ಯೆ ಪರಿಹರಿಸುವ ಭರವಸೆ ನೀಡಿದರು. ಇದಾದ ನಂತರ ಬುಧವಾರ ರಾತ್ರಿಯಿಂದಲೇ ನಗರದಿಂದ ತ್ಯಾಜ್ಯ ಸಾಗಣೆ ಆರಂಭವಾಗಿದೆ.

‘ಎರಡು ದಿನಗಳಿಂದ ನಗರದಲ್ಲಿದ್ದ ತ್ಯಾಜ್ಯವನ್ನು ಸಾಗಣೆ ಮಾಡುವ ಪ್ರಕ್ರಿಯೆ ಬುಧವಾರ ರಾತ್ರಿಯಿಂದ ಆರಂಭವಾಗಿದೆ. ಎರಡು ಪಾಳಿಯಲ್ಲಿ ಕೆಲಸ ನಿರ್ವಹಿಸಿ ನಗರದಲ್ಲಿರುವ ತ್ಯಾಜ್ಯವನ್ನು ಶೀಘ್ರ ವಿಲೇವಾರಿ ಮಾಡಲಾಗುತ್ತದೆ’ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿಯ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದರು.

ರಾಮಮೂರ್ತಿನಗರ: ಎಲ್ಲೆಲ್ಲೂ ತ್ಯಾಜ್ಯ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ರಾಮಮೂರ್ತಿನಗರ ವಾರ್ಡಿನ ಹಲವು ಬಡಾವಣೆಗಳಲ್ಲಿ ಬಿಬಿಎಂಪಿ ಸರಿಯಾದ ರೀತಿಯಲ್ಲಿ ಕಸ ನಿರ್ವಹಣೆ ಮಾಡದೇ ಇರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಕಸದ ರಾಶಿ ಬೀಳುತ್ತಿದೆ. ಸೊಳ್ಳೆಗಳು ಉತ್ಪತ್ತಿಯಾಗಿ ರೋಗ ಹರಡುವ ಭೀತಿ ಎದುರಾಗಿದೆ.

ರಾಮಮೂರ್ತಿನಗರ, ಎನ್.ಆರ್.ಐ ಬಡಾವಣೆ, ಕಲ್ಕೆರೆ, ಕನಕನಗರ, ಶಾಂತಿ ಬಡಾವಣೆ, ಕೌದೇನಹಳ್ಳಿ, ಕಲ್ಕೆರೆ ಮುಖ್ಯರಸ್ತೆ ಮುಂತಾದೆಡೆಗಳಲ್ಲಿ ಕಸ ವಿಲೇವಾರಿಯನ್ನು ಬಿಬಿಎಂಪಿ ಮಾಡದೇ ಇರುವುದರಿಂದ ಈ ಸಮಸ್ಯೆ ಉಂಟಾಗಿದೆ.

ಬಿಬಿಎಂಪಿಯವರು ಕಸ ಒಯ್ಯಲು ಬಾರದೇ ಇರುವುದರಿಂದ ಜನರು ರಸ್ತೆ ಮೇಲೆಯೇ ಕಸ ಬಿಸಾಡಿ ಹೋಗುತ್ತಿದ್ದಾರೆ. ಜಾನುವಾರುಗಳು ಮತ್ತು ಬೀದಿನಾಯಿಗಳು ಆಹಾರ ಹುಡುಕಲು ಬಂದು ಕಸವನ್ನು ರಸ್ತೆಗೆ ಚೆಲ್ಲಾಡುತ್ತಿವೆ.



ಕಲ್ಕೆರೆ ಸ್ಮಶಾನ ಮುಂಭಾಗದ ಮುಖ್ಯರಸ್ತೆಯಲ್ಲೇ ಬಿದ್ದಿದ್ದ ಕಸದಲ್ಲಿ ಆಹಾರ ಹುಡುಕುತ್ತಿದ್ದ ಜಾನುವಾರುಗಳು

‘ರಾಮಮೂರ್ತಿನಗರದಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ. ಕೆಲದಿನಗಳಿಂದ ಬಿಬಿಎಂಪಿ ಕಸ ವಿಲೇವಾರಿ ಮಾಡುತ್ತಿಲ್ಲ. ಮಹದೇವಪುರ ವಲಯದಲ್ಲಿ ಡೆಂಗಿ ಸೇರಿದಂತೆ ಸಾಂಕ್ರಾಮಿಕ ರೋಗಗಳು ಹೆಚ್ಚುತ್ತಿವೆ’ ಎಂದು ಶಾಂತಿ ಬಡಾವಣೆ ನಿವಾಸಿ ಶಿವಕುಮಾರ್ ತಿಳಿಸಿದರು.

‘ಕಸ ಸರಿಯಾಗಿ ವಿಲೇವಾರಿಯಾಗುತ್ತಿಲ್ಲ. ಮಳೆಗಾಲದಲ್ಲಿ ಕಸ ಕೊಳೆಯುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಸೊಳ್ಳೆಗಳ ನಿಯಂತ್ರಣ ಮಾಡುವ ಔಷಧ ಸಿಂಪಡಿಸುವ ಕೆಲಸವನ್ನೂ ಬಿಬಿಎಂಪಿ ಮಾಡಿಲ್ಲ. ಜನರು ಕಾಯಿಲೆ ಬಿದ್ದು, ಆಸ್ಪತ್ರೆಗೆ ಹೋಗುವುದು ಹೆಚ್ಚಾಗಿದೆ’ ಎಂದು ಬಿಬಿಎಂಪಿಯ ಮಾಜಿ ಸದಸ್ಯ ಕಲ್ಕೆರೆ ಶ್ರೀನಿವಾಸ್ ದೂರಿದರು.

‘ಸೊಳ್ಳೆ ನಿಯಂತ್ರಣಕ್ಕೆ ಔಷಧ ಸಿಂಪಡಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದೇವೆ. ಔಷಧ ಬೇಕಾದಷ್ಟು ಸಂಗ್ರಹವಿದ್ದರೂ ‘ಇಲ್ಲ’ ಎಂದು ಉತ್ತರಿಸುತ್ತಿದ್ದಾರೆ’ ಎಂದು ಆರೋಪಿಸಿದರು.

26ಕ್ಕೆ ‘ಇಎಲ್‌ಸಿಐಎ ಟೆಕ್ ಶೃಂಗಸಭೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ತಂತ್ರಜ್ಞಾನ ವಿನಿಮಯ ಹಾಗೂ ಉದ್ಯಮಶೀಲತೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಮೊದಲ ಬಾರಿಗೆ ಎಲೆಕ್ಟ್ರಾನಿಕ್ಸ್ ಸಿಟಿ ಇಂಡಸ್ಟ್ರಿಯಲ್ ಅಸೋಸಿಯೇಷನ್‌ನಿಂದ (ಇಎಲ್‌ಸಿಐಎ) ಇದೇ 26ರಂದು ‘ಇಎಲ್‌ಸಿಐಎ ಟೆಕ್ ಶೃಂಗಸಭೆ’ ಹಮ್ಮಿಕೊಳ್ಳಲಾಗಿದೆ.

‘ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯಲ್ಲಿ 200ಕ್ಕೂ ಹೆಚ್ಚು ಕಂಪನಿಗಳಿವೆ. ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಇವೆ. 2 ಲಕ್ಷಕ್ಕೂ ಹೆಚ್ಚು ವೃತ್ತಿಪರರು ವಿವಿಧ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ’ ಎಂದು ಅಸೋಸಿಯೇಷನ್ ಅಧ್ಯಕ್ಷ



ವಿ. ಶ್ರೀರಾಮ್‌ಕುಮಾರ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಾಣಿಜ್ಯ, ಕೈಗಾರಿಕೆ ಸೇರಿ ವಿವಿಧ ವಲಯದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಕುರಿತು ಉದ್ದಿಮೆದಾರರು ಅನುಭವ ಹಂಚಿಕೊಳ್ಳಲು ಈ ಶೃಂಗಸಭೆಯು ವೇದಿಕೆಯಾಗಲಿದೆ. ವಿವಿಧ ವಲಯದ 250ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ’ ಎಂದು ವಿವರಿಸಿದರು.

‘ಇನ್ಫೊಸಿಸ್ ಸಹ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು, ಅಂದು ಬೆಳಿಗ್ಗೆ 9.30ಕ್ಕೆ ಶೃಂಗಸಭೆಯನ್ನು ಉದ್ಘಾಟಿಸಲಿದ್ದಾರೆ. ಬೆಂಗಳೂರಿನ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿಯ ನಿರ್ದೇಶಕ ದೇಬಬ್ರತಾ ದಾಸ್ ಮುಖ್ಯ ಭಾಷಣ ಮಾಡಲಿದ್ದಾರೆ. ಒಟ್ಟು ನಾಲ್ಕು ಅಧಿವೇಶನಗಳು ನಡೆಯಲಿವೆ ಎಂದು ವಿವರಿಸಿದರು.

ಮೊದಲ ಅಧಿವೇಶನದಲ್ಲಿ ಇನ್ಫೊಸಿಸ್ ಉಪಾಧ್ಯಕ್ಷ ಅಶೋಕ್ ಪಾಂಡ, ಐಐಎಸ್‌ಸಿ ಪ್ರಾಧ್ಯಾಪಕ ಭಾರದ್ವಾಜ್ ಅಮೃತೂರ್, ಮೈಕ್ರೊ ಟೆಕ್ನಾಲಜಿ ಸೆಂಟರ್‌ನ ಮುಖ್ಯ ತಂತ್ರಜ್ಞಾನ ಅಧಿಕಾರಿ ಸಂದೀಪ್ ಆಲೂರು, ಟೆಕ್ನಿಕಲ್ ಸೆಂಟರ್ ಇಂಡಿಯಾದ ಮುಖ್ಯಸ್ಥೆ ಲತಾ ಚೆಂಬ್ರಕಲಂ ಅವರು ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

‘ಇಂಡಸ್ಟ್ರಿ 4.0’ ಅಡಿ ಕೈಗಾರಿಕಾ ಯಾಂತ್ರೀಕರಣ, ಡಿಜಿಟಲೀಕರಣ, ನೆಟ್‌ವರ್ಕಿಂಗ್, ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ವಿಲೀನಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಯಲಿದೆ. ‘ಇಂಟರ್‌ನೆಟ್ ಆಫ್ ಥಿಂಗ್ಸ್’ ಮತ್ತು ರೊಬೊಟಿಕ್ ತಂತ್ರಜ್ಞಾನದ ಬಗ್ಗೆ ಪರಿಣತರು ಮಾಹಿತಿ ಹಂಚಿಕೊಳ್ಳಲಿದ್ದಾರೆ. ತಂತ್ರಜ್ಞಾನದ ಸುಸ್ಥಿರ ಬೆಳವಣಿಗೆ ಬಗ್ಗೆಯೂ ತಜ್ಞರು ವಿವರಣೆ ನೀಡಲಿದ್ದಾರೆ’ ಎಂದು ಹೇಳಿದರು.

ಅಸೋಸಿಯೇಷನ್ ಸದಸ್ಯರಾದ ಎ. ವೈದ್ಯನಾಥನ್, ಎ. ವಿನಯ್‌ಕುಮಾರ್, ಸಲಹೆಗಾರರಾದ ಎನ್.ಎಸ್. ರಮಾ, ಪ್ರಧಾನ ವ್ಯವಸ್ಥಾಪಕ ಶಿವಯೋಗಿ ವಿ. ಬಳ್ಳೊಳ್ಳಿ ಸುದ್ದಿಗೋಷ್ಠಿಯಲ್ಲಿದ್ದರು.

ಸಂಕ್ಷಿಪ್ತ ಸುದ್ದಿ

ವೈಮಾನಿಕ, ರಕ್ಷಣಾ ಕ್ಷೇತ್ರ ಒಂದು ಲಕ್ಷ ಮಂದಿಗೆ ತರಬೇತಿ

ಬೆಂಗಳೂರು: ವೈಮಾನಿಕ ಮತ್ತು ರಕ್ಷಣಾ ವಲಯದಲ್ಲಿ ಒಂದು ಲಕ್ಷ ಜನರಿಗೆ ತರಬೇತಿ ನೀಡುವ ಜೊತೆಗೆ, 70 ಸಾವಿರ ಉದ್ಯೋಗ ಕಲ್ಪಿಸಲಾಗುವುದು ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಬೆಂಗಳೂರಿನಲ್ಲಿ ಬುಧವಾರ ಆರಂಭವಾದ ಎರಡು ದಿನಗಳ ರಕ್ಷಣಾ ಮತ್ತು ವೈಮಾನಿಕ 13ನೇ ‘ಸ್ಟ್ರಾಟೆಜಿಕ್ ಎಲೆಕ್ಟ್ರಾನಿಕ್ಸ್’ ಶೃಂಗಸಭೆ ಉದ್ಘಾಟಿಸಿ ಅವರು ಮಾತನಾಡಿದರು. ‘ವೈಮಾನಿಕ ಮತ್ತು ರಕ್ಷಣಾ ನೀತಿ–2022-27ರಂತೆ ಪರೀಕ್ಷಾ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ. ₹60 ಸಾವಿರ ಕೋಟಿ ಹೂಡಿಕೆ ಮಾಡಲಾಗುತ್ತಿದೆ. ಕೃತಕ ಬುದ್ಧಿಮತ್ತೆ (ಎಐ), ಯಂತ್ರ ಕಲಿಕೆ ಮತ್ತು ಸುಧಾರಿತ ಸಾಮಗ್ರಿಗಳಲ್ಲಿ ಸಂಶೋಧನೆಗೆ ಆದ್ಯತೆ ನೀಡುತ್ತಿದೆ. ವ್ಯವಹಾರವನ್ನು ಸುಲಭಗೊಳಿಸಲು ₹500 ಕೋಟಿ ಪ್ರೋತ್ಸಾಹದೊಂದಿಗೆ ನಿಯಮಾವಳಿಗಳನ್ನು ಸರಳೀಕರಿಸಲಾಗುತ್ತದೆ. 200 ಕ್ಕೂ ಹೆಚ್ಚು ಪಾಲುದಾರರ ಸಹಯೋಗ ಪಡೆಯಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಆ.15ರವರೆಗೆ ಕಲಾ ಪ್ರದರ್ಶನ

ಬೆಂಗಳೂರು: ಗೀತಾಂಜಲಿ ಮೈನಿ ಫೌಂಡೇಷನ್ ಲ್ಯಾವೆಲ್ಲೆ ರಸ್ತೆಯಲ್ಲಿರುವ ಗ್ಯಾಲರಿ ಜಿಯಲ್ಲಿ ‘ಮೊಸಾಯಿಕ್ ಆಫ್ ಮಾಡರ್ನಿಟಿ’ ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಕಲಾ ಪ್ರದರ್ಶನಕ್ಕೆ ಚಾಲನೆ ದೊರೆತಿದ್ದು, ಆ.15ರವರೆಗೆ ಈ ಪ್ರದರ್ಶನ ನಡೆಯಲಿದೆ.



ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಈ ಪ್ರದರ್ಶನ ನಡೆಯಲಿದೆ.

ಕಲಾವಿದರಾದ ಜೈ ಖನ್ನಾ, ದಿನೇಶ್ ಮಗರ್, ಆರೋಹಿ ಸಿಂಗ್, ದಾಮೋದರ್ ಅವಾರೆ, ತುಷಾರ್ ಶಿಂಧೆ, ರೂನಾ ಬಿಸ್ವಾಸ್, ಅನಾಮಿಕ ಕುಚ್ಚನ್ ಹಾಗೂ ತ್ರಿದಿಬ್ ಬೇರಾ ಅವರ ಕಲಾಕೃತಿಗಳು ಪ್ರದರ್ಶನದಲ್ಲಿವೆ ಎಂದು ಪ್ರಕಟಣೆ ತಿಳಿಸಿದೆ.

ಪ್ರೊ.ಕೆ.ಸಿದ್ದಪ್ಪ ಅಭಿನಂದನಾ ಸಮಾರಂಭದಲ್ಲಿ ಗೊ.ರು.ಚ ಬಣ್ಣನೆ

‘ವೈಜ್ಞಾನಿಕ ಪ್ರಜ್ಞೆಗಾಗಿ ದುಡಿದ ಜೀವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅವಕಾಶ ವಂಚಿತ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಪ್ರಜ್ಞೆ ಮೂಡಿಸುವುದಕ್ಕಾಗಿ ದುಡಿದ ಶ್ರೇಯ ಪ್ರೊ.ಕೆ.ಸಿದ್ದಪ್ಪ’ ಅವರಿಗೆ ಸಲ್ಲುತ್ತದೆ ಎಂದು ಸಾಹಿತಿ ಗೊ.ರು. ಚನ್ನಬಸಪ್ಪ ಹೇಳಿದರು.

ವಿಶ್ರಾಂತ ಕುಲಪತಿ ಕೆ.ಸಿದ್ದಪ್ಪ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಿದ್ದಪ್ಪ ಅವರು ವಿದ್ಯಾರ್ಥಿಗಳಿಗೆ ಯಾವುದರ ಅಗತ್ಯವಿದೆ ಎಂಬುದನ್ನು ಮನಗಂಡು, ಕೆಲಸವನ್ನು ಮಾಡುತ್ತಿದ್ದರು. ಅವರು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದಾಗ ಸ್ನಾತಕೋತ್ತರ ಪದವಿ ಹಂತದಲ್ಲಿ ಮೊದಲ ಬಾರಿಗೆ ಕಂಪ್ಯೂಟರ್ ಅಪ್ಲಿಕೇಷನ್ ಕೋರ್ಸ್ ಆರಂಭಿಸಿದ್ದರು’ ಎಂದರು.

ಎನ್‌ಇಪಿಗೆ ವಿರೋಧ ಅನಗತ್ಯವಾಗಿತ್ತು: ‘ಭಾರತವು ಸ್ವಾತಂತ್ರ್ಯಗೊಂಡ ನಂತರ ಮಾಡಬೇಕಿದ್ದ ಮೊದಲ ಕೆಲಸವೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸುವುದು. ಆದರೆ ಅಂದಿನ ನಾಯಕರು ಶಿಕ್ಷಣ ಕ್ಷೇತ್ರದಲ್ಲಿ ಕೇವಲ ಭೌತಿಕ ನಿರ್ಮಾಣಗಳಿಗೆ ಒತ್ತು ನೀಡಿದರು. ಆದರೆ ಆ ಸವಲತ್ತುಗಳನ್ನು ಬಳಸಿಕೊಳ್ಳುವಂತಹ ಯುವ ಸಮುದಾಯವನ್ನು ರೂಪಿಸಲಿಲ್ಲ. ಅಂತಹ ಯತ್ನವನ್ನು ಸಿದ್ದಪ್ಪನವರು ಮಾಡಿದರು’ ಎಂದು ಅಭಿನಂದನಾ ಸಮಿತಿಯ ಅಧ್ಯಕ್ಷ ಮತ್ತು ಕೈಗಾರಿಕೋದ್ಯಮಿ ಎಸ್.ರುದ್ರೇಗೌಡ ಹೇಳಿದರು.



ನಗರದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಪ್ರೊ.ಕೆ.ಸಿದ್ದಪ್ಪ ಮತ್ತು ಪತ್ನಿ ರತ್ನಾ ಸಿದ್ದಪ್ಪ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. (ಎಡದಿಂದ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನಿವೃತ್ತ ಕಾರ್ಯದರ್ಶಿ ವಿ.ಎಸ್‌. ರಾಮಮೂರ್ತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರ ಗೊ.ರು. ಚನ್ನಬಸಪ್ಪ, ಅಭಿನಂದನಾ ಸಮಿತಿಯ ಹಿರಿಯ ಉಪಾಧ್ಯಕ್ಷ ಎಸ್‌.ಎಸ್ ಪಾಟೀಲ, 'ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್'ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್‌. ಸಿಂಧ್ಯ, ಶಾಸಕ ಶಾಮನೂರು ಶಿವಶಂಕರಪ್ಪ, ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಪಿ. ವೆಂಕಟರಾಮಯ್ಯ ಮತ್ತು ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್‌.ಕಿರಣ್‌ಕುಮಾರ್ ಇದ್ದರು ಪ್ರಜಾವಾಣಿ ಚಿತ್ರ

‘ಈಚಿನ ವರ್ಷಗಳಲ್ಲಿ ಕೇಂದ್ರ ಸರ್ಕಾರವು ಹೊಸ ಶಿಕ್ಷಣ ನೀತಿಯನ್ನು ತಂದಿತ್ತು. ಆದರೆ ಆ ಶಿಕ್ಷಣ ನೀತಿ ಕುರಿತಾಗಿ ಅನಗತ್ಯವಾದ ಭಿನ್ನಾಭಿಪ್ರಾಯಗಳನ್ನು ರೂಪಿಸಿ, ವಿರೋಧಿಸಲಾಯಿತು. ಅದು ವಿಷಾದನೀಯ’ ಎಂದರು.

ರಸ್ತೆ ಅಗಲ 50 ಮೀಟರ್‌ಗೆ ಕಡಿತ; ಮುಖ್ಯಮಂತ್ರಿ ಸಭೆಯಲ್ಲಿ ನಿರ್ಧಾರ

ಪಿಆರ್‌ಆರ್ ಭೂಸ್ವಾಧೀನಕ್ಕೆ ಸಾಲ

• ನವೀನ್ ಮಿನೇಜಸ್

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆಗೆ (ಪಿಆರ್‌ಆರ್) ಅಗತ್ಯವಿರುವ ಸುಮಾರು 3,500 ಎಕರೆ ಭೂಮಿ ಸ್ವಾಧೀನದ ಸಂಪೂರ್ಣ ವೆಚ್ಚವನ್ನು ಸರ್ಕಾರವೇ ಭರಿಸಲು ನಿರ್ಧರಿಸಿದ್ದು, ಇದಕ್ಕಾಗಿ ಬ್ಯಾಂಕ್ ಸಾಲ ಮಾಡಲು ತೀರ್ಮಾನಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಬುಧವಾರ ನಡೆದ ನಗರದ ಸಚಿವರು, ಶಾಸಕರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಯೋಜಿಸಿರುವ 74 ಕಿ.ಮೀ ಉದ್ದದ ಪಿಆರ್‌ಆರ್ ನಿರ್ಮಾಣಕ್ಕೆ ₹27 ಸಾವಿರ ಕೋಟಿ ಮೊತ್ತಕ್ಕೆ ಟೆಂಡರ್ ಕರೆಯಲಾಗಿತ್ತು. ಆದರೆ, ಯಾರೂ ಆಸಕ್ತಿ ತೋರಿರಲಿಲ್ಲ. ಖಾಸಗಿಯವರು ಭೂಸ್ವಾಧೀನ ಮತ್ತು ನಿರ್ಮಾಣ ವೆಚ್ಚಕ್ಕೆ ಸರ್ಕಾರದಿಂದ 'ನಿಧಿ'ಯನ್ನು ಬಯಸಿದ್ದರು. ಗುತ್ತಿಗೆದಾರರನ್ನು ಹುಡುಕುವಲ್ಲಿಯೇ ಬಿಡಿಎ ಎರಡು ವರ್ಷ ಕಳೆದಿದ್ದು, ಹಲವು ಬಾರಿ ಟೆಂಡರ್ ಆಹ್ವಾನಿಸಿತ್ತು.

ಪಿಆರ್‌ಆರ್ ಅಭಿವೃದ್ಧಿಗಿರುವ ಸಾಧ್ಯತೆಗಳು, ಸಂಪನ್ಮೂಲ ಕ್ರೋಢೀಕರಣದ ಅವಕಾಶಗಳನ್ನು ಪರಿಶೀಲಿಸಿ, ವಿವರವಾದ ಪ್ರಸ್ತಾವವನ್ನು ಸಚಿವ ಸಂಪುಟದ ಮುಂದೆ ಮಂಡಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

'ಭೂಸ್ವಾಧೀನಕ್ಕೆಂದೇ ಯೋಜನೆಯ ಶೇ 80ರಷ್ಟು ಹಣ ವೆಚ್ಚವಾಗಲಿದ್ದು, ಇದನ್ನು ಸಾಲದ ರೂಪದಲ್ಲಿ ಪಡೆದುಕೊಳ್ಳಲು ನಿರ್ಧರಿಸಲಾಗಿದೆ. ನಿರ್ಮಾಣ ವೆಚ್ಚಕ್ಕೆ ಜಪಾನ್ ಇಂಟರ್ ನ್ಯಾಷನಲ್ ಕೋಆಪರೇಷನ್ ಏಜೆನ್ಸಿ (ಜೈಕಾ) ಹಣ ನೀಡಲಿದೆ' ಎಂದು ಮೂಲಗಳು ತಿಳಿಸಿವೆ.

'ಭೂಸ್ವಾಧೀನಕ್ಕೆ ಹಣ ಪಡೆಯಲು ಖಾಸಗಿಯವರನ್ನು ಅವಲಂಬಿಸಿರುವುದರಿಂದ ಯೋಜನೆ ವಿಳಂಬವಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮಾದರಿಯಂತೆ ಸರ್ಕಾರವೇ ಭೂಸ್ವಾಧೀನದ ವೆಚ್ಚ ಭರಿಸಬಹುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸಭೆಯಲ್ಲಿ ಸಲಹೆ ನೀಡಿದರು ಎನ್ನಲಾಗಿದೆ.

'ಪಿಆರ್‌ಆರ್ ನಿರ್ಮಾಣದ ನಂತರ ಎರಡೂ ಬದಿಯ ಜಮೀನನ್ನು ಹರಾಜು ಹಾಕುವ ಮೂಲಕ ರಾಜ್ಯ ಸರ್ಕಾರ ಸಾಲವನ್ನು ಮರುಪಾವತಿ ಮಾಡಬಹುದಾಗಿದೆ. ಈ ಭಾಗದಲ್ಲಿ ಉತ್ತಮ ಮೌಲ್ಯ ಪಡೆಯಲು, ಹೆಚ್ಚುವರಿ ಫ್ಲೋರ್ ಏರಿಯಾ ರೆಷಿಯೊ (ಎಫ್‌ಎಆರ್) ನೀಡಲೂ ಸರ್ಕಾರ ಆಲೋಚಿಸಿದೆ' ಎಂದು ಮೂಲಗಳು ತಿಳಿಸಿವೆ.

'102 ಕಿ.ಮೀ ಎಲಿವೇಟೆಡ್ ಕಾರಿಡಾರ್ ಪ್ರಸ್ತಾವ'

ಐದು ವರ್ಷಗಳ ಹಿಂದೆ ಸಾರ್ವಜನಿಕ ವಿರೋಧದಿಂದ ಕೈಬಿಟ್ಟಿದ್ದ 102 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಮಾಡುವ ಬಗ್ಗೆ ಮುಖ್ಯಮಂತ್ರಿಯವರ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಸ್ತಾಪಿಸಿದ್ದಾರೆ.

'ಎಲಿವೇಟೆಡ್ ಕಾರಿಡಾರ್ ಯೋಜನೆ, ಸುರಂಗ ರಸ್ತೆ ಮತ್ತು ಹೊಸ ರಸ್ತೆಗಳ ನಿರ್ಮಾಣ ಬಗ್ಗೆ ಚರ್ಚೆ ನಡೆಸಿದೆವು. ಈ ಎಲ್ಲ ಯೋಜನೆಗಳನ್ನು ಸಚಿವ ಸಂಪುಟದ ಮುಂದೆ ಇರಿಸಲಾಗುತ್ತದೆ. ಸಚಿವರ ಸಲಹೆಗಳನ್ನು ಪಡೆಯಲು ಸಭೆ ನಡೆಸಲಾಯಿತು. ನಗರದ ಶಾಸಕರ ಸಭೆಯನ್ನು 27ರಂದು ನಡೆಸಿ, ಮತ್ತೊಮ್ಮೆ ಈ ಬಗ್ಗೆ ಚರ್ಚಿಸಲಾಗುತ್ತದೆ' ಎಂದರು.

ನಗರದ ಉತ್ತರ ಮತ್ತು ದಕ್ಷಿಣ ಹಾಗೂ ಪೂರ್ವ ಮತ್ತು ಪಶ್ಚಿಮವನ್ನು ಸಂಪರ್ಕಿಸಲು ಎಲಿವೇಟೆಡ್ ಕಾರಿಡಾರ್ ನಿರ್ಮಾಣವನ್ನು ಈ ಹಿಂದೆ ಪ್ರಸ್ತಾಪಿಸಲಾಗಿತ್ತು. ಸಂಚಾರ ತಜ್ಞರು ಮತ್ತು ನಾಗರಿಕರ ಗುಂಪುಗಳು ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿದ್ದರಿಂದ ಟೆಂಡರ್ ಅನ್ನು ರದ್ದುಪಡಿಸಲಾಗಿತ್ತು.

ಬಿಬಿಎಂಪಿ ಪುನಾರಚನೆ ಸಮಿತಿ ಸದಸ್ಯರೊಂದಿಗೆ ಬುಧವಾರ ಸಂಜೆ ಪ್ರತ್ಯೇಕವಾಗಿ ಸಭೆ ನಡೆಸಿದ ಡಿ.ಕೆ. ಶಿವಕುಮಾರ್ ಅವರು, 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ'ಗೆ ಅಂತಿಮ ರೂಪ ನೀಡಲು ಸೂಚಿಸಿದರು. ಈ ಕರಡು ಸೋಮವಾರ ನಡೆಯುವ ಸಚಿವ ಸಂಪುಟದ ಮುಂದೆ ಬರುವ ಸಾಧ್ಯತೆಗಳಿವೆ.

ಪಿಆರ್‌ಆರ್ ಅಗಲ 50 ಮೀಟರ್



'ಭೂಸ್ವಾಧೀನದ ವೆಚ್ಚವನ್ನು ಕಡಿಮೆ ಮಾಡಲು, ರಾಜ್ಯ ಸರ್ಕಾರ, ಪಿಆರ್‌ಆರ್ ಅಗಲವನ್ನು 50 ಮೀಟರ್‌ಗೆ ಕಡಿತಗೊಳಿಸಲು ಉದ್ದೇಶಿಸಿದೆ.

ಈ ರಸ್ತೆ ಎಂಟು ಮುಖ್ಯ ಮಾರ್ಗಗಳು ಮತ್ತು ಎರಡು ಸರ್ವೀಸಸ್ ರಸ್ತೆಯನ್ನು ಹೊಂದಲಿದೆ. ಯೋಜನೆಯ ಮೊದಲ ಹಂತದಲ್ಲಿ ಪಿಆರ್‌ಆರ್ 100 ಮೀಟರ್ ಅಗಲ ಹೊಂದಿದ್ದು, ಸೈಕಲ್ ಮಾರ್ಗ, ಹಸಿರು ಮಾರ್ಗ, ಅಗಲವಾದ ವಿಭಜಕ ನಿರ್ಮಿಸುವ ಯೋಜನೆ ಇತ್ತು. ಇದಕ್ಕೆಲ್ಲ ಹೆಚ್ಚಿನ ಜಮೀನು ಅಗತ್ಯವಿರುವುದರಿಂದ, ಅದಕ್ಕೆ ಅಧಿಕ ವೆಚ್ಚಾಗುವುದರಿಂದ ಅವುಗಳನ್ನು ಕೈಬಿಟ್ಟು ಯೋಜನೆಯನ್ನು ಮರು ವಿನ್ಯಾಸಗೊಳಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ. ನಗರದಲ್ಲಿ ವೈಜ್ಞಾನಿಕವಾಗಿ ಘನತ್ಯಾಜ್ಯ ವಿಲೇವಾರಿ ಹಾಗೂ ಆಯವ್ಯಯದಲ್ಲಿ ಘೋಷಿಸಿದಂತೆ ಸಂಚಾರ ದಟ್ಟಣೆ ನಿವಾರಣೆಗೆ ಸುರಂಗ ರಸ್ತೆ ನಿರ್ಮಾಣ ಅಭಿವೃದ್ಧಿ, ರಾಜಕಾಲುವೆಗಳ ಬಫರ್ ಝೋನ್‌ಗಳಲ್ಲಿ ರಸ್ತೆ ನಿರ್ಮಿಸುವ ಯೋಜನೆಗಳ ಕುರಿತು ಚರ್ಚೆ ನಡೆಯಿತು.

ಪ್ರಥಮ ಏಕಾದಶಿ: ತಪ್ತ ಮುದ್ರಾ ಧಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಥಮ ಏಕಾದಶಿ ಪ್ರಯುಕ್ತ ನಗರದ ವಿವಿಧ ಮಠಗಳಲ್ಲಿ ಬುಧವಾರ ತಪ್ತ ಮುದ್ರಾ ಧಾರಣೆ ನಡೆಯಿತು.

ಬಸವನಗುಡಿಯ ಉತ್ತರಾದಿ ಮಠದಲ್ಲಿ ಸತ್ಯಾತ್ಮತೀರ್ಥ ಸ್ವಾಮೀಜಿ ಅವರಿಂದ ಭಕ್ತರು ತಪ್ತ ಮುದ್ರಾ ಧಾರಣೆ ಮಾಡಿಸಿಕೊಂಡರು. ಜಯನಗರದ 5ನೇ ಬಡಾವಣೆಯಲ್ಲಿರುವ ನಂಜನಗೂಡು ರಾಘವೇಂದ್ರ ಸ್ವಾಮಿ ಮಠದಲ್ಲಿ ಮಂತ್ರಾಲಯದ ಸುಬುಧೇಂದ್ರ ಸ್ವಾಮೀಜಿ ತಪ್ತ ಮುದ್ರಾ ಧಾರಣೆ ನಡೆಸಿದರು. ಯಲಹಂಕ ಉಪನಗರದ ರಾಘವೇಂದ್ರ ಸ್ವಾಮಿ ಮಠದಲ್ಲಿ ಗುರುರಾಜ ಸೇವಾ ಸಮಿತಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿದ್ಯಾವಲ್ಲಭ ಮಾಧವ ಸ್ವಾಮೀಜಿ, ರಾಘವೇಂದ್ರ ಕಾಲೊನಿಯ ಶ್ರೀಪಾದರಾಜ ಮಠದಲ್ಲಿ ಸುಜಯನಿಧಿ ತೀರ್ಥ ಸ್ವಾಮೀಜಿ ತಪ್ತ ಮುದ್ರಾ ಧಾರಣೆ ನಡೆಸಿಕೊಟ್ಟರು.

ಬಸವನಗುಡಿಯ ಗೋವರ್ಧನ ಕ್ಷೇತ್ರ, ಪೂರ್ಣಪ್ರಜ್ಞ ವಿದ್ಯಾಪೀಠ, ಮಲ್ಲೇಶ್ವರದ ಪಲಿಮಾರು ಮಠ, ಅದಮಾರು ಮಠ, ರಾಯರ ಮಠ, ಸೋಸಲೆ ಮಠ ಸೇರಿ ನಗರದ ವಿವಿಧೆಡೆ ಈ ತಪ್ತ ಮುದ್ರಾ ಧಾರಣೆ ವಿವಿಧ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆಯಿತು.

ಮಠಗಳಲ್ಲಿ ಬೆಳಿಗ್ಗೆ 7ರಿಂದ ಪ್ರಾರಂಭವಾದ ಈ ತಪ್ತ ಮುದ್ರಾ ಧಾರಣೆ, ರಾತ್ರಿ 10 ಗಂಟೆಯವರೆಗೂ ನಡೆಯಿತು. ಮಠದ ಶಿಷ್ಯರು ಮತ್ತು ಭಕ್ತರು ಭಗವಂತನ ಚಿಹ್ನೆಗಳಾದ ಚಕ್ರ, ಶಂಖದ ಮುದ್ರೆ ಹಾಕಿಸಿಕೊಂಡರು. ಕೆಲವಡೆ ಸುದರ್ಶನ ಹೋಮ ಹಾಗೂ ಪ್ರವಚನಗಳೂ ನಡೆದವು.

ನಂಜನಗೂಡು ರಾಘವೇಂದ್ರ ಸ್ವಾಮಿ ಮಠದಲ್ಲಿ ಸುಬುಧೇಂದ್ರ ಸ್ವಾಮೀಜಿ ಅವರು ರಾಮಚಂದ್ರ ದೇವರ ಸಂಸ್ಥಾನ ಪೂಜೆಯನ್ನು ನೆರವೇರಿಸಿ, ಸುದರ್ಶನ ಹೋಮದೊಂದಿಗೆ ಬಂಗಾರದ ತೊಟ್ಟಿಲಿನಲ್ಲಿ ದೇವರಿಗೆ ತೊಟ್ಟಿಲ ಸೇವೆಯನ್ನು ನೆರವೇರಿಸಿದರು. ಮಹಾ ಮಂಗಳಾರತಿಯೊಂದಿಗೆ ಪ್ರಾರ್ಥನೆಯನ್ನು ಸಲ್ಲಿಸಿದ ಅವರು, ತಾವು 'ತಪ್ತ ಮುದ್ರಾ ಧಾರಣೆ'ಯನ್ನು ಸ್ವೀಕರಿಸಿದರು. ನಂತರ ಮಠದ ಶಿಷ್ಯರಿಗೆ ಮತ್ತು ಭಕ್ತರಿಗೆ ನಿರಂತರವಾಗಿ ತಪ್ತ ಮುದ್ರಾ ಧಾರಣೆಯನ್ನು ನೆರವೇರಿಸಿದರು. ಇದೇ ವೇಳೆ ಮಠದಲ್ಲಿ ಪಂಡಿತರಿಂದ ಭಾಗವತ ಪ್ರವಚನ ಮಾಲಿಕೆಯ ಉಪನ್ಯಾಸವೂ ನೆರವೇರಿತು.



ಉತ್ತರಾದಿ ಮಠದಲ್ಲಿ ಸತ್ಯಾತ್ಮತೀರ್ಥ ಸ್ವಾಮೀಜಿ ಅವರು ಭಕ್ತರಿಗೆ ತಪ್ತ ಮುದ್ರಾ ಧಾರಣೆ ಮಾಡಿದರು
–ಪ್ರಜಾವಾಣಿ ಚಿತ್ರ / ಎಂ.ಎಸ್.ಮಂಜುನಾಥ್



ಕರ್ನಾಟಕ ಸ್ಪೋರ್ಟ್ಸ್ ಅಸೋಸಿಯೇಷನ್ ಮತ್ತು ಎಸ್‌ಜಿಎಸ್ ಇಂಟರ್‌ನ್ಯಾಷನಲ್ ಯೋಗಾ ಫೌಂಡೇಷನ್ ಕಾಲೇಜ್ ಆ್ಯಂಡ್ ರಿಸರ್ಚ್ ಸೆಂಟರ್ ಜಂಟಿಯಾಗಿ ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಅಂತರ ರಾಜ್ಯ ಯೋಗಾಸನ ಸ್ಪರ್ಧೆಯಲ್ಲಿ ಸಂಗೀತಾ ಅವರು ಮಹಿಳಾ ವಿಭಾಗದಲ್ಲಿ (40ರಿಂದ 50 ವರ್ಷ) ಪ್ರಥಮ ಹಾಗೂ ಸಾಂಪ್ರದಾಯಿಕ ಯೋಗಾಸನ ಚಾಂಪಿಯನ್‌ಶಿಪ್‌ನಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡರು

ನಗರದಲ್ಲಿ ಇಂದು

41ನೇ ಅಂತರ ವಿಭಾಗ ನಾಟಕ ಸ್ಪರ್ಧೆ–2024: 'ಮರ ಗಿಡ ಬಳ್ಳಿ' ನಾಟಕ ಪ್ರದರ್ಶನ, ನಿರ್ದೇಶನ: ಪುನೀತ್ ಕುಮಾರ್ ಎಂ., ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಶ್ರೀನಿವಾಸ ಕಲ್ಯಾಣ ಪ್ರವಚನ ಮಾಲಿಕೆ: ಪವನಾಚಾರ್ ಹುನಗುಂದ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 7

ಹರಿದಾಸ ಮಂಜರಿ: ಗಾಯನ: ಜಯಸಿಂಹ ಪೇರೂರ್, ಹಾರ್ಮೋನಿಯಂ: ಶ್ರೀಪಾದದಾಸ್, ತಬಲಾ: ಗೋಪಾಲ್ ಗುಡಿಬಂಡಿ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಸಂಜೆ 7

ಗೀತಾ ರಾಘವೇಂದ್ರ ಅಭಿನಯಿಸುವ 'ಪ್ರೇಮಮಯಿ ಹಿಡಿಂಬೆ' ಏಕವ್ಯಕ್ತಿ ರಂಗ ಪ್ರಯೋಗ: ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ರಂಗ ವಿಜಯಾ, ಸ್ಥಳ: ಕೇಶವ ಕಲ್ಪ, ನಂ.9, ಈಸ್ಟ್ ಲಿಂಕ್ ರಸ್ತೆ, 2ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 7

ಹರಿನಾಮ ಸಂಕೀರ್ತನೆ: ಗಾಯನ: ಶ್ರೀದೇವಿ ಪ್ರಸನ್ನ, ಪಿಟೀಲು: ಎಸ್. ಶಶಿಧರ್, ಮೃದಂಗ: ಅನಿರುದ್ಧ ವಾಸುದೇವ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೆ ಬಡಾವಣೆ, ಸಂಜೆ 7.30

ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನಿವೃತ್ತ ಐಪಿಎಸ್ ಅಧಿಕಾರಿ ಬಿ.ಕೆ. ಶಿವರಾಂ ಹೇಳಿಕೆ

'ರವಿಕೆ ತೆರಿಗೆ ಇದ್ದಿದ್ದರೆ ಶಿರಚ್ಛೇದ ಖಚಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತೆರಿಗೆ ನೀಡದೇ ರವಿಕೆ ಧರಿಸುವಂತಿಲ್ಲ ಎಂಬ ನಿಯಮ ಈಗ ಜಾರಿ ಮಾಡಿದ್ದರೆ ಅಂಥವರ ಶಿರಚ್ಛೇದ ಆಗುತ್ತಿತ್ತು' ಎಂದು ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ. ಶಿವರಾಂ ಹೇಳಿದರು.

ಸಮಾನ ಮನಸ್ಕರ ಬಳಗ ಪತ್ರಕರ್ತ ಆರ್.ಜಯಕುಮಾರ್ ನುಡಿನಮನ ಕಾರ್ಯಕ್ರಮದ ಭಾಗವಾಗಿ ಬುಧವಾರ ಹಮ್ಮಿಕೊಂಡಿದ್ದ 'ದ್ರಾವಿಡ ಚಳವಳಿ ಮತ್ತು ವರ್ತಮಾನ' ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಧರ್ಮ, ದೇವರ ಹೆಸರಿನಲ್ಲಿ ಹಲವು ಆಚರಣೆಗಳನ್ನು ಜೀವಂತವಾಗಿಡುವ ಮೂಲಕ ತಳ ಸಮುದಾಯಗಳನ್ನು ಶೋಷಣೆ ಮಾಡುತ್ತಾ ಬಂದಿದ್ದರು. ಆಳ್ವಿಕೆ ನಡೆಸಿದ ರಾಜರೂ ಪೋಷಿಸಿದರು. ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಇಂತಹ ಆಚರಣೆಗಳ ವಿರುದ್ಧ ಶಾಂತವಾಗಿ ಧ್ವನಿ ಎತ್ತಿದ ಗೌತಮ ಬುದ್ಧನನ್ನೇ ಮನುವಾದಿಗಳು ತಮ್ಮ ದಶಾವತಾರಕ್ಕೆ ಸೇರ್ಪಡೆ ಮಾಡಿಕೊಂಡರು. ದಾಸ–ಆಚಾರ್ಯರು ಇಂತಹ ಪರಿಕಲ್ಪನೆಗಳನ್ನು ವಿಸ್ತರಿಸಿದರು' ಎಂದು ಆರೋಪಿಸಿದರು.

'ದುಡಿವ ವರ್ಗಗಳನ್ನು ತುಳಿಯುವ ಪ್ರಯತ್ನ ನಿರಂತರವಾಗಿ ನಡೆದಿದೆ. ದ್ರಾವಿಡ ವಿಚಾರಧಾರೆಯ ಬೇರು ದಕ್ಷಿಣ ಭಾರತೀಯರ ಮನದಲ್ಲಿ ಆಳವಾಗಿ ಬೇರೂರಿದೆ. ಹಾಗಾಗಿ, ಅವರ ಪ್ರಯತ್ನ ಫಲ ನೀಡುತ್ತಿಲ್ಲ. ಅದರ ಶ್ರೇಯ ಬುದ್ಧ, ಬಸವ, ಅಂಬೇಡ್ಕರ್, ಪೆರಿಯಾರ್ ಅವರಿಗೆ ಸಲ್ಲಬೇಕು' ಎಂದರು.

'ಗಣಪತಿ ಕಾಲ್ಪನಿಕ ದೇವತೆ' ಎಂದ ಸಾಣೇಹಳ್ಳಿ ಶ್ರೀಗಳ ವಿರುದ್ಧ ಮನುವಾದಿ ಮನಃಸ್ಥಿತಿಯ ಜನರು ತಿರುಗಿ ಬಿದ್ದರು. ಅವರ ಹೇಳಿಕೆ ಸತ್ಯವಾಗಿತ್ತು. ಶೋಷಿತ ಸಮುದಾಯಗಳು ಅವರ ಪರ ಗಟ್ಟಿಯಾಗಿ ನಿಲ್ಲಬೇಕಿತ್ತು' ಎಂದು ಹೇಳಿದರು.

ವಿಚಾರವಾದಿ ಬಿ. ಕಾರ್ಲೋಸ್ ಮಾತನಾಡಿ, 'ಪೆರಿಯಾರ್ ವಿಚಾರಧಾರೆ ತಮಿಳುನಾಡಿನ ಜನರಲ್ಲಿ ಆಳವಾಗಿ ಇರುವುದರಿಂದ ರಾಷ್ಟ್ರೀಯ ಪಕ್ಷಗಳಿಗೆ ಇಂದಿಗೂ ನೆಲೆ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಕರ್ನಾಟಕದ ಜನರು ಬಸವಣ್ಣನ ತತ್ವ ಪಾಲಿಸದೇ ರಾಜಕೀಯ ವ್ಯವಸ್ಥೆ ಹಳಿ ತಪ್ಪಿದೆ. ಇಂದಿನ ಯುವ ಪೀಳಿಗೆಗೆ ಪೆರಿಯಾರ್, ಬಸವಣ್ಣನವರ ವಿಚಾರಧಾರೆ ತಲುಪಿಸುವ ಕೆಲಸ ಆಗಬೇಕಿದೆ ಎಂದರು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟಿಸಿದರು. ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪತ್ರಕರ್ತ ಎಸ್.ಆರ್. ಆರಾಧ್ಯ, ಮಾನವ ಬಂಧುತ್ವ ವೇದಿಕೆಯ ಸಂಚಾಲಕ ಎ.ಬಿ. ರಾಮಚಂದ್ರಪ್ಪ, ಅನಂತ ನಾಯಕ್ ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಬುಧವಾರ ಸಮಾನ ಮನಸ್ಕರ ಬಳಗ ಪತ್ರಕರ್ತ ಆರ್.ಜಯಕುಮಾರ್ ಸ್ಮರಣೆಗಾಗಿ ಆಯೋಜಿಸಿದ್ದ 'ದ್ರಾವಿಡ ಚಳವಳಿ ಮತ್ತು ವರ್ತಮಾನ' ವಿಚಾರ ಸಂಕಿರಣದಲ್ಲಿ ಲೀಲಾ ಸಂಪಿಗೆ, ಬಿ.ಕೆ.ಶಿವರಾಂ, ಬಿ.ಕಾರ್ಲೋಸ್, ನ್ಯಾ.ಎಚ್.ಎನ್.ನಾಗಮೋಹನದಾಸ್, ಎ.ಬಿ.ರಾಮಚಂದ್ರಪ್ಪ ಭಾಗವಹಿಸಿದ್ದರು
– ಪ್ರಜಾವಾಣಿ ಚಿತ್ರ

ವಾರದ ನಾಲ್ಕು ದಿನದ ವೆಚ್ಚ ಭರಿಸುವ ಭರವಸೆ ಕೊಟ್ಟ ಎಪಿಎಫ್

ಮಕ್ಕಳಿಗೆ ಮೊಟ್ಟೆ: ಪ್ರೇಮ್‌ಜಿ ನೆರವು

ಪ್ರಜಾವಾಣಿ ವಾರ್ತೆ

51.96 ಲಕ್ಷ ಮಧ್ಯಾಹ್ನದ ಬಿಸಿಯೂಟ ಪಡೆಯುವ ಮಕ್ಕಳು | **42.57 ಲಕ್ಷ** ಮೊಟ್ಟೆ ಸೇವಿಸುವ ಮಕ್ಕಳು | **8.12 ಲಕ್ಷ** ಚಿಕ್ಕಿ, ಬಾಳೆಹಣ್ಣು ಸೇವಿಸುವ ಮಕ್ಕಳು | **1.27 ಲಕ್ಷ** ಬೇಡಿಕೆ ಸಲ್ಲಿಸದ ಮಕ್ಕಳು

ಬೆಂಗಳೂರು: ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ವಾರದಲ್ಲಿ ಆರು ದಿನ ಬೇಯಿಸಿದ ಮೊಟ್ಟೆ ಪೂರೈಸಲು ಶಾಲಾ ಶಿಕ್ಷಣ ಇಲಾಖೆಯೊಂದಿಗೆ 'ಅಜೀಂ ಪ್ರೇಮ್‌ಜೀ ಫೌಂಡೇಷನ್' (ಎಪಿಎಫ್) ಕೈಜೋಡಿಸಿದೆ.

ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಗಾಗಿ ಒಂದರಿಂದ ಹತ್ತನೇ ತರಗತಿವರೆಗಿನ ಮಕ್ಕಳಿಗೆ ವಾರಕ್ಕೆ ಎರಡು ದಿನ ಮೊಟ್ಟೆ ವಿತರಣೆ ಮಾಡಲಾಗುತ್ತಿದೆ. ಕಳೆದ ಶೈಕ್ಷಣಿಕ ಸಾಲಿನಲ್ಲಿ 38.37 ಲಕ್ಷ ಮಕ್ಕಳು ಮೊಟ್ಟೆಗೆ ಬೇಡಿಕೆ ಸಲ್ಲಿಸಿದ್ದರು. ಉಳಿದ ಮಕ್ಕಳಿಗೆ ಶೇಂಗಾ ಚಿಕ್ಕಿ, ಬಾಳೆ ಹಣ್ಣು ನೀಡಲಾಗಿತ್ತು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ವಾರದ ಎಲ್ಲ ಶಾಲಾ ದಿನಗಳಲ್ಲೂ ಮೊಟ್ಟೆ ವಿತರಿಸಲು ಶಾಲಾ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಈ ಯೋಜನೆಗೆ ಹಣಕಾಸಿನ ನೆರವು ನೀಡಲು ವಿಪ್ರೊ ಸಂಸ್ಥಾಪಕ ಅಜೀಂ ಪ್ರೇಮ್‌ಜಿ ಮುಂದೆ ಬಂದಿದ್ದಾರೆ. ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಗೆ ನೆರವು ನೀಡುತ್ತಿರುವ ತಮ್ಮ ಅಜೀಂ ಪ್ರೇಮ್‌ಜೀ ಫೌಂಡೇಷನ್ ಮೂಲಕ ₹1,500 ಕೋಟಿ ದೇಣಿಗೆ ನೀಡುತ್ತಿದ್ದಾರೆ. ವಾರದಲ್ಲಿ ಎರಡು ದಿನಗಳ ಮೊಟ್ಟೆ ವೆಚ್ಚವನ್ನು ಸರ್ಕಾರ ಹಾಗೂ ನಾಲ್ಕು ದಿನಗಳ ವೆಚ್ಚವನ್ನು ಫೌಂಡೇಷನ್ ಭರಿಸಲಿವೆ.

ಪ್ರಸ್ತುತ ಶೈಕ್ಷಣಿಕ ವರ್ಷದ ಜೂನ್‌ನಿಂದ ಸುಮಾರು 42.57 ಲಕ್ಷ ಮಕ್ಕಳಿಗೆ ಮೊಟ್ಟೆ ನೀಡಲಾಗುತ್ತಿದೆ. ಪ್ರತಿ ಮಗುವಿಗೆ ವಾರಕ್ಕೆ ಎರಡು ಬಾರಿಯಂತೆ ವರ್ಷಕ್ಕೆ ಸರಾಸರಿ 100 ಮೊಟ್ಟೆಗಳು ಸಿಗುತ್ತಿವೆ. ಸರ್ಕಾರದ ನಿರ್ಧಾರ ಜಾರಿಯಾದ ನಂತರ ಪ್ರತಿ ಮಗುವಿಗೂ ವರ್ಷಕ್ಕೆ 300 ಮೊಟ್ಟೆಗಳು ದೊರಕಲಿವೆ.

ಒಂದು ಮೊಟ್ಟೆಗೆ ₹6 ನಿಗದಿ ಮಾಡಲಾಗಿದೆ. ಈ ಹಣವನ್ನು ಶಾಲಾ ಶಿಕ್ಷಣ ಇಲಾಖೆ ಆಯಾ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಸಮಿತಿಯ ಜಂಟಿ ಖಾತೆಗೆ ಹಾಕುತ್ತದೆ. ಅದರಲ್ಲಿ ಮೊಟ್ಟೆ ಬೇಯಿಸಲು ಇಂಧನ ವೆಚ್ಚ 30 ಪೈಸೆ, ಮೊಟ್ಟೆಯ ಗಟ್ಟಿಪದರ(ವೋಡು) ಸುಲಿದು ಕೊಡುವ ಬಿಸಿಯೂಟ ತಯಾರಕರು ಮತ್ತು ಸಹಾಯಕರಿಗೆ 30 ಪೈಸೆ, ಸಾಗಣೆ ವೆಚ್ಚ 20 ಪೈಸೆ ನೀಡಲಾಗುತ್ತಿದೆ. ಮೊಟ್ಟೆಗೆ ತಗುಲುವ ಒಟ್ಟು ವೆಚ್ಚದಲ್ಲಿ ಇನ್ನು ಮುಂದೆ ಮೂರನೇ ಎರಡು ಭಾಗವನ್ನು ಅಜೀಂ ಪ್ರೇಮ್‌ಜಿ ಫೌಂಡೇಷನ್ ಭರಿಸಲಿದೆ.

'ಮೊಟ್ಟೆ ವಿತರಣೆಗೆ ನೆರವು ನೀಡುವ ಕುರಿತು ಸರ್ಕಾರದ ಜೊತೆ ಜುಲೈ 20ರಂದು ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ. ಆಗಸ್ಟ್ 1ರಿಂದ ಯೋಜನೆ ಜಾರಿಯಾಗಲಿದ್ದು, ಈ ಒಪ್ಪಂದ ಮೂರು ವರ್ಷಗಳವರೆಗೆ ಜಾರಿಯಲ್ಲಿರುತ್ತದೆ' ಎಂದು ಫೌಂಡೇಷನ್‌ನ ಪ್ರಮುಖರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಕಸ ವಿಲೇವಾರಿಗೆ ಜಾಗವೇ ನಿಗದಿಯಾಗಿಲ್ಲ'

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್

ಬೆಂಗಳೂರು: 'ಬೆಂಗಳೂರಿನ ಘನತ್ಯಾಜ್ಯ ವಿಲೇವಾರಿ ಕೇಂದ್ರಗಳನ್ನು ನಗರದ ಹೊರಭಾಗಕ್ಕೆ ಸ್ಥಳಾಂತರ ಮಾಡಲು ಜಾಗವೇ ಇನ್ನೂ ನಿಗದಿಯಾಗಿಲ್ಲ. ಹೀಗಿರುವಾಗ 'ಬ್ಲಾಕ್ ಲಿಸ್ಟ್'ಗೆ ಸೇರಿರುವ ಕಂಪನಿಗೆ ಗುತ್ತಿಗೆ ನೀಡಲು ಹೇಗೆ ಸಾಧ್ಯ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

'ಕಸ ವಿಲೇವಾರಿ ಟೆಂಡರ್ ವಿಚಾರದಲ್ಲಿ ಕೇಂದ್ರದ ಮಂತ್ರಿಯೊಬ್ಬರು ನಾನು ₹15 ಸಾವಿರ ಕೋಟಿ ಲಂಚ ಪಡೆದಿದ್ದೇನೆ ಎಂದು ಆರೋಪ ಮಾಡಿದ್ದಾರೆ. ನಾವು ಕಸ ವಿಲೇವಾರಿ ಮಾಡುವ ಜಾಗಗಳ ಹುಡುಕಾಟದಲ್ಲಿದ್ದೇವೆ. ಜಾಗ ನಿಗದಿ ಮಾಡಲು ನ್ಯಾಯ ಪಂಚಾಯಿತಿ ಮಾಡುತ್ತಾ ಒದ್ದಾಡುತ್ತಿದ್ದೇವೆ. ಇನ್ನೂ ಟೆಂಡರ್ ಕರೆದಿಲ್ಲ. ಹೀಗಿರುವಾಗ 'ಬ್ಲಾಕ್ ಲಿಸ್ಟ್' ಸೇರಿರುವ ಕಂಪನಿಗೆ 30 ವರ್ಷಗಳಿಗೆ ಗುತ್ತಿಗೆ ನೀಡಲು ಹೇಗೆ ಸಾಧ್ಯ? ಈ ವಿಚಾರ ಕೋರ್ಟ್‌ನಲ್ಲಿದೆ. ಕಳೆದ ಮೂರು ದಿನಗಳಿಂದ ಮಂಡೂರಿನಲ್ಲಿ ಕಸ ವಿಲೇವಾರಿ ಪ್ರಕ್ರಿಯೆ ನಿಲ್ಲಿಸಿದ್ದಾರೆ. ಇದಕ್ಕೆ ಪರ್ಯಾಯ ಜಾಗ ಹುಡುಕುತ್ತಿದ್ದು, ನೈಸ್ ರಸ್ತೆ ಬಳಿ ಜಾಗಕ್ಕೆ ನೈಸ್ ಸಂಸ್ಥೆ ಜತೆ ಮಾತನಾಡುತ್ತಿದ್ದೇವೆ' ಎಂದು ಸುದ್ದಿಗಾರರಿಗೆ ಬುಧವಾರ ತಿಳಿಸಿದರು.

'ನಮ್ಮ ಎರಡು-ಮೂರು ಕಡೆ ಈಗಿರುವ ಕಸ ವಿಲೇವಾರಿ ಘಟಕಗಳನ್ನು ಬೆಂಗಳೂರಿನಿಂದ ಹೊರಗೆ ಸ್ಥಳಾಂತರ ಮಾಡಬೇಕಿದೆ. ಈ ಸಮಸ್ಯೆ ಹೇಗೆ ನಿಭಾಯಿಸಬೇಕು ಎಂದು ಕೆಲವು ರಾಜ್ಯಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಲಾಗಿದೆ. ಮುಖ್ಯಮಂತ್ರಿಯವರ ಜತೆ ಚರ್ಚೆ ಮಾಡಿ, ಸಚಿವ ಸಂಪುಟದಲ್ಲಿ ಪ್ರಸ್ತಾಪ ಮಾಡಿ, ನಂತರ ಸದನದ ಮುಂದಿಟ್ಟು ತೀರ್ಮಾನ ಮಾಡುತ್ತೇವೆ. ಇಷ್ಟು ದಿನ ಕಸದ ವಿಚಾರದಲ್ಲಿ ಟೆಂಡರ್ ಇಲ್ಲದೆ ದಂಧೆ ನಡೆಸುತ್ತಿದ್ದವರಿಗೆ ನಮ್ಮ ಈ ಪ್ರಕ್ರಿಯೆ ನೋಡಿ ಹೊಟ್ಟೆ ಉರಿಯುತ್ತಿದೆ' ಎಂದು ಹೇಳಿದರು.



ಆಷಾಢ ಏಕಾದಶಿ ಪ್ರಯುಕ್ತ ಮಹಾರಾಷ್ಟ್ರದ ಪಂಢರಪುರದಲ್ಲಿ ಬುಧವಾರ ವಿಠಲರುಕ್ಮಿಣಿ ದರ್ಶನಕ್ಕೆ ಲಕ್ಷಾಂತರ ಭಕ್ತರು ಸೇರಿದ್ದರು ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಪಂಢರಪುರಕ್ಕೆ ಹರಿದು ಬಂದ ಭಕ್ತ ಸಾಗರ

● ಬಸವರಾಜ್ ಸಂಪಳ್ಳಿ

ಪಂಢರಪುರ (ವಿಜಯಪುರ): ಆಷಾಢ ಏಕಾದಶಿ ಹಿನ್ನೆಲೆಯಲ್ಲಿ ಬುಧವಾರ ಪಂಢರಪುರಕ್ಕೆ ಭಕ್ತ ಸಾಗರವೇ ಹರಿದು ಬಂತು. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ, ತೆಲಂಗಾಣ ರಾಜ್ಯಗಳ ಲಕ್ಷಾಂತರ ಭಕ್ತರು, ಚಂದ್ರಭಾಗ ನದಿಯಲ್ಲಿ ಸ್ನಾನ ಮಾಡಿ ವಿಠ್ಠಲನ ದರ್ಶನ ಪಡೆದರು.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ - ಲತಾ ಶಿಂಧೆ ದಂಪತಿ ಸಂಪ್ರದಾಯದಂತೆ ಸರ್ಕಾರದ ಪರವಾಗಿ ಪ್ರಥಮ ಪೂಜೆ ನೆರವೇರಿಸಿದರು.

ತುಳಸಿ ಮಾಲೆ ಧರಿಸಿದ ಸಂತರು, ತಲೆಯ ಮೇಲೆ ತುಳಸಿಕಟ್ಟೆ ಹೊತ್ತು, ಹೆಜ್ಜೆ ಹಾಕುತ್ತಾ ಕೈಕೈ ಹಿಡಿದು ಕುಣಿದು ಸಂಭ್ರಮಿಸಿ ಪಂಢರಿನಾಥನಿಗೆ ಜೈಕಾರ ಹಾಕಿದರು. ಚಂದ್ರಭಾಗ ನದಿಯಲ್ಲಿ ಸ್ನಾನ, ನಗರ ಪ್ರದಕ್ಷಿಣೆ, ನಾಮದೇವ ಪಾಯರಿ, ಕಳಸ ದರ್ಶನ ಮಾಡಿ ಲಕ್ಷಾಂತರ ಭಕ್ತರು ವಿಠಲನ ದರ್ಶನ ಪಡೆದು ಪುನೀತರಾದರು.

ಪಂಢರಪುರದ ಪ್ರಮುಖ ಬೀದಿಗಳಲ್ಲಿ ಸಂಜೆ ವಿಠ್ಠಲ ರುಕ್ಮಿಣಿ ಪಲ್ಲಕ್ಕಿ ಉತ್ಸವ ನಡೆಯಿತು. ಏಕಾದಶಿ ಪ್ರಯುಕ್ತ ವಾರಕಾರಿ ಸಪ್ತಾಹ ಜರುಗಿತು. ಅಭಂಗಗಳನ್ನು ಹಾಡುತ್ತಾ ಕುಣಿಯುತ್ತ ಭಜನೆ, ಸಂಕೀರ್ತನೆಗಳಲ್ಲಿ ಭಕ್ತರು ಮೈಮರೆತರು.

ಸಿಂಧನೂರಿನಲ್ಲಿ ಹರಿದಾಡುತ್ತಿರುವ ವಾಲ್ಮೀಕಿ ನಿಗಮದ ಹಣ

ಒಂದೇ ಕುಟುಂಬದ ಖಾತೆಗಳಿಗೆ ₹98 ಲಕ್ಷ

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ರಾಜ್ಯದಾದ್ಯಂತ ಸದ್ದು ಮಾಡಿರುವ ಬೆನ್ನಲ್ಲೇ ಸಿಂಧನೂರು ತಾಲ್ಲೂಕಿನಲ್ಲಿ ಕೆಲವರ ಬ್ಯಾಂಕ್ ಖಾತೆಗಳಿಗೆ ನಿಗಮದ ಹಣ ಜಮಾ ಆಗಿರುವುದು ಬಯಲಾಗಿದೆ.

ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ವಿಶೇಷ ತನಿಖಾ ದಳ ಬಂಧಿಸಿದ ನಂತರ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದ ನೆಕ್ಕಂಟಿ ನಾಗರಾಜ, ನಾಗೇಶ್ವರರಾವ್ ಅವರ ಪರಿಚಯಸ್ಥರ ಖಾತೆಗಳಿಗೂ ನಿಗಮದ ಹಣ ಜಮಾ ಆಗಿರುವುದು ಬಹಿರಂಗವಾಗಿದೆ.

ನೆಕ್ಕಂಟಿ ನಾಗರಾಜ ಅವರು ತಮ್ಮ ಸಂಬಂಧಿ, ಸಿಂಧನೂರು ತಾಲ್ಲೂಕಿನ ಬೂದಿಹಾಳ ಕ್ಯಾಂಪಿನ ಕೆ.ವೆಂಕಟರಾವ್ ಅವರ ಕರ್ನಾಟಕ ಗ್ರಾಮೀಣ ಬ್ಯಾಂಕ್ ಖಾತೆಗೆ ಮಾರ್ಚ್ 8ರಂದು ₹12 ಲಕ್ಷ ಜಮಾ ಮಾಡಿದ್ದಾರೆ. ಕೆ.ವೆಂಕಟರಾವ್ ಮಕ್ಕಳಾದ ಲಕ್ಕಂಸಾನಿ ಲಕ್ಷ್ಮಿ ಖಾತೆಗೆ ₹ 25 ಲಕ್ಷ, ರತ್ನಕುಮಾರಿ ಖಾತೆಗೆ ₹ 25 ಲಕ್ಷ, ಮೊಮ್ಮಗ ಸಂದೀಪ್ ಖಾತೆಗೆ ₹ 36 ಲಕ್ಷ ಸೇರಿ ಒಟ್ಟು ₹98 ಲಕ್ಷ ಆಗಿದೆ. ಸಿಂಧನೂರು ನಗರಸಭೆ ಸದಸ್ಯರೊಬ್ಬರ ಖಾತೆಗೂ ಹಣ ಜಮಾ ಆಗಿರುವ ಮಾಹಿತಿ ಇದೆ.

'ಯಾವುದೋ ಒಂದು ಫೈನಾನ್ಸ್ ಕಂಪನಿಯಿಂದ ನಾಲ್ವರ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಆಗಿದೆ. ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಬ್ಯಾಂಕಿನ ಹಿರಿಯ ಅಧಿಕಾರಿಗಳಿಂದ ಪಡೆದುಕೊಳ್ಳಿ. ಇದು ನನ್ನ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ' ಎಂದು ಕರ್ನಾಟಕ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕ ರಾಘವೇಂದ್ರ ಹೇಳಿದ್ದಾರೆ.

'ನನ್ನ ಖಾತೆಗೆ ಹಣ ಜಮಾ ಆಗಿರುವುದು ನಿಜ. ಪರಿಚಿತರೊಬ್ಬರು ನನಗೆ ಕೊಡಬೇಕಾಗಿದ್ದ ಸಾಲವನ್ನು ಮರಳಿಸಿದ್ದಾರೆ. ಅದನ್ನು ಬಿಟ್ಟು ಬೇರೆ ಏನೂ ಇಲ್ಲ' ಎಂದು ಬೂದಿಹಾಳ ಕ್ಯಾಂಪ್ ನಿವಾಸಿ ವೆಂಕಟರಾವ್ ಪ್ರತಿಕ್ರಿಯಿಸಿದ್ದಾರೆ.

ಹಣ ಪಾವತಿ ಮಾಡಿದವರ ಹೆಸರು, ಸಾಲ ನೀಡಿದ ಮೊತ್ತ ಎಷ್ಟು ಎನ್ನುವ ಕುರಿತು ಹೇಳಲು ನಿರಾಕರಿಸುತ್ತಿದ್ದಾರೆ. ಹೀಗಾಗಿ ಇದು ನಿಗಮದ ಹಣವೇ ಇರಬಹುದು ಎಂದು ಹಲವರು ಸಂಶಯ ವ್ಯಕ್ತಪಡಿಸಿದ್ದಾರೆ.



ಶೇ 10ರಷ್ಟು ಕಮಿಷನ್

ವಾಲ್ಮೀಕಿ ನಿಗಮದಿಂದ ಕೆಲ ಹಣಕಾಸು ಸಂಸ್ಥೆಗೆ ಹಣ ವರ್ಗಾವಣೆ ಆಗಿದೆ. ಈ ಸಂಸ್ಥೆಯಿಂದ ಬಂದ ಹಣವನ್ನು ಖಾತೆ ಹೊಂದಿದವರು ನಗದು ರೂಪದಲ್ಲಿ ಮರಳಿಸಿದರೆ ಅದಕ್ಕೆ ಶೇಕಡ 10ರಷ್ಟು ಕಮಿಷನ್ ಕೊಡುವ ಆಮಿಷ ಒಡ್ಡಲಾಗಿತ್ತು ಎನ್ನಲಾಗಿದೆ. ಎಸ್‌ಐಟಿ ಹಾಗೂ ಇಡಿ ತನಿಖೆ ತೀವ್ರಗೊಂಡ ನಂತರ ಅಕ್ರಮದಲ್ಲಿ ಭಾಗಿಯಾಗಿರುವವರು ತಟಸ್ಥರಾಗಿದ್ದಾರೆ.

ಬೂದಿಹಾಳ ಕ್ಯಾಂಪಿನ ಕೆ.ವೆಂಕಟರಾವ್ ಹಾಗೂ ಅವರ ಕುಟುಂಬದವರ ಖಾತೆಗೆ ಜಮಾ ಆಗಿರುವ ಹಣವನ್ನು ಯಾರೂ ತೆಗೆದುಕೊಳ್ಳದಂತೆ ತಡೆ ಹಿಡಿಯಬೇಕು ಎಂದು ಎಸ್‌ಐಟಿ ಅಧಿಕಾರಿಗಳು ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ನೋಟಿಸ್ ನೀಡಿದ್ದಾರೆ.

ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಹಗರಣ ಬಯಲಿಗೆ ಬರುತ್ತಿದ್ದಂತೆಯೇ ಮುಖ್ಯಮಂತ್ರಿ ಅವರು ನಾಗೇಂದ್ರ ಅವರಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ಪಡೆದುಕೊಂಡಿದ್ದರು. ಅದರಂತೆ ಇದೀಗ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರ ಹೆಸರೂ ಕೇಳಿ ಬರುತ್ತಿರುವುದರಿಂದ ಮುಖ್ಯಮಂತ್ರಿ ಅವರು ದದ್ದಲ್ ರಾಜೀನಾಮೆ ಕೇಳಿದ್ದಾರೆ ಎಂಬ ಸುದ್ದಿ ಕಾಂಗ್ರೆಸ್ ಆಪ್ತ ವಲಯದಲ್ಲಿ ಹರಿದಾಡುತ್ತಿದೆ.

'ಮದ್ಯ ಖರೀದಿಗೆ ನಿಗಮದ ಹಣ ಬಳಕೆ'

ಬೆಂಗಳೂರು: 'ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಖಾತೆಯಿಂದ ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದ ಹಣವನ್ನು ಲೋಕಸಭಾ ಚುನಾವಣೆ ವೇಳೆ ಅಪಾರ ಪ್ರಮಾಣದ ಮದ್ಯ ಖರೀದಿಸಲು ಬಳಸಿರುವುದು ಪತ್ತೆಯಾಗಿದೆ' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

ನಿಗಮದ ಹಣ ದುರ್ಬಳಕೆ ಸಂಬಂಧ ಪೊಲೀಸರು ಮತ್ತು ಸಿಬಿಐ ದಾಖಲಿಸಿದ್ದ ಎಫ್‌ಐಆರ್‌ಗಳ ಆಧಾರದಲ್ಲಿ ತನಿಖೆ ನಡೆಸಲಾಗುತ್ತಿದೆ. ಈ ಸಂಬಂಧ ನಾಲ್ಕು ರಾಜ್ಯಗಳ 23 ಸ್ಥಳಗಳಲ್ಲಿ ಈಚೆಗೆ ಶೋಧಕಾರ್ಯ ನಡೆಸಲಾಗಿತ್ತು ಎಂದು ಇ.ಡಿ ತಿಳಿಸಿದೆ.

'ಮಾಜಿ ಸಚಿವ ಬಿ.ನಾಗೇಂದ್ರ ಮತ್ತು ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರಿಗೆ ಸೇರಿದ ಮನೆ/ಕಚೇರಿಗಳಲ್ಲಿ ಶೋಧ ನಡೆಸಲಾಗಿತ್ತು. ನಿಗಮದ ಖಾತೆಯಿಂದ ವರ್ಗಾವಣೆ ಮಾಡಿಕೊಂಡ ₹89.62 ಕೋಟಿಯಲ್ಲಿ ಅಪಾರ ಪ್ರಮಾಣದ ಮೊತ್ತವನ್ನು ಲೋಕಸಭಾ ಚುನಾವಣೆ ಸಂದರ್ಭದಲ್ಲಿ ವಿವಿಧೆಡೆಗೆ ವರ್ಗಾವಣೆ ಮಾಡಿರುವುದನ್ನು ದೃಢಪಡಿಸುವ ದಾಖಲೆಗಳು ಶೋಧದ ವೇಳೆ ಪತ್ತೆಯಾಗಿವೆ' ಎಂದು ಇ.ಡಿ ಹೇಳಿದೆ.

'ನಿಗಮದ ಹಣವನ್ನು ಆಂಧ್ರಪ್ರದೇಶ ಮತ್ತು ತೆಲಂಗಾಣದ ಬ್ಯಾಂಕ್‌ಗಳ 18 ಖಾತೆಗಳಿಗೆ ವರ್ಗಾವಣೆ ಮಾಡಿಕೊಳ್ಳಲಾಗಿತ್ತು. ಆ ಖಾತೆಗಳಿಂದ ಹಲವು ಶೆಲ್ ಖಾತೆಗಳಿಗೆ ಹಣವನ್ನು ವರ್ಗಾಯಿಸಲಾಗಿತ್ತು. ಹವಾಲಾ ಮೂಲಕ ನಗದು ಮತ್ತು ಚಿನ್ನದ ರೂಪದಲ್ಲೂ ಹಣ ಸಾಗಣೆ ಮಾಡಲಾಗಿದೆ. ಈ ಎಲ್ಲಾ ವರ್ಗಾವಣೆಗಳಿಗೆ ಸಂಬಂಧಿಸಿದ ದಾಖಲೆಗಳು ನಾಗೇಂದ್ರ ಮತ್ತು ಬಸನಗೌಡ ಅವರ ಮನೆ ಶೋಧದ ವೇಳೆ ಪತ್ತೆಯಾಗಿವೆ. ತನಿಖೆ ಮುಂದುವರೆದಿದೆ' ಎಂದು ಇ.ಡಿ ತಿಳಿಸಿದೆ.

ಪ್ರಕರಣದಲ್ಲಿ ನಾಗೇಂದ್ರ ಅವರನ್ನು ಐದು ದಿನಗಳವರೆಗೆ ಇ.ಡಿ ಕಸ್ಟಡಿಗೆ ಪಡೆದಿತ್ತು. ಕಸ್ಟಡಿ ಅವಧಿ ಗುರುವಾರ ಬೆಳಿಗ್ಗೆ (ಜುಲೈ 18) ಕೊನೆಯಾಗಲಿದೆ. ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಎದುರು ಗುರುವಾರ ಬೆಳಿಗ್ಗೆ ಹಾಜರುಪಡಿಸಲಾಗುತ್ತದೆ.

ಶಾಸಕ ನಾಗೇಂದ್ರ ಪತ್ನಿ ವಿಚಾರಣೆ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿ.ನಾಗೇಂದ್ರ ಅವರ ಪತ್ನಿ ಮಂಜುಳಾ ಅವರನ್ನು ಇ.ಡಿ ಅಧಿಕಾರಿಗಳು ಬುಧವಾರ ವಶಕ್ಕೆ ಪಡೆದು, ವಿಚಾರಣೆ ನಡೆಸಿದ್ದಾರೆ.

ಬೆಂಗಳೂರಿನ ಡಾಲರ್ಸ್ ಕಾಲೊನಿಯಲ್ಲಿ ಇರುವ ನಾಗೇಂದ್ರ ಅವರ ಮನೆಯಲ್ಲಿ ಮಂಜುಳಾ ಅವರನ್ನು ವಶಕ್ಕೆ ಪಡೆದ ಅಧಿಕಾರಿಗಳು, ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಕರೆತಂದಿದ್ದರು. ವಾಲ್ಮೀಕಿ ನಿಗಮದ ಹಣ ಮಂಜುಳಾ ಅವರ ಖಾತೆಗೆ ವರ್ಗಾವಣೆಯಾಗಿದೆ ಮತ್ತು ಅವರ ಖಾತೆಯಿಂದ ಬೇರೆ ಖಾತೆಗಳಿಗೆ ವರ್ಗಾವಣೆಯಾಗಿರುವ ಶಂಕೆಯ ಆಧಾರದಲ್ಲಿ ವಿಚಾರಣೆ ನಡೆಸಲಾಗಿದೆ ಎನ್ನಲಾಗಿದೆ. ಸಂಜೆಯವರೆಗೂ ಮಂಜುಳಾ ಅವರ ವಿಚಾರಣೆ ನಡೆಸಿದ ಇ.ಡಿ ಅಧಿಕಾರಿಗಳು, ನಂತರ ಅವರನ್ನು ಬಿಟ್ಟುಕಳುಹಿಸಿದ್ದಾರೆ.

ಯುವಿಸಿಇ: ಶೇ 83.67 ವಿದ್ಯಾರ್ಥಿಗಳಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾಂಪಸ್ ಆಯ್ಕೆ ಪ್ರಕ್ರಿಯೆಯಲ್ಲಿ ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಶೇ 83.67ರಷ್ಟು ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳಿಂದ ಉದ್ಯೋಗ ಭರವಸೆ ದೊರೆತಿದೆ.

ಟೆಕ್ಸಾಸ್, ಸ್ಯಾಪ್‌ಲ್ಯಾಬ್, ಟೆಸ್ಕೋ ಸೇರಿದಂತೆ 325 ಕಂಪನಿಗಳು ಎಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿ ತಮ್ಮ ಕಂಪನಿಗಳಿಗೆ ಅಗತ್ಯವಿರುವ ಸಂಖ್ಯೆಯ ಅಭ್ಯರ್ಥಿಗಳ ಸಂದರ್ಶನ ನಡೆಸಿ, ಅಂತಿಮ ವರ್ಷದ ಎಂಜಿನಿಯರಿಂಗ್ ಪದವಿ ಪೂರೈಸುತ್ತಿರುವ ಶೇ 83.67 ವಿದ್ಯಾರ್ಥಿಗಳಿಗೆ ಉದ್ಯೋಗವಕಾಶ ನೀಡಿವೆ.

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ವಿಭಾಗದಲ್ಲೇ ಹೆಚ್ಚು ಅಂದರೆ ಶೇ 96.55, ಕಂಪ್ಯೂಟರ್ ಸೈನ್ಸ್ ವಿಭಾಗದ ಶೇ 93.75, ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ಶೇ 82.26, ಮಾಹಿತಿ ತಂತ್ರಜ್ಞಾನ ವಿಭಾಗದ ಶೇ 95.16, ಮೆಕ್ಯಾನಿಕಲ್ ವಿಭಾಗದಲ್ಲಿ ಶೇ 69.77, ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಶೇ 64.56ರಷ್ಟು ವಿದ್ಯಾರ್ಥಿಗಳು ಉದ್ಯೋಗ ಭರವಸೆಯ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ ಎಂದು ಕಾಲೇಜಿನ ಅಧಿಕಾರಿ ಎಸ್.ಎಂ. ದಿಲೀಪ್ ಕುಮಾರ್ ಮಾಹಿತಿ ನೀಡಿದ್ದಾರೆ.

ಸರ್ಕಾರದ ನಿಲುವುಗಳಿಗೆ ತಕ್ಕಂತೆ ಕೆಲಸ ಮಾಡಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ಸರ್ಕಾರಿ ನೌಕರರು ಯೋಜನೆಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸುವ ಜೊತೆಗೆ ಸರ್ಕಾರದ ನಿಲುವುಗಳಿಗೆ ತಕ್ಕಂತೆ ಕೆಲಸ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ರಚಿಸಲಾಗಿದ್ದ 7ನೇ ವೇತನ ಆಯೋಗದ ಶಿಫಾರಸುಗಳನ್ನು ಯಥಾವತ್ ಜಾರಿಗೊಳಿಸಿದ್ದಕ್ಕಾಗಿ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಬುಧವಾರ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಹೊಸ ಪಿಂಚಣಿ ವ್ಯವಸ್ಥೆ ರದ್ದು ಮಾಡಿ ಹಳೆ ವ್ಯವಸ್ಥೆ ಜಾರಿಗೊಳಿಸುವ ಕುರಿತು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಈಗಾಗಲೇ ರಚಿಸಲಾಗಿದೆ. ಒಪಿಎಸ್ ಮರು ಜಾರಿಗೊಳಿಸಿದ ರಾಜ್ಯಗಳಿಗೆ ಸಮಿತಿ ಭೇಟಿ ನೀಡಿ ಪರಿಶೀಲಿಸುತ್ತಿದೆ. ವರದಿ ನೀಡಿದ ನಂತರ ಒಪಿಎಸ್ ಜಾರಿಗೆ ಕ್ರಮ ಕೈಗೊಳ್ಳಲಾಗುವುದು. ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೆ ಇರುವ ತಾಂತ್ರಿಕ ತೊಡಕುಗಳನ್ನು ಶೀಘ್ರ ನಿವಾರಿಸಲಾಗುವುದು ಎಂದು ಭರವಸೆ ನೀಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾ ಉಪಸ್ಥಿತರಿದ್ದರು.

3000 'ಡ್ರಾಪ್‌ಔಟ್' ಮಕ್ಕಳು ಮುಖ್ಯವಾಹಿನಿಗೆ

ಶಾಲೆ ಬಿಟ್ಟವರ ಬೆಳಕು 'ಎಐಸಿಯು'

● ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಬಡತನ ಸೇರಿದಂತೆ ವಿವಿಧ ಕಾರಣಗಳಿಂದ ಮಧ್ಯದಲ್ಲೇ ಶಾಲೆ ತೊರೆದು ಶಿಕ್ಷಣದಿಂದ ವಂಚಿತರಾಗುತ್ತಿರುವ ಮಕ್ಕಳಿಗೆ ನಗರದ ಶಾಹೀನ್ ಶಿಕ್ಷಣ ಸಂಸ್ಥೆಯ 'ಅಕಾಡೆಮಿಕ್ ಇನ್‌ಟೆನ್ಸಿವ್ ಕೇರ್ ಯುನಿಟ್' (ಎಐಸಿಯು) ಬೆಳಕಾಗಿದೆ.



ಶಾಲೆಗೆ ಹೋಗದವರು, ಅರ್ಧದಲ್ಲಿಯೇ ಶಾಲೆ ಬಿಟ್ಟವರು, ಓದಿನಲ್ಲಿ ಹಿಂದುಳಿದವರು, ಕೀಳರಿಮೆಯಿಂದ ಶಾಲೆ ತೊರೆದ ವಿದ್ಯಾರ್ಥಿಗಳಿಗೆ 'ಎಐಸಿಯು'ನಲ್ಲಿ ಕಲಿಸಿ, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುವ ಸಾಮರ್ಥ್ಯವನ್ನು ಬೆಳೆಸಲಾಗುತ್ತಿದೆ.

ಇಲ್ಲಿ ಕಲಿತ ವಿದ್ಯಾರ್ಥಿಗಳು ಎಂಜಿನಿಯರಿಂಗ್, ಎಂಬಿಬಿಎಸ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಸೇರಿದ್ದಾರೆ. ಕೆಲವರು ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ.

15 ವರ್ಷಗಳ ಹಿಂದೆ ಆರಂಭಗೊಂಡ 'ಎಐಸಿಯು'ನಲ್ಲಿ ಇದುವರೆಗೆ ಮೂರು ಸಾವಿರ ಡ್ರಾಪ್‌ಔಟ್ ಮಕ್ಕಳಿಗೆ ಶಿಕ್ಷಣ ಕೊಟ್ಟು ಮುಖ್ಯವಾಹಿನಿಗೆ ತರಲಾಗಿದೆ. ಈಗ ವಿವಿಧ ತರಗತಿಗಳಲ್ಲಿ 800 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ರಾಜ್ಯದ ವಿವಿಧ ಭಾಗಗಳಲ್ಲದೇ ಮಹಾರಾಷ್ಟ್ರ, ಬಿಹಾರ, ಉತ್ತರ ಪ್ರದೇಶ, ಒಡಿಶಾ ಸೇರಿದಂತೆ ದೇಶದ ವಿವಿಧ ಭಾಗಗಳ ಬಡ ಮಕ್ಕಳು ಇಲ್ಲಿ ಕಲಿಯುತ್ತಿದ್ದಾರೆ.

ಒಂದರಿಂದ 12ನೇ ತರಗತಿವರೆಗಿನ ಮಕ್ಕಳಿಗೆ 'ಎಐಸಿಯು'ನಲ್ಲಿ ಪಾಠ ಮಾಡಲಾಗುತ್ತದೆ. ವಯಸ್ಸಿಗೆ ಅನುಗುಣವಾಗಿ ಮಕ್ಕಳನ್ನು ನಿರ್ದಿಷ್ಟ ತರಗತಿಗಳಿಗೆ ಆಯ್ಕೆ ಮಾಡಿ ಕಲಿಸಲಾಗುತ್ತದೆ. ಕೆಲವರು ನೇರವಾಗಿ ಒಂಬತ್ತನೇ ತರಗತಿಗೆ ಪ್ರವೇಶ ಪಡೆದು, ಎಸ್‌ಎಸ್‌ಎಲ್‌ಸಿ, ಪಿಯುಸಿ ಮುಗಿಸಿದ್ದಾರೆ. ಆರು ಮಕ್ಕಳಿಗೆ ಒಬ್ಬ ಶಿಕ್ಷಕ ಪಾಠ ಮಾಡುತ್ತಾರೆ. ಪ್ರತಿಯೊಬ್ಬರ ಕಲಿಕೆಯ ಸಾಮರ್ಥ್ಯವನ್ನು ಗುರುತಿಸಿ ಅದಕ್ಕೆ ತಕ್ಕಂತೆ ಪಾಠ ಮಾಡಲಾಗುತ್ತದೆ. ಓದಿನಲ್ಲಿ ಎಷ್ಟೇ ದುರ್ಬಲವಾಗಿದ್ದರೂ ಒಂದು ವರ್ಷದೊಳಗೆ ಓದಲು, ಬರೆಯುವಂತೆ ಮಾಡಿ, ಪರೀಕ್ಷೆಗೆ ಅಣಿಗೊಳಿಸಲಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆ ಮೇಲೆ ವಿಶೇಷ ನಿಗಾ ವಹಿಸಲು 'ಫಾಸ್ಟ್ ಟ್ರ್ಯಾಕ್ ಅಪ್ರೋಚ್' ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಹೀಗಾಗಿಯೇ ಇದಕ್ಕೆ 'ಎಐಸಿಯು' ಎಂದು ಹೆಸರಿಡಲಾಗಿದೆ.

ಕಳೆದ ಹತ್ತು ವರ್ಷಗಳಿಂದ ಎಲ್ಲ ಸಮುದಾಯದ ಶಿಕ್ಷಣ ವಂಚಿತ ಮಕ್ಕಳಿಗೆ ಪ್ರವೇಶ ಕೊಡಲಾಗುತ್ತಿದೆ. ಬಾಲಕ/ಬಾಲಕಿಯರಿಬ್ಬರಿಗೂ ಅವಕಾಶ ಇದೆ ಎಂದು ಶಾಹೀನ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಅಬ್ದುಲ್ ಖದೀರ್ 'ಪ್ರಜಾವಾಣಿ'ಗೆ ತಿಳಿಸಿದರು.

ಡೆಂಗಿ: 24 ಗಂಟೆಗಳಲ್ಲಿ 524 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಮತ್ತಷ್ಟು ಹೆಚ್ಚಳವಾಗಿದ್ದು, ಬುಧವಾರ 524ಮಂದಿಯಲ್ಲಿ ಹೊಸದಾಗಿ ಡೆಂಗಿಜ್ವರ ದೃಢಪಟ್ಟಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ, 24 ಗಂಟೆಗಳ ಅವಧಿಯಲ್ಲಿ 2,731 ಪರೀಕ್ಷೆಗಳನ್ನು ನಡೆಸಲಾಗಿದೆ. ಹೊಸದಾಗಿ ದೃಢಪಟ್ಟ ಪ್ರಕರಣಗಳಲ್ಲಿ 218 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದು, ಇವರಲ್ಲಿ ಆರು ಮಂದಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಬುಧವಾರ ದೃಢಪಟ್ಟ ಪ್ರಕರಣಗಳಲ್ಲಿ ಒಂದು ವರ್ಷದೊಳಗಿನ 11 ಮಕ್ಕಳೂ ಸೇರಿದ್ದಾರೆ.

ಡೆಂಗಿ ಪೀಡಿತರಲ್ಲಿ ಸದ್ಯ 535 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ರಾಜ್ಯದ 16 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ಖಚಿತಪಟ್ಟಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 937 ಪರೀಕ್ಷೆಗಳನ್ನು ನಡೆಸಲಾಗಿದ್ದು, 270 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ.

ರಾಜ್ಯದಲ್ಲಿ ಈವರೆಗೆ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 10,973 ಕ್ಕೆ ಏರಿಕೆಯಾಗಿದೆ. ಈ ಪ್ರಕರಣಗಳಲ್ಲಿ 4,040 ಪ್ರಕರಣಗಳು ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ವರದಿಯಾಗಿವೆ.

ಕನ್ನಡ ಸಂಘಟನೆಗಳ ಪ್ರತಿಭಟನೆ: ಕ್ಷಮೆ ಕೋರಿದ ಜಿ.ಟಿ ಮಾಲ್ ಆಡಳಿತ ಮಂಡಳಿ

ಪಂಚೆ ಧರಿಸಿದ್ದ ರೈತ: ಮಾಲ್‌ಗೆ ಪ್ರವೇಶ ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚೆ ಧರಿಸಿ ಬಂದಿದ್ದ ರೈತರೊಬ್ಬರಿಗೆ ಪ್ರವೇಶ ನಿರಾಕರಿಸಿದ ಮಾಗಡಿ ರಸ್ತೆಯ ಜಿ.ಟಿ ವರ್ಲ್ಡ್ ಮಾಲ್ ಆಡಳಿತ ಮಂಡಳಿ ವಿರುದ್ಧ ಕನ್ನಡ ಸಂಘಟನೆಗಳು ಹಾಗೂ ರೈತರು ಬುಧವಾರ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು.

ಮಾಲ್ ಎದುರು ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆಯೇ ಮಾಲ್ ಆಡಳಿತ ಮಂಡಳಿಯವರು ಕ್ಷಮೆ ಕೋರಿ, ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಬಳಿಕ, ಪ್ರತಿಭಟನೆ ಕೈಬಿಡಲಾಯಿತು.

ಹಾವೇರಿ ಜಿಲ್ಲೆಯ ನಾಗರಾಜ್ ಅವರು ತಮ್ಮ ತಂದೆ ಫಕೀರಪ್ಪ ಅವರಿಗೆ ಸಿನಿಮಾ ತೋರಿಸಲು ಜಿ.ಟಿ ವರ್ಲ್ಡ್ ಮಾಲ್‌ಗೆ ಮಂಗಳವಾರ ಸಂಜೆ ಕರೆದುಕೊಂಡು ಬಂದಿದ್ದರು. ಫಕೀರಪ್ಪ ಅವರು ಪಂಚೆ ಧರಿಸಿ ತಲೆಗೆ ಟವಲ್‌ನಿಂದ ಪೇಟ ಸುತ್ತಿಕೊಂಡಿದ್ದರು. ಮಾಲ್‌ನ ಭದ್ರತಾ ಸಿಬ್ಬಂದಿ, ಪ್ರವೇಶ ದ್ವಾರದಲ್ಲೇ ತಡೆದು ಪ್ರವೇಶ ನಿರಾಕರಿಸಿದರು. ಅಲ್ಲದೇ ಅರ್ಧ ಗಂಟೆಗೂ ಹೆಚ್ಚು ಪ್ರವೇಶ ದ್ವಾರದಲ್ಲೇ ಕಾಯಿಸಿದ್ದರು.

ಅದನ್ನು ನಾಗರಾಜ್ ಪ್ರಶ್ನಿಸಿದಾಗ 'ನಿಮ್ಮ ತಂದೆ ಪಂಚೆ ಹಾಕಿರುವುದರಿಂದ ಪ್ರವೇಶ ನೀಡುವುದಿಲ್ಲ' ಎಂದು ಭದ್ರತಾ ಸಿಬ್ಬಂದಿ ಹೇಳಿದ್ದರು ಎನ್ನಲಾಗಿದೆ. ಮಾಲ್ ಎದುರೇ ನಿಂತು ನಾಗರಾಜ್ ಅವರು ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರು.



ಮಾಲ್ ಎದುರು ಫಕೀರಪ್ಪ ಅವರನ್ನು ಸನ್ಮಾನಿಸಲಾಯಿತು

ಬುಧವಾರ ಬೆಳಿಗ್ಗೆ ಮಾಲ್ ಬಾಗಿಲು ತೆರೆಯುತ್ತಿದ್ದಂತೆಯೇ ಸಿಬ್ಬಂದಿಗೆ ಪ್ರತಿಭಟನೆ ಬಿಸಿ ತಟ್ಟಿತು. ರೂಪೇಶ್ ರಾಜಣ್ಣ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಪ್ರತಿಭಟನಕಾರರು ಪಂಚೆ ಧರಿಸಿ ಮಾಲ್ ಬಳಿಗೆ ಬಂದಿದ್ದರು. 'ನಾವು ಪಂಚೆ ಧರಿಸಿಯೇ ಬಂದಿದ್ದೇವೆ. ನಮ್ಮನ್ನೂ ತಡೆಯಿರಿ ನೋಡೋಣ' ಎಂದು ಸವಾಲು ಹಾಕಿದರು. ಮಾಲ್ ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿದರು.

'ತುಂಡುಡುಗೆ ಹಾಕಿಕೊಂಡು ಬಂದವರಿಗೆ ಪ್ರವೇಶ ನೀಡಲಾಗುತ್ತದೆ. ನಮ್ಮ ಸಂಸ್ಕೃತಿಯ ಭಾಗವಾದ ಪಂಚೆ ಹಾಕಿಕೊಂಡು ಬಂದ ರೈತರಿಗೆ ಪ್ರವೇಶ ನಿರಾಕರಿಸಲಾಗಿದೆ. ಇದು ಯಾವ ನ್ಯಾಯ' ಎಂದು ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದರು.

ಫಕೀರಪ್ಪಅವರಿಗೆ ಸನ್ಮಾನ: ಬುಧವಾರ 11 ಗಂಟೆ ವೇಳೆಗೆ ಫಕೀರಪ್ಪ ಅವರನ್ನು ಸ್ಥಳಕ್ಕೆ ಕರೆಸಿದ ಪ್ರತಿಭಟನಕಾರರು, ಪಂಚೆ ಧರಿಸಿಯೇ ಮಾಲ್‌ಗೆ ಪ್ರವೇಶ ಮಾಡಿಸಿದರು. ಅಲ್ಲದೇ ಮಾಲ್ ಆಡಳಿತ ಮಂಡಳಿಯವರು ಫಕೀರಪ್ಪ ಅವರನ್ನು ಸನ್ಮಾನಿಸಿ, ಕ್ಷಮೆಯಾಚಿಸಿದರು.

'ಮನಸ್ಸಿಗೆ ನೋವಾಗಿತ್ತು': ಘಟನೆ ಬಗ್ಗೆ ಪ್ರತಿಕ್ರಿಯಿಸಿದ ಫಕೀರಪ್ಪ, 'ಮಂಗಳವಾರ ನಡೆದ ಘಟನೆಯಿಂದ ಮನಸ್ಸಿಗೆ ತುಂಬ ನೋವಾಗಿತ್ತು. ಪುತ್ರ ಬೆಂಗಳೂರಿನಲ್ಲೇ ನೆಲೆಸಿದ್ದ. ಅವನ ಜತೆಗೆ ಸಿನಿಮಾ ನೋಡಲು ಬಂದಿದ್ದೆ. ಮುಂದಿನ ದಿನಗಳಲ್ಲಿ ಯಾವುದೇ ರೈತನಿಗೂ ಈ ರೀತಿ ಆಗಬಾರದು' ಎಂದರು.

'ಮಾಲ್‌ಗೆ ಎಲ್ಲರಿಗೂ ಮುಕ್ತ ಪ್ರವೇಶವಿದೆ. ಇದುವರೆಗೂ ಯಾರನ್ನೂ ತಡೆದಿಲ್ಲ. ನಮ್ಮ ಸಿಬ್ಬಂದಿಯಿಂದ ಪ್ರಮಾದ ಆಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ' ಎಂದು ಮಾಲ್ ಆಡಳಿತ ಮಂಡಳಿಯ ಪರವಾಗಿ ಸುರೇಶ್ ಹೇಳಿದರು. ಸ್ಥಳದಲ್ಲಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಪ್ರಕರಣ ದಾಖಲಿಸಲು ರೈತರ ಆಗ್ರಹ

ರೈತನಿಗೆ ಪ್ರವೇಶ ಕೊಡದೆ ಅವಮಾನ ಮಾಡಿರುವುದು ಖಂಡನೀಯ. ರೈತರ ಅನ್ನ ತಿನ್ನುವ ಯಾರೇ ಆದರೂ ಇನ್ನು ಮುಂದೆ ಇಂತಹ ನಡವಳಿಕೆ ತೋರಿಸಿದರೆ ತಕ್ಕಪಾಠ ಕಲಿಸಬೇಕಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪಂಚೆಯಲ್ಲಿ ಬರುತ್ತಾರೆ. ಅವರಿಗೂ ಪ್ರವೇಶ ನೀಡದೆ ನಿಲ್ಲಿಸುತ್ತಾರೆಯೇ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಪ್ರಶ್ನಿಸಿದ್ದಾರೆ.

ರೈತನ ಅನ್ನ ತಿನ್ನುವ, ರೈತ ಬೆಳೆದ ಹಣ್ಣು, ತರಕಾರಿ, ಧಾನ್ಯಗಳನ್ನು ಮಾರಾಟ ಮಾಡುವ ಈ ಮಾಲ್ ಮಾಲೀಕರು ಕೂಡಲೇ ಕ್ಷಮೆ ಕೇಳಬೇಕು. ಮಾಲ್ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಇಲ್ಲದಿದ್ದರೆ, ಸಾವಿರಾರು ರೈತರು ಬಾರ್‌ಕೋಲಿನ ಜತೆಗೆ ಚಡ್ಡಿ ಧರಿಸಿ ಮೆರವಣಿಗೆಯಲ್ಲಿ ಬಂದು ಮಾಲ್ ಪ್ರವೇಶಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

'ಬಟ್ಟೆಯಿಂದ ಅಳೆಯಬಾರದು'

'ಮುಖ ನೋಡಿ, ಬಟ್ಟೆ ನೋಡಿ ಯಾರನ್ನೂ ಅಳೆಯಬಾರದು. ಇದೊಂದು ಬ್ರಿಟಿಷರ ಮನಃಸ್ಥಿತಿ. ಜಿ.ಟಿ ಮಾಲ್ ಮಾತ್ರವಲ್ಲದೇ ಬೇರೆ ಸ್ಥಳದಲ್ಲೂ ಈ ರೀತಿಯ ಘಟನೆಗಳು ನಡೆದಿವೆ. ಈ ರೀತಿಯ ವರ್ತನೆ ಖಂಡನೀಯ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಪ್ರತಿಕ್ರಿಯಿಸಿದ್ದಾರೆ.'ಮಾಲ್ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಹೋರಾಟಗಾರ ವಾಟಾಳ್ ನಾಗರಾಜ್ ಅವರು ಆಗ್ರಹಿಸಿದ್ದಾರೆ.

10 ನೇ ತರಗತಿ ಪಾಸಾದವರಿಗೆ ಅಂಚೆ ಇಲಾಖೆಯಲ್ಲಿವೆ 44,228 ಹುದ್ದೆ

ಮಂಜುನಾಥ್ ಭದ್ರಶೆಟ್ಟಿ

ತಮ್ಮ ಗ್ರಾಮಗಳ ವ್ಯಾಪ್ತಿಯಲ್ಲೇ ಕೇಂದ್ರ ಸರ್ಕಾರದ ಇಲಾಖೆಗೆ ಸಂಬಂಧಿಸಿದ ಕೆಲಸ ಮಾಡಬೇಕೆಂಬ ಯುವಕರಿಗೆ ಸುವರ್ಣಾವಕಾಶ ಬಂದಿದೆ. ಹೌದು ಭಾರತ ಸರ್ಕಾರದ ಸಂವಹನ ಸಚಿವಾಲಯದ ಅಂಚೆ ಇಲಾಖೆಯಲ್ಲಿ 44,228 'ಗ್ರಾಮೀಣ ಅಂಚೆ ಸೇವಕ' ಹಾಗೂ 'ಬ್ರ್ಯಾಂಚ್ ಪೋಸ್ಟ್ ಮಾಸ್ಟರ್' ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ.

ಗ್ರಾಮೀಣ ಅಂಚೆ ಸೇವಕ (ಜಿಡಿಎಸ್), ಬ್ರ್ಯಾಂಚ್ ಪೋಸ್ಟ್ ಮಾಸ್ಟರ್ (ಬಿಪಿಎಂ) ಮತ್ತು ಅಸಿಸ್ಟಂಟ್ ಬ್ರ್ಯಾಂಚ್ ಪೋಸ್ಟ್ ಮಾಸ್ಟರ್ (ಎಬಿಪಿಎಂ) ಹುದ್ದೆಗಳ ಭರ್ತಿಗೆ ಆನ್‌ಲೈನ್ ಅರ್ಜಿ ಸಲ್ಲಿಸಬೇಕು. ಇದೇ ಆಗಸ್ಟ್ 5 ಅರ್ಜಿ ಸಲ್ಲಿಸಲು ಕೊನೆಯ ದಿನ.

23 ಅಂಚೆ ವೃತ್ತಗಳ ವ್ಯಾಪ್ತಿಯಲ್ಲಿ ಈ ನೇಮಕಾತಿ ನಡೆಯುತ್ತಿದ್ದು ಕರ್ನಾಟಕ ಅಂಚೆ ವೃತ್ತಕ್ಕೆ 1,940 ಹುದ್ದೆಗಳಿವೆ. ಅಂಚೆ ಇಲಾಖೆಯಲ್ಲಿ ಕರ್ನಾಟಕ ವೃತ್ತದ ವ್ಯಾಪ್ತಿಯಲ್ಲಿ 37 ವಿಭಾಗಗಳಿವೆ.

ಕನಿಷ್ಠ 10 ನೇ ತರಗತಿ (ಎಸ್‌ಎಸ್‌ಎಲ್‌ಸಿ) ಅಥವಾ ತತ್ಸಮಾನವಾದ ವಿದ್ಯಾರ್ಹತೆ ಹೊಂದಿರುವ ಅರ್ಹ ಪುರುಷ, ಮಹಿಳೆ ಹಾಗೂ ತೃತೀಯ ಲಿಂಗಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಶುಲ್ಕ ₹100 ಇದ್ದು, ಎಸ್‌ಸಿ/ಎಸ್‌ಟಿ, ಮಹಿಳಾ, ತೃತೀಯ ಲಿಂಗಿ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ಇದೆ.

ಆಸಕ್ತರು ವೃತ್ತವಾರು ರಾಜ್ಯಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಯಾವುದಾದರೂ ಒಂದು ವಿಭಾಗಕ್ಕೆ ಅರ್ಜಿ ಸಲ್ಲಿಸಬಹುದು. ಉದಾಹರಣೆಗೆ ಕರ್ನಾಟಕ ವೃತ್ತದ ಅಭ್ಯರ್ಥಿಗಳು ಯಾವುದಾದರು ಒಂದು ತಮ್ಮಿಷ್ಟದ ವಿಭಾಗವನ್ನು ಆಯ್ಕೆ ಮಾಡಿಕೊಂಡು ಹುದ್ದೆಗಳನ್ನು ಗಮನಿಸಿ ಅರ್ಜಿ ಸಲ್ಲಿಸಬೇಕು. ವಿಭಾಗದಲ್ಲಿ ಬಹುತೇಕ ಅಂಚೆ ಸೇವಕ ಹುದ್ದೆಗಳೇ ಇವೆ. ಕೆಲವು ಕಡೆಗೆ ಮಾತ್ರ ಬಿಪಿಎಂ, ಎಬಿಪಿಎಂ ಇವೆ.

ಮುಖ್ಯವಾಗಿ ಗಮನಿಸಬೇಕಾದದ್ದು ಎಂದರೆ ಅಂಚೆ ಸೇವಕ ಹಾಗೂ ಬಿಪಿಎಂ, ಎಬಿಪಿಎಂ ಹುದ್ದೆಗಳಿಗೆ ನೇಮಕವಾಗುವವರು ಇಲಾಖೆಯ ರೆಗ್ಯುಲರ್ ನೌಕರರಾಗಿರುವುದಿಲ್ಲ. ಮಾಸಿಕ ನಿಗದಿತ ಸಂಭಾವನೆ ಮಾತ್ರ ಇರುತ್ತದೆ.

ಆಸಕ್ತರು ದಿನಕ್ಕೆ ನಾಲ್ಕೈದು ಗಂಟೆ ಕೆಲಸ ಮಾಡಲು ಸಿದ್ದರಾಗಿರಬೇಕು. ಕೆಲಸ ಮಾಡಲು ಇಚ್ಛಿಸುವ ವಿಭಾಗ ಹಾಗೂ ಆಯಾ ಗ್ರಾಮ, ಪ್ರದೇಶಗಳ ಬಗ್ಗೆ ಉತ್ತಮ ಜ್ಞಾನ, ಸಂಪರ್ಕ, ಸ್ಥಳೀಯ ಭಾಷೆ ಬಲ್ಲವರಾಗಿರಬೇಕು. ಸೈಕಲ್ ಅಥವಾ ದ್ವಿಚಕ್ರ ವಾಹನ ಚಲಾಯಿಸಲು ತಿಳಿದಿರಬೇಕು. ಬೇಸಿಕ್ ಕಂಪ್ಯೂಟರ್ ಜ್ಞಾನ ಹೊಂದಿರಬೇಕು.

ಬಿಪಿಎಂ ಹುದ್ದೆಗಳಿಗೆ ನೇಮಕ ಆಗುವವರಿಗೆ ಮಾಸಿಕ ₹12,000ರಿಂದ ₹29,380 ಹಾಗೂ ಅಂಚೆ ಸೇವಕ/ಎಬಿಪಿಎಂ ಹುದ್ದೆಗಳಿಗೆ ನೇಮಕ ಆಗುವವರಿಗೆ ₹10,000 ರಿಂದ ₹24,470 ಸಂಭಾವನೆ ಸಿಗಲಿದೆ.

ನೇಮಕಾತಿ ವಿಧಾನ ಹೇಗಿದೆ?

ಮೊದಲು ಮೊಬೈಲ್ ನಂಬರ್ ನೋಂದಣಿ ಮಾಡಿಸುವ ಮೂಲಕ ಆಸಕ್ತ ಅಭ್ಯರ್ಥಿಗಳು ಯಶಸ್ವಿಯಾಗಿ ಆನ್‌ಲೈನ್ ಅರ್ಜಿ ಸಲ್ಲಿಸಬೇಕು. ಯಶಸ್ವಿಯಾಗಿ ಸಲ್ಲಿಕೆಯಾದ ಅರ್ಜಿಗಳನ್ನು ಪರಿಗಣಿಸಿ 10 ನೇ ತರಗತಿಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳನ್ನು ಪರಿಗಣಿಸಿ ಮೆರಿಟ್ ಹಾಗೂ ಮೀಸಲಾತಿ ಅನುಸಾರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗುತ್ತದೆ. ತಾತ್ಕಾಲಿಕ ಪಟ್ಟಿಯಲ್ಲಿ ಹೆಸರು ಬಂದ ಅಭ್ಯರ್ಥಿಗಳು ಮೂಲ ದಾಖಲಾತಿ ಹಾಗೂ ಕನಿಷ್ಠ ವೈದ್ಯಕೀಯ ಪರೀಕ್ಷೆ ಪೂರೈಸಿದ ನಂತರ ವಿಭಾಗವಾರು ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗುತ್ತದೆ. ಇದು ನೇರ ನೇಮಕಾತಿಯಾಗಿದ್ದು ಯಾವುದೇ ಲಿಖಿತ ಪರೀಕ್ಷೆ ಇರುವುದಿಲ್ಲ.





- ಅರ್ಜಿ ಸಲ್ಲಿಕೆಗೆ ಆಗಸ್ಟ್ 5 ಕೊನೆ ದಿನ

ವಯೋಮಿತಿ

ಈ ಮೂರೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕನಿಷ್ಠ 18 ವರ್ಷ ವಯಸ್ಸು ಪೂರ್ಣಗೊಳಿಸಿರಬೇಕು. ಗರಿಷ್ಠ 40 ವರ್ಷ ವಯಸ್ಸು ಮೀರಿರಬಾರದು. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ ಅಭ್ಯರ್ಥಿಗಳಿ 3 ವರ್ಷ ಹಾಗೂ ಅಂಗವಿಕಲರಿಗೆ 13 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಇದೆ.

- ಗ್ರಾಮೀಣ ಅಂಚೆ ಸೇವಕ (ಜಿಡಿಎಸ್), ಬ್ರ್ಯಾಂಚ್ ಪೋಸ್ಟ್ ಮಾಸ್ಟರ್ (ಬಿಪಿಎಂ) ಮತ್ತು ಅಸಿಸ್ಟಂಟ್ ಬ್ರ್ಯಾಂಚ್ ಪೋಸ್ಟ್ ಮಾಸ್ಟರ್ (ಎಬಿಪಿಎಂ) ಹುದ್ದೆಗಳಿಗೆ ನೇಮಕಾತಿ
- 23 ರಾಜ್ಯಗಳ ವ್ಯಾಪ್ತಿಯಲ್ಲಿ ನೇಮಕಾತಿ. ಕರ್ನಾಟಕ ವೃತ್ತಕ್ಕೆ 1,940 ಹುದ್ದೆಗಳು
- ಅಂಚೆ ಇಲಾಖೆಯಲ್ಲಿ ಕರ್ನಾಟಕ ವೃತ್ತದ ವ್ಯಾಪ್ತಿಯಲ್ಲಿ 37 ವಿಭಾಗಗಳಿವೆ

ಕೆಎಎಸ್ ಪ್ರಿಲಿಮ್ಸ್ ಸ್ಪೆಷಲ್

ಕರ್ನಾಟಕ ಆರ್ಥಿಕ ಸಮೀಕ್ಷೆ 2023-24 ಭಾಗ 10

1. ಕರ್ನಾಟಕದಲ್ಲಿ 2020 ರಲ್ಲಿ 1000 ಜನಸಂಖ್ಯೆಗೆ ಇದ್ದ ಜನನ ಪ್ರಮಾಣ ಎಷ್ಟು?
(1) 17.9
(2) 17.2
(3) 16.5
(4) 16.9

ಉತ್ತರ: (3)
2020ರಲ್ಲಿ 1000 ಜನಸಂಖ್ಯೆಗೆ ಇದ್ದ ಜನನ ಪ್ರಮಾಣ 16.5 ಆಗಿತ್ತು.

2. ಕರ್ನಾಟಕದಲ್ಲಿ 2020 ರಲ್ಲಿ 1000 ಜನಸಂಖ್ಯೆಗೆ ಇದ್ದ ಮರಣ ಪ್ರಮಾಣ ಎಷ್ಟು ?
(1) 6.5
(2) 6.3
(3) 6.7
(4) 6.2

ಉತ್ತರ: (4)
2020 ರಲ್ಲಿ 1000 ಜನಸಂಖ್ಯೆಗೆ ಇದ್ದ ಮರಣ ಪ್ರಮಾಣ 6.2 ಆಗಿತ್ತು.

3. ಕರ್ನಾಟಕದಲ್ಲಿ 2020 ರಲ್ಲಿ 100,000 ಜೀವಂತ ಜನನಗಳಿಗೆ ಇದ್ದ ತಾಯಂದಿರ ಮರಣ ಪ್ರಮಾಣ ಎಷ್ಟು ?
(1) 83
(2) 69
(3) 92
(4) 97

ಉತ್ತರ: (2)
2020 ರಲ್ಲಿ 100,000 ಜೀವಂತ ಜನನಗಳಿಗೆ ಇದ್ದ ತಾಯಂದಿರ ಮರಣ ಪ್ರಮಾಣವು 69 ಆಗಿತ್ತು.

4. ಕರ್ನಾಟಕದಲ್ಲಿ 2020 ರಲ್ಲಿ 1000 ಜೀವಂತ ಜನನಗಳಿಗೆ ಶಿಶು ಮರಣ ಪ್ರಮಾಣ ಎಷ್ಟು ?
(1) 25
(2) 21
(3) 19
(4) 23

ಉತ್ತರ: (3)
2020 ರಲ್ಲಿ 1000 ಜೀವಂತ ಜನನಗಳಿಗೆ ಇದ್ದ ಶಿಶು ಮರಣ ಪ್ರಮಾಣವು 19 ಆಗಿತ್ತು.

5. ಕರ್ನಾಟಕದಲ್ಲಿ 2020 ರಲ್ಲಿ ಪ್ರತಿ 1000 ಮಕ್ಕಳಿಗೆ ಇದ್ದ ಐದು ವರ್ಷದೊಳಗಿನ ಮರಣ ಪ್ರಮಾಣ ಎಷ್ಟು ?
(1) 28
(2) 26
(3) 29
(4) 21

ಉತ್ತರ: (4)
2020 ರಲ್ಲಿ 1000 ಮಕ್ಕಳಿಗೆ ಇದ್ದ ಐದು ವರ್ಷದೊಳಗಿನ ಮರಣ ಪ್ರಮಾಣ 21 ಆಗಿತ್ತು.

6. ಕರ್ನಾಟಕದಲ್ಲಿ 2020 ರಲ್ಲಿ ಎಷ್ಟು ಶೇಕಡಾ ದಂಪತಿಗಳು ಕುಟುಂಬ ಯೋಜನಾ ಕ್ರಮಗಳನ್ನು ಕೈಗೊಂಡಿದ್ದಾರೆ ?
(1) 63 %
(2) 67.9 %
(3) 68.7 %
(4) 70.9 %

ಉತ್ತರ: (3)
2020 ರಲ್ಲಿ ಕುಟುಂಬ ಯೋಜನೆ ಚಿಕಿತ್ಸೆಗೆ ಒಳಪಟ್ಟ ದಂಪತಿಗಳ ಶೇಕಡಾವಾರು ಪ್ರಮಾಣವು 68.7 % ಆಗಿದೆ.

7. ಕರ್ನಾಟಕದಲ್ಲಿ 2020 ರಲ್ಲಿ ಪುರುಷರ ಸರಾಸರಿ ಜೀವಿತಾವಧಿ ಎಷ್ಟು ?
(1) 67.9 ವರ್ಷಗಳು
(2) 70.9 ವರ್ಷಗಳು
(3) 69.7 ವರ್ಷಗಳು
(4) 68.7 ವರ್ಷಗಳು

ಉತ್ತರ: (3)
2020 ರಲ್ಲಿ ಪುರುಷರ ಸರಾಸರಿ ಜೀವಿತಾವಧಿ 67.9 ವರ್ಷಗಳು.

8. ಕರ್ನಾಟಕದಲ್ಲಿ 2020 ರಲ್ಲಿ ಇದ್ದ ಮಹಿಳೆಯರ ಸರಾಸರಿ ಜೀವಿತಾವಧಿ ಎಷ್ಟು?
(1) 67.9 ವರ್ಷಗಳು
(2) 70.9 ವರ್ಷಗಳು
(3) 69.7 ವರ್ಷಗಳು
(4) 68.7 ವರ್ಷಗಳು

ಉತ್ತರ: (2)
2020 ರಲ್ಲಿ ಇದ್ದ ಮಹಿಳೆಯರ ಸರಾಸರಿ ಜೀವಿತಾವಧಿ 70.9 ವರ್ಷಗಳು.


9. ರಾಜ್ಯದಲ್ಲಿ ಎಷ್ಟು ಶೇಕಡಾವಾರು ಹೆರಿಗೆಗಳು ಸಾಂಸ್ಥಿಕ ಹೆರಿಗೆಗಳಾಗಿವೆ ?
(1) 87 %
(2) 90 %
(3) 97 %
(4) 100 %

ಉತ್ತರ: (3)
ರಾಜ್ಯದಲ್ಲಿ ಎಷ್ಟು ಶೇಕಡಾವಾರು 97 ರಷ್ಟು ಹೆರಿಗೆಗಳು ಸಾಂಸ್ಥಿಕ ಹೆರಿಗೆಗಳಾಗಿವೆ

10. 2020 ರಲ್ಲಿ ರಾಜ್ಯದಲ್ಲಿ ಇದ್ದ ಒಟ್ಟು ಫಲವತ್ತತೆ ದರ ಎಷ್ಟು?
(1) 1.5
(2) 1.6
(3) 1.7
(4) 1.8

ಉತ್ತರ: (3)
ಕರ್ನಾಟಕದಲ್ಲಿ 2015–16 ರಲ್ಲಿ 1.8 ರಷ್ಟಿದ್ದ ಒಟ್ಟು ಫಲವತ್ತತೆ ದರ 2020 ರಲ್ಲಿ 1.7 ಕ್ಕೆ ಇಳಿದಿದೆ.

(2015 ರಿಂದ 2020 ರವರೆಗೆ ಕರ್ನಾಟಕದ ಆರೋಗ್ಯ ಸೂಚಕಗಳಿಗಾಗಿ ಇಂಗ್ಲಿಷ್ ಆವೃತ್ತಿಯಲ್ಲಿ ನೀಡಿದ ಕೋಷ್ಟಕವನ್ನು ನೋಡಿ)



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

Unit-2 PROSE
There's a Girl by the Tracks!

Task-2: Use the above words meaningfully to fill in the blanks in the following sentences. You can change the form of the word if required.

1. Five of us ……... ourselves into the back seats.
Ans: squeezed
2. English people love to……... about the weather.
Ans: chat
3. Arun …... Shaila close and wiped away her tears.
Ans: held
4. I haven't ………..to Steve about all this.
Ans: talked
5. All club members have been ………..to attend the annual meeting.
Ans: appealed
6. Sudha ………………. over her shoulder.
Ans: glanced
7. The thief has ……… her purse and ran away.
Ans: snatched
8. Would you mind going to ……..……… the kids from school?
Ans: bring
9. Veena ………. me to fetch water.
Ans: gazed
10. Many people are unable to ……….. the unhappiness they feel.
Ans: Utter

Look at these sentences used in the text, as also the phrases underlined.

*. 'Who can I call?' asked Baleshwar fearing she would black out once more. (para - 13)
*A nurse helped him to take the woman in.(Para-12)
* Dinesh was wrapping up his day's work when his phone rang. (Para - 14)

Look at the underlined words. Their meanings are different from the ordinary meanings of each separate word. For example **black out** means lose consciousness, **take the woman in** means **admite the women** and **wrapping up** means **closing the business**.

Task 3: A paragraph is given below based on the text. Some words are underlined. Substitute these words with the phrases and idioms making use of the clues given in brackets with necessary changes or additions.

Baleshwar Mishra was a bold young man. Even when his life was at risk (face-to-face……death), he never had a second thought. Rather he determined (make….mind) to save the life of the girl. He was doing all he could do, while others stood watching him silently (tongue tie). None supported (back…..up) except a tempo truck driver. After a while, he carried the girl to a hospital and forced (arm twist) the duty doctor to admit the girl. "What can we make out from this incident?" Some people like Baleshwar remain undisturbed (keep cool) in moments of crisis.

Ans:- Baleshwar Mishra was a bold young man. Even when he was face-to-face with death, he never had a second thought. Rather he made up his mind to save the life of the girl. He was doing all he could do, while others stood watching him tongue -tied. None backed him up except a tempo truck driver. After a while, he carried the girl to a hospital and arm -twisted the duty doctor to admit the girl. What can we make out from this incident? Some people like Baleshwar remain undisturbed keep their cool in moments of crisis.

Listen and comprehend

Task -1 : Listen carefully to the reading of the following passage and take notes by drawing and filling information in the flow-chart. If required, the teacher will read the passage twice.

The boy was studing in
[1]
He was given ⇩
[2]
The Last question was ⇩
[3]
The Cleaning woman appeared ⇩
[4] [5] [and 6]
The name of the Cleaning woman was ⇩
[7]

Ans:-

The boy was studying in ↓
1. Nursing School
He was give ↓
2. a pop quiz
The last question was ↓
3. What is the first name of the woman who cleans the school?
The cleaning woman appeared ↓
4. Take 5. dark - haired and 6. in her 50s
The name of the cleaning woman was... ↓
7. Dimple

(Contd…..)

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC CHEMISTRY

CHEMICAL KINETICS

9. How does the presence of a catalyst influence the rate of a reaction?
Ans:- The catalyst is a substance which influences the rate of the reaction without undergoing any chemical change by itself.
Eg:- A mixture of H_2 and O_2 does not react at the room temperature. However, in the presence of the catalyst such as finely divided platinum, the reaction becomes quite vigorous.

10. What is unimolecular reaction?
Ans:- A reaction in which only one molecule takes part is called the unimolecular reaction.
Eg:- $PCl_5 \rightarrow PCl_3 + Cl_2$

11. What is bimolecular reaction?
Ans:- A reaction is said to be bimolecular if two molecules take part in the reaction.
Eg:- Formation of hydrogen iodide
$$H_2 + I_2 \rightarrow 2HI$$

12. What is termolecular reaction?
Ans:- A reaction is said to be termolecular if three molecules take part in the reaction.
Eg:- Oxidation of stannous chloride by ferric chloride
$$2FeCl_3 + SnCl_2 \rightarrow 2FeCl_2 + SnCl_4$$

13. What is homogeneous reaction?
Ans:- The homogeneous reaction is the reaction in which all the reactants and products are in the same physical state. *Eg:-* Formation of nitric oxide from nitrogen & oxygen in the gaseous phase. $N_2(g) + O_2(g) \rightarrow 2NO(g)$

14. What is heterogeneous reaction?
Ans:- The heterogeneous reaction is the reaction in which the reactants and products constitute more than one phase.
Eg:- Dissociation of calcium carbonate
$$CaCO_3(s) + CaO(s) \rightarrow CO_2(g)$$

15. Give the relation between the half life period and the zero order reaction.
Ans:- The relation between the half life period and the zero order reaction is given by -
$$t_{1/2} = \frac{a}{2k} \text{ (or) } t_{1/2} \propto a$$
Hence, the half life of the zero order reaction is directly proportional to the initial concentration.

16. Give the relation between the half life period and the first order reaction.
Ans:- The relation between the half life period and the first order reaction is given by -
$$t_{1/2} = \frac{0.693}{k}$$
Hence, the half life of the first order reaction is independent of the initial concentration.

17. Give the relation between the half life period and the second order reaction.
Ans:- The relation between the half life period and the second order reaction is given by -
$$t_{1/2} = \frac{1}{ak} \text{ (or) } t_{1/2} \propto \frac{1}{a}$$
Hence, the half life of the second order reaction is inversely proportional to the initial concentration.

18. Give the relation between the half life period and the n^{th} order reaction.
Ans:- The relation between the half life period and the n^{th} order reaction is given by -
$$t_{1/2} \propto \frac{1}{a^{n-1}}$$

19. Mention the methods of determining the order of the reaction.
Ans:- The methods of determining the order of the reaction are Graphical method and Ostwald's isolation method.

20. What is meant by temperature coefficient of the reaction?
Ans:- The ratio of the rate constant of a reaction at a given temperature to its rate constant at a ten degree lower temperature is called the temperature coefficient of the reaction.
$$\frac{k_{t+10}}{k_t} = 2 \text{ to } 3 = \text{temperature coefficient}$$

21. What is threshold energy?
Ans:- Threshold energy of a reaction is the minimum energy that the reacting molecules should possess in order to form products upon collision.

22. The inorganic reactions are generally faster than the organic reactions, why?
Soln:- Generally, the inorganic reactions are ionic reactions while the organic reactions are molecular reactions. Hence, they are faster than the organic reactions.

23. Temperature coefficient of a reaction is 2. How many times does the rate increase when the temperature is increased from 30^0 - 90^0C?
Soln:- The rise in temperature $= 90 - 30 = 60^0C$
For every 10^0 rise in temperature, the rate increases two times.
∴ The increase in the rate would be 2^6 times or 64 times.

24. Mention the factors that influence the rate of a reaction.
Ans:- The factors that influence the rate of a reaction are - (i) Nature of the reactants
(ii) Concentration of the reactants
(iii) Temperature of the reaction
(iv) Presence of the catalyst
(v) Intensity of light in the case of photosensitive reactions
(vi) Surface area

(Contd……)


ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿದ ಸ್ಥಳದಲ್ಲಿ ಮಣ್ಣು ತೆರವು ಕಾರ್ಯಾಚರಣೆ ನಡೆಯಿತು – ಪ್ರಜಾವಾಣಿ ಚಿತ್ರ/ಗಣಪತಿ ಹೆಗಡೆ


ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಮೂಕನಮನೆ ಜಲಪಾತ ಭೋರ್ಗರೆಯುತ್ತಿದೆ – ಪ್ರಜಾವಾಣಿ ಚಿತ್ರಗಳು

6 ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಇಂದು

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರವೂ ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಆರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಕೊಡಗು, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗೆ 'ರೆಡ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದ್ದು, ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಬೆಳಗಾವಿ, ಹಾಸನ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿಯೂ ನಿರಂತರ ಗಾಳಿಯೊಂದಿಗೆ ಭಾರಿ ಮಳೆ ಆಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.


ಶಿರಸಿ–ಕುಮಟಾ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯ (766ಇ) ರಾಗಿಹೊಸಳ್ಳಿ ಬಳಿ ಗುಡ್ಡದ ಮಣ್ಣು ತೆರವು ಕಾರ್ಯ ಬುಧವಾರ ನಡೆಯಿತು. ಗುರುವಾರವೂ ಇಡೀ ದಿನ ಕಾರ್ಯಾಚರಣೆ ನಡೆಯಲಿದೆ. ಮಂಗಳವಾರ ತಡರಾತ್ರಿ ಅಂದಾಜು 60 ಮೀಟರ್ ಆಳತೆಯಲ್ಲಿ ಗುಡ್ಡ ಕುಸಿದು ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತವಾಗಿತ್ತು.


ಹಾವೇರಿ ತಾಲ್ಲೂಕಿನ ದೇವಗಿರಿ ಬಳಿಯ ವರದಾ ನದಿಯಲ್ಲಿ ಚೆಕ್‌ಡ್ಯಾಂ ಬಳಿ ನೀರಿನ ಹರಿವು ಹೆಚ್ಚಿತ್ತು


ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಬಳಿಯ ಶ್ರೀಮಂಗಲ, ನಾಲ್ಕೇರಿ ನಡುವಿನ ಸಂಪರ್ಕ ಸೇತುವೆ ಲಕ್ಷ್ಮಣತೀರ್ಥ ನದಿ ಪ್ರವಾಹದಲ್ಲಿ ಮುಳುಗಿತ್ತು

ಉಡುಪಿ: ನದಿಪಾತ್ರದ ಪ್ರದೇಶಗಳು ಜಲಾವೃತ • ಶೃಂಗೇರಿ– ತಗ್ಗಿದ ಪ್ರವಾಹ • ಕೊಡಗು: ಶಾಲೆಗಳಿಗೆ ರಜೆ

ನಿರಂತರ ಮಳೆ: ಮುಂದುವರಿದ ಆತಂಕ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಶಿವಮೊಗ್ಗ: ರಾಜ್ಯದ ಕೆಲವೆಡೆ ಬುಧವಾರವೂ ಮಳೆಯ ಅಬ್ಬರ ಮುಂದುವರಿದಿದೆ. ಕೊಡಗು ಜಿಲ್ಲೆಯಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆ ಹಾಗೂ ಜೋರು ಗಾಳಿ ನಿಯಂತ್ರಣಕ್ಕೆ ಬಂದಿಲ್ಲ.

ಮುನ್ನೆಚ್ಚರಿಕೆಯಿಂದ ಕೊಡಗು ಜಿಲ್ಲೆಯ ಎಲ್ಲ ಅಂಗನವಾಡಿಗಳು, ಪ್ರಾಥಮಿಕ, ಪ್ರೌಢಶಾಲೆಗಳು, ಪಿಯು ಕಾಲೇಜುಗಳಿಗೆ ಜುಲೈ 18ರಂದು ಜಿಲ್ಲಾಡಳಿತ ರಜೆ ಘೋಷಿಸಿದೆ.

ಜಿಲ್ಲೆಯ ಕಾವೇರಿ, ಕನ್ನಿಕೆ, ಹಾರಂಗಿ, ಪಯಸ್ವಿನಿ, ಲಕ್ಷ್ಮಣತೀರ್ಥ ಸೇರಿದಂತೆ ಎಲ್ಲ ನದಿಗಳು, ತೊರೆಗಳು ಅಪಾಯ ಮಟ್ಟ ಮೀರಿ ಹರಿಯುತ್ತಿವೆ. ಕೆಲವೆಡೆ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಮಡಿಕೇರಿ– ಮಂಗಳೂರು ರಸ್ತೆಯಲ್ಲಿ ಜೋಡುಪಾಲದ ಬಳಿ ಮಣ್ಣು ಕುಸಿದಿದೆ.

ಮಂಗಳವಾರ ರಾತ್ರಿಯಿಂದ ಬುಧವಾರ ಬೆಳಿಗ್ಗೆ 9.30ರವರೆಗೂ ಒಂದೇ ಸಮನೆ ಮಳೆ ಸುರಿದು, ನಾಪೋಕ್ಲು -ಮೂರ್ನಾಡು ರಸ್ತೆ, ಚೆರಿಯಪರಂಬು ಕಲ್ಲುಮೊಟ್ಟೆ ಸಂಪರ್ಕರಸ್ತೆ, ನಾಪೋಕ್ಲು -ಬಲಮುರಿ ಮಾರ್ಗದ ಮಕ್ಕಿಕಡವು ರಸ್ತೆ ಜಲಾವೃತಗೊಂಡು ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ಬಿಳಿಗೇರಿ–ಕಗ್ಗೋಡು ಮಾರ್ಗವಾಗಿ ಬಯಗೊಂಡ ಮನೆ ಬಳಿ ಇರುವ ಸೇತುವೆಯ ಒಂದು ಬದಿ ಮಣ್ಣು ಕುಸಿದಿದೆ.

ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ನೀರಿನ ಹರಿವು ಹೆಚ್ಚಾಗಿದ್ದು, ಭಾಗಮಂಡಲ–ನಾಪೋಕ್ಲು ರಸ್ತೆಯಲ್ಲಿ ನೀರು ಹರಿಯುತ್ತಿದೆ.

ಪೊನ್ನಂಪೇಟೆ ತಾಲ್ಲೂಕಿನ ಕಾನೂರು- ಕುಟ್ಟ ಮುಖ್ಯ ರಸ್ತೆಯಲ್ಲಿ ಹಾಗೂ ವಿರಾಜಪೇಟೆ- ಗೋಣಿಕೊಪ್ಪ ಮುಖ್ಯ ರಸ್ತೆಯ ಹಾತೂರು ಬಳಿ ಮಳೆ ಗಾಳಿಯಿಂದ ಮರಗಳು ಬಿದ್ದು ಸಂಚಾರ ಸ್ಥಗಿತಗೊಂಡಿತ್ತು. ಮರಗಳನ್ನು ತೆರವುಗೊಳಿಸಿದ ಬಳಿಕ ಸಂಚಾರ ಎಂದಿನಂತಿದೆ. ಬುಧವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿಯಲ್ಲಿ 23 ಸೆಂ.ಮೀನಷ್ಟು ಭಾರಿ ಮಳೆ ಸುರಿದಿದೆ.

ಮಲೆನಾಡಿನಲ್ಲಿ ಮಳೆ ಮುಂದುವರಿದಿದೆ. ಆದರೆ, ಸೋಮವಾರ ಮತ್ತು ಮಂಗಳವಾರದಷ್ಟು ಅಬ್ಬರ ಬುಧವಾರ ಕಂಡುಬರಲಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಬುಧವಾರ ಮಳೆಯ ಪ್ರಮಾಣ ಕಡಿಮೆ ಆಗಿದೆ.

ಮಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬುಧವಾರ ಬೆಳಿಗ್ಗೆ ತುಂತುರು ಮಳೆ ನಂತರ ಧಾರಾಕಾರ ಮಳೆ ಸುರಿಯಿತು.

ಉಡುಪಿ ಜಿಲ್ಲೆಯಲ್ಲೂ ಹಗಲಿಡೀ ಬಿರುಸಿನ ಮಳೆ ಸುರಿದಿದೆ. ಕೆಲವೆಡೆ ಪ್ರವಾಹದ ನೀರು ಪೂರ್ಣ ಪ್ರಮಾಣದಲ್ಲಿ ಇಳಿಕೆಯಾಗಿಲ್ಲ. ನದಿ ತೀರದ ತಗ್ಗು ಪ್ರದೇಶಗಳು ಜಲಾವೃತವಾಗಿವೆ. ಬೈಂದೂರು ಪಡುವರಿ ಗ್ರಾಮದ ಸೋಮೇಶ್ವರ ಬಳಿ ಬುಧವಾರ ಗುಡ್ಡ ಕುಸಿತ ಉಂಟಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯ ಅರ್ಭಟ ಕೊಂಚ ಕಡಿಮೆಯಾಗಿದ್ದು, ಶೃಂಗೇರಿ ಪಟ್ಟಣದಲ್ಲಿ ಪ್ರವಾಹ ತಗ್ಗಿದೆ. ಬುಧವಾರ ಬೆಳಿಗ್ಗೆ ತನಕ ಬಿರುಸಿನಿಂದ ಮಳೆ ಸುರಿಯಿತು. ಬಳಿಕ ಮಳೆ ಕಡಿಮೆಯಾಗಿದ್ದು, ನದಿಗಳ ರಭಸ ಕೂಡ ಇಳಿಕೆಯಾಗಿದೆ.

ಹಾವೇರಿಯಲ್ಲಿನ ವರದಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಹಾವೇರಿ ತಾಲ್ಲೂಕಿನ ಕೋಳೂರು ಮತ್ತು ಸವಣೂರು ತಾಲ್ಲೂಕಿನ ಕಳಸೂರು ನಡುವೆ ಸಂಪರ್ಕ ಕಲ್ಪಿಸುವ ಬ್ಯಾರೇಜ್ ಮುಳುಗಡೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	111.50	34,779	2376
ಹಾರಂಗಿ	2,859	2,852.7	10,618	10,000
ಕಬಿನಿ	2,284.00	2,282.12	38,660	50,000
ಹೇಮಾವತಿ	2,922	2,909.15	25,862	250
ಲಿಂಗನಮಕ್ಕಿ	1,819	1,784.07	52,366	-
ಸೂಪಾ (ಮೀ)	564	538.10	24,144	-
ಮಾಣಿ	595	579.56	8,579	-
ತುಂಗಭದ್ರಾ	1,633	1,611.07	49,522	212
ಮಲಪ್ರಭಾ	2,079.5	2,057.30	11,976	194
ಘಟಪ್ರಭಾ	2175	2,143.00	10,296	522
ಭದ್ರಾ	186	148.6	34,544	169
ಆಲಮಟ್ಟಿ (ಮೀ)	519.6	518.07	92,736	55,063
ನಾರಾಯಣಪುರ (ಮೀ)	492.25	491.75	65,00	62,955

* ನೆಲಮಟ್ಟದಿಂದ

ಹೆದ್ದಾರಿಯಲ್ಲಿ ಕುಸಿದ ಮಣ್ಣು: ಕೆಲಕಾಲ ಸಂಚಾರ ಸ್ಥಗಿತ

ಸಕಲೇಶಪುರ (ಹಾಸನ ಜಿಲ್ಲೆ): ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಬುಧವಾರ ಮಧ್ಯಾಹ್ನ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳು ಸಂಚರಿಸುತ್ತಿರುವಾಗಲೇ ಸುಮಾರು 100 ಅಡಿ ಎತ್ತರದಿಂದ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿದಿದ್ದು, ಕೂದಲೆಳೆ ಅಂತರದಲ್ಲಿ ಎರಡು ಕಾರುಗಳು ಅಪಾಯದಿಂದ ಪಾರಾಗಿವೆ.

ಮಳೆ ನೀರಿನೊಂದಿಗೆ ಕುಸಿದ ಮಣ್ಣು, ಟ್ಯಾಂಕರ್ ಲಾರಿಯೊಂದಕ್ಕೆ ಅಪ್ಪಳಿಸಿತು. ಮೂರು ಅಡಿ ದೂರದಲ್ಲಿ ನಿಂತಿದ್ದ ಕಾರಿಗೆ ಅಪ್ಪಳಿಸಿದ್ದರೆ, ಕಾರುಗಳು ಬಲಭಾಗದ ಪ್ರಪಾತಕ್ಕೆ ಬಿದ್ದು ಹೆಚ್ಚಿನ ಹಾನಿ ಸಂಭವಿಸುತ್ತಿತ್ತು.

ಕೂಡಲೇ ಸ್ಥಳದಲ್ಲಿದ್ದ ಕಪ್ಪಳ್ಳಿ ನಿವಾಸಿಗಳಾದ ವಿಜಯಶಂಕರ್ ಹಾಗೂ ಜಯಶಂಕರ್ ಸಹೋದರರು ತುರ್ತಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡರು. 2 ಗಂಟೆಗೂ ಹೆಚ್ಚು ಕಾಲ ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಲಾಗಿತ್ತು.

ಸ್ಥಳಕ್ಕೆ ಉಪ ವಿಭಾಗಾಧಿಕಾರಿ ಡಾ. ಎಂ.ಕೆ. ಶ್ರುತಿ, ತಹಶೀಲ್ದಾರ್ ಜಿ. ಮೇಘನಾ, ಡಿವೈಎಸ್‌ಪಿ ಪ್ರಮೋದ್‌ಕುಮಾರ್ ಭೇಟಿ ನೀಡಿದರು. ಮಣ್ಣು ತೆರವುಗೊಳಿಸಿದ್ದು, ವಾಹನಗಳ ಸಂಚಾರ ಆರಂಭಿಸಲಾಗಿದೆ.

'ಸಕಲೇಶಪುರ–ಹೆಗ್ಗದ್ದೆ ನಡುವೆ ನಡೆಯುತ್ತಿರುವ ಚತುಷ್ಪಥ ಕಾಮಗಾರಿಗಾಗಿ 90 ಡಿಗ್ರಿಯಲ್ಲಿ ಮಣ್ಣು ತೆಗೆದಿದ್ದು, ತಡೆಗೋಡೆ ಕಟ್ಟದಿರುವುದರಿಂದ ಬಾಳ್ಳುಪೇಟೆಯಿಂದ ಹೆಗ್ಗದ್ದೆವರೆಗೆ ಸುಮಾರು 20ಕ್ಕೂ ಹೆಚ್ಚು ಕಡೆ ಮಣ್ಣು ಕುಸಿಯುತ್ತಿದ್ದು, ವಾಹನ ಸವಾರರು ಅಪಾಯದಲ್ಲಿದ್ದಾರೆ' ಎಂದು ಸ್ಥಳೀಯರು ತಿಳಿಸಿದ್ದಾರೆ.

ತಾಲ್ಲೂಕಿನ ಮಾರನಹಳ್ಳಿ ಪೊಲೀಸ್ ಚೆಕ್‌ಪೋಸ್ಟ್ ಮುಂಭಾಗದ ಚಿಕ್ಕ ಸೇತುವೆ ಕೊಚ್ಚಿ ಹೋಗಿದೆ. ಹೇಮಾವತಿ ನದಿ ಪಕ್ಕದ ಹೊಳೆ ಮಲ್ಲೇಶ್ವರ ದೇವಸ್ಥಾನದ ಮೇಲೆ ಒಣಗಿದ ಮರದ ತುಂಡು ಬಿದ್ದು, ಚಾವಣಿ ಜಖಂಗೊಂಡಿದೆ. ಜಿಲ್ಲೆಯ ಮಲೆನಾಡು ಭಾಗ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು ಹೇಮಾವತಿ ಜಲಾಶಯಕ್ಕೆ ಒಳಹರಿವು ಏರಿಕೆ ಆಗಿದೆ.

ಜಾರಿ ಬಿದ್ದ ಶಾಸಕ ರೇವಣ್ಣ ಪಕ್ಕೆಲುಬಿನಲ್ಲಿ ಬಿರುಕು

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): ತಾಲ್ಲೂಕಿನ ಹರದನಹಳ್ಳಿಯ ಶಿವನ ದೇವಾಲಯದಲ್ಲಿ ಬುಧವಾರ ಬೆಳಗಿನ ಜಾವ ಪೂಜೆ ಸಲ್ಲಿಸಿ ಬರುವಾಗ ಮೆಟ್ಟಿಲಿನ ಮೇಲೆ ಕಾಲು ಜಾರಿಬಿದ್ದ ಶಾಸಕ ಎಚ್.ಡಿ. ರೇವಣ್ಣ ಅವರ ಬಲಪಕ್ಕೆಯ 7ನೇ ಮೂಳೆಗೆ ಹಾನಿಯಾಗಿದೆ. 6ನೇ ಮೂಳೆಯಲ್ಲಿ ಸಣ್ಣ ಬಿರುಕು ಬಿಟ್ಟಿದೆ.

ಅವರಿಗೆ ಇಲ್ಲಿನ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಧನಶೇಖರ್, ಮೂಳೆ ತಜ್ಞರಾದ ಡಾ.ಜೆ.ಕೆ. ದಿನೇಶ್, ಡಾ. ದಿನೇಶ್ ಕುಮಾರ್ ಹಾಗೂ ಡಾ. ಸತ್ಯಪ್ರಕಾಶ್, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಿದರು.

'ಗಾಬರಿ ಪಡಬೇಕಿಲ್ಲ. 3 ವಾರಗಳ ವಿಶ್ರಾಂತಿಯಿಂದ ಸಂಪೂರ್ಣ ಗುಣಮುಖರಾಗುತ್ತಾರೆ. ಮೂಳೆಗಳು ವಯಸ್ಸಿಗೆ ತಕ್ಕಂತೆ ದೃಢವಾಗಿವೆ' ಎಂದು ವೈದ್ಯರು ತಿಳಿಸಿದರು.


ಹೊಳೆನರಸೀಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಶಾಸಕ ಎಚ್‌.ಡಿ. ರೇವಣ್ಣ

ರೇವಣ್ಣ ಕೆಲಕಾಲ ಆಸ್ಪತ್ರೆಯಲ್ಲಿಯೇ ವಿಶ್ರಾಂತಿ ಪಡೆದು, ಬೆಂಗಳೂರಿನ ಮನೆಯಲ್ಲಿ ವಿಶ್ರಾಂತಿ ಪಡೆಯುವುದಾಗಿ ಹೇಳಿ ತೆರಳಿದರು. ಆಷಾಢ ಏಕಾದಶಿಯ ಪ್ರಯುಕ್ತ ಹರದನಹಳ್ಳಿಯಿಂದ ಬಂದಿದ್ದ ಅವರು ಮೊದಲಿಗೆ ಇಲ್ಲಿನ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದಲ್ಲೂ ಪೂಜೆ ಸಲ್ಲಿಸಿದ್ದರು.

ಉಳುವರೆಯಲ್ಲಿ ಸ್ಮಶಾನ ಸದೃಶ ವಾತಾವರಣ ಸೃಷ್ಟಿಸಿದ ದುರ್ಘಟನೆ

ನೆಲೆ ಕಸಿದುಕೊಂಡ ಶಿರೂರು ಗುಡ್ಡ

• ಗಣಪತಿ ಹೆಗಡೆ

ಕಾರವಾರ: 'ಜೋರಾಗಿ ಮಳೆ ಶುರುವಾಯಿತು. ದೊಡ್ಡ ಶಬ್ದ ಕೇಳಿಸಿತು. ನೋಡನೋಡುತ್ತ ಗಂಗಾವಳಿ ನದಿಗೆ ದೊಡ್ಡ ಪ್ರಮಾಣದಲ್ಲಿ ಮಣ್ಣಿನ ರಾಶಿ ಬೀಳತೊಡಗಿತು. ಸಮುದ್ರದ ಅಲೆಯಂತೆ ಚಿಮ್ಮಿದ ನದಿ ನೀರನ್ನು ಕಂಡು ಕಣ್ಮುಚ್ಚಿದೆ. ಕಣ್ತೆರೆದಾಗ ನದಿಯಂಚಿನ ಊರು ಸ್ಮಶಾನದಂತಾಗಿತ್ತು'.

ಹೀಗೆ ನಡುಗುತ್ತ ಘಟನೆ ವಿವರಿಸಿದವರು ಉಳುವರೆ ಗ್ರಾಮದ ಮಂಜು ಗೌಡ. ಶಿರೂರು ಗುಡ್ಡ ಕುಸಿತ ದುರಂತದಿಂದ ಗಂಗಾವಳಿ ನದಿ ಇನ್ನೊಂದು ಬದಿಯಲ್ಲಿರುವ ಉಳುವರೆ ಗ್ರಾಮದಲ್ಲಿ ಉಂಟಾದ ಹಾನಿಯ ಭೀಕರತೆ ಹೇಳುವಾಗ, ಅವರ ಮೊಗದಲ್ಲಿ ನೋವು, ಭೀತಿ ಮತ್ತು ಆತಂಕವಿತ್ತು.

'ನದಿಯಂಚಿನಲ್ಲಿ 15ಕ್ಕೂ ಹೆಚ್ಚು ಮನೆಗಳಿವೆ. ಅವುಗಳಲ್ಲಿ ಮೂರು ಮನೆ ಸಂಪೂರ್ಣ ನೆಲಸಮವಾಗಿವೆ. 10ಕ್ಕೂ ಹೆಚ್ಚು ಮನೆಗಳ ಚಾವಣಿ, ಗೋಡೆಗೆ ಹಾನಿಯಾಗಿದೆ. ಮೀನುಗಾರರು ನಿಲ್ಲಿಸಿಟ್ಟ ದೋಣಿಗಳು, ಅವರ ಮನೆಗಳಿಗೆ ಬಂಡೆಕಲ್ಲು, ಮಣ್ಣು ಅಪ್ಪಳಿಸಿ ಸಾಕಷ್ಟು ನಷ್ಟವಾಗಿದೆ' ಎಂದು ಅವರು ತಿಳಿಸಿದರು.

'ಅಮ್ಮ ಮಾಡಿಕೊಟ್ಟ ತಿಂಡಿ ತಿಂದು, ದಿನಸಿ ಸಾಮಾನು ತರಲು ಸಮೀಪದ ಅಂಗಡಿಗೆ ತೆರಳಿದ್ದೆ. ಮರಳಿ ಬರುವಷ್ಟರಲ್ಲಿ ಮನೆ ಇರಲಿಲ್ಲ. ಮನೆಯಲ್ಲಿನ ಒಂದು ವಸ್ತುವೂ ಇರಲಿಲ್ಲ. ಅಮ್ಮಾನೂ ಕಾಣಲಿಲ್ಲ' ಎಂದು ಮಂಜುನಾಥ ಗೌಡ ನೋವು ತೋಡಿಕೊಂಡರು. ಅವರ ಮನೆ ಕುಸಿದು ಬಿದ್ದಿದ್ದು, ಅವರ ತಾಯಿ ಸಣ್ಣಿ ಗೌಡ ಇನ್ನೂ ಪತ್ತೆಯಾಗಿಲ್ಲ.


ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿದ ಬಳಿಕ ಗಂಗಾವಳಿ ನದಿ ಉಕ್ಕೇರಿದ್ದರಿಂದ ಉಂಟಾದ ಪ್ರವಾಹದಲ್ಲಿ ತಾಯಿ ಮತ್ತು ಮನೆಯನ್ನು ಕಳೆದುಕೊಂಡ ಉಳುವರೆ ಗ್ರಾಮದ ಮಂಜುನಾಥ ಗೌಡ ಅವರು ಕುಸಿದ ಮನೆಯಿದ್ದ ನಿವೇಶನದಲ್ಲಿ ಏಕಾಂಗಿಯಾಗಿ ಕುಳಿತಿದ್ದರು

ಉಳುವರೆ ಗ್ರಾಮದ ನದಿಯಂಚಿನಲ್ಲಿ ಬಿದ್ದ ಕಲ್ಲಿನ ರಾಶಿಗಳು, ಕೆಸರು ಮಣ್ಣು, ಮುರಿದ ಮನೆಯ ಗೋಡೆಗಳು, ಅಲ್ಲಲ್ಲಿ ಚದುರಿ ಬಿದ್ದ ಮನೆಯ ಬಾಗಿಲುಗಳು, ಚೆಲ್ಲಾಪಿಲ್ಲಿಯಾಗಿ ಬಿದ್ದ ಪಾತ್ರೆಗಳು ಘಟನೆಯ ಭೀಕರತೆಯನ್ನು ಸಾರಿ ಹೇಳುವಂತಿತ್ತು. ಅವಶೇಷಗಳಡಿ ಜನರು ಪಾತ್ರೆ, ಸರಂಜಾಮುಗಳನ್ನು ಹುಡುಕುತ್ತಿದ್ದ ದೃಶ್ಯಗಳು ಮನಕಲಕುತ್ತಿದ್ದವು.

ಶಿರೂರಿನಲ್ಲಿ ಗುಡ್ಡ ಕುಸಿದು ವ್ಯಾಪಕ ಪ್ರಮಾಣದಲ್ಲಿ ಮಣ್ಣಿನ ರಾಶಿ, ಬಂಡೆಕಲ್ಲು ನದಿಗೆ ಉರುಳಿದ್ದರಿಂದ ಒಮ್ಮೆಲೇ ನದಿಯ ನೀರು ಚಿಮ್ಮಿದ್ದರಿಂದ ನದಿಯಂಚಿನ ಮನೆಗಳು ಕೊಚ್ಚಿಕೊಂಡು ಹೋಗಿದ್ದರಿಂದ ಹಾನಿಯುಂಟಾಗಿದೆ.

ಗ್ರಾಮಕ್ಕೆ ಬುಧವಾರ ಸಂಜೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಮನೆ ಕಳೆದುಕೊಂಡವರಿಗೆ ಪರ್ಯಾಯ ಜಾಗ ಒದಗಿಸುವ ಜತೆಗೆ ಮನೆ ನಿರ್ಮಾಣಕ್ಕೆ ₹5 ಲಕ್ಷ ಪರಿಹಾರ ಒದಗಿಸುವ ಭರವಸೆ ನೀಡಿದ್ದಾರೆ.

ಕೊನೆಯಾದ ಕುಟುಂಬ: ಶಿರೂರಿನಲ್ಲಿ ಹೆದ್ದಾರಿ ಅಂಚಿನಲ್ಲಿ ಮೂರು ದಶಕದಿಂದ ಚಹಾ ಅಂಗಡಿ ನಡೆಸುತ್ತಿದ್ದ ಲಕ್ಷ್ಮಣ ನಾಯ್ಕ ಮತ್ತು ಅವರ ಪತ್ನಿ, ಮಕ್ಕಳು ಘಟನೆಯಲ್ಲಿ ಮೃತಪಟ್ಟಿದ್ದು, ಈ ಕುಟುಂಬದ ಅಸ್ತಿತ್ವವೇ ಇಲ್ಲದಂತಾಗಿದೆ. ಮೃತರಾದವರಲ್ಲಿ ಲಕ್ಷ್ಮಣ, ಶಾಂತಿ ಮತ್ತು ರೋಶನ್ ಅವರ ಮೃತದೇಹವನ್ನು ಅವರ ಸ್ವಗ್ರಾಮವಾದ ಶಿರೂರಿನಲ್ಲಿ ಲಕ್ಷ್ಮಣ ಅವರ ಸಹೋದರರ ಕುಟುಂಬದವರು ಸಾಮೂಹಿಕವಾಗಿ ಅಂತ್ಯಕ್ರಿಯೆ ನೆರವೇರಿಸಿದರು.

ಮಣ್ಣು ತೆರವು ಕಾರ್ಯಕ್ಕೆ ಅಡ್ಡಿ: ಗುಡ್ಡ ಕುಸಿದ ಸ್ಥಳದಲ್ಲಿ ಬಿದ್ದಿದ್ದ ಮಣ್ಣಿನ ತೆರವು ಕಾರ್ಯಾಚರಣೆ ನಡೆಯಿತಾದರೂ ನಿರಂತರವಾಗಿ ಮಳೆ ಸುರಿಯುತ್ತಿದ್ದ ಪರಿಣಾಮ ಗುಡ್ಡದಿಂದ ಮತ್ತೆ ಮಣ್ಣಿನ ರಾಶಿ ಬೀಳಲು ಆರಮಭಿಸಿದ್ದರಿಂದ ಬುಧವಾರ ಸಂಜೆ ತೆರವು ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.

ಗಂಗಾವಳಿ ನದಿಯಲ್ಲಿ ತೇಲಿ ಹೋಗಿದ್ದ ಗ್ಯಾಸ್ ಟ್ಯಾಂಕರ್ ಅನ್ನು ಎಚ್.ಪಿ.ಸಿ.ಎಲ್‌ನ ವಿಶೇಷ ತಂಡವು ಸುರಕ್ಷಿತವಾಗಿ ಸಗಡಗೇರಿ ಸಮೀಪ ದಡದ ಸಮೀಪ ಎಳೆದು ತಂದಿದ್ದು, ಗುರುವಾರ ರಕ್ಷಣಾ ಕಾರ್ಯಾಚರಣೆ ನಡೆಸುವುದಾಗಿ ತಿಳಿಸಿದೆ.

'ಕಾವೇರಿ ಸಮಸ್ಯೆ ಬಗೆಹರಿಸಿದರೆ ನಿವೃತ್ತಿ'

ನಾಗಮಂಗಲ (ಮಂಡ್ಯ): 'ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿಯವರು ಐದು ವರ್ಷಗಳಲ್ಲಿ ಕಾವೇರಿ ವಿವಾದವನ್ನು ಬಗೆಹರಿಸಿ, ನೀರನ್ನು ಕರ್ನಾಟಕಕ್ಕೆ ಸಂಪೂರ್ಣ ಬಳಸಿಕೊಳ್ಳುವ ಅಧಿಕಾರ ಸಿಗುವಂತೆ ಮಾಡಿದರೆ, ಜಲಾಶಯದ ಮೇಲ್ವಿಚಾರಣಾ ಸಮಿತಿಯನ್ನು ರದ್ದುಪಡಿಸಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸವಾಲು ಹಾಕಿದರು.

'ತಮಿಳುನಾಡಿಗೆ ನೀರು ಬಿಟ್ಟು ನಂತರ ಸರ್ವಪಕ್ಷಗಳ ಸಭೆ ಕರೆದಿದ್ದಾರೆ' ಎಂಬ ಕುಮಾರಸ್ವಾಮಿ ಹೇಳಿಕೆಗೆ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿರುಗೇಟು ನೀಡಿದರು.

'ಕಬಿನಿ ಭರ್ತಿಯಾಗಿ ಹೆಚ್ಚುವರಿ ನೀರು ಬಂದಾಗ ತಮಿಳುನಾಡಿಗೆ ನೀರು ಬಿಡಲೇಬೇಕು. ಕುಮಾರಸ್ವಾಮಿ ಸಿ.ಎಂ ಆಗಿದ್ದಾಗ ಸರ್ವಪಕ್ಷ ಸಭೆ ಕರೆದು ತಿನ್ನಲು ಏನು ಕೊಟ್ಟಿದ್ದರು? ಮೆನು ಕೊಟ್ಟಿದ್ದರೆ ನಾವೂ ಅದನ್ನೇ ಕೊಡುತ್ತಿದ್ದೆವು. ನಾವು ಗೋಡಂಬಿ, ದ್ರಾಕ್ಷಿ ಕೊಟ್ಟಿರಲಿಲ್ಲ' ಎಂದು ಪ್ರತಿಕ್ರಿಯಿಸಿದರು

ಖಾಸಗಿ ಮೀಸಲು ಸಂಘರ್ಷ

ಒಂದನೇ ಪುಟದಿಂದ...

ಮಸೂದೆಗೆ ಸಂಪುಟ ಸಭೆಯ ಒಪ್ಪಿಗೆ ದೊರೆತಿರುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಸಂಜೆ ಬಹಿರಂಗಪಡಿಸಿದ್ದರು. ಬೆನ್ನಲ್ಲೇ ಉದ್ಯಮಿಗಳು, ಮೀಸಲಾತಿ ಜಾರಿಗೆ ತಂದರೆ ಕೌಶಲಯುಕ್ತ ಮತ್ತು ಪ್ರತಿಭಾನ್ವಿತ ಅಭ್ಯರ್ಥಿಗಳ ನೇಮಕಾತಿಗೆ ತೊಡಕಾಗುತ್ತದೆ. ಉದ್ಯಮ ಮತ್ತು ಕೈಗಾರಿಕೆಗಳನ್ನು ನಡೆಸುವುದು ಕಷ್ಟವಾಗುತ್ತದೆ ಎಂದು ಆಕ್ಷೇಪ ದಾಖಲಿಸಿದ್ದರು.

'ಮೀಸಲಾತಿ ಸಂಬಂಧ ಉದ್ಯಮಗಳು ಕಳವಳಪಡುವ ಅವಶ್ಯಕತೆ ಇಲ್ಲ. ಕನ್ನಡಿಗರ ಹಿತಾಸಕ್ತಿ ಮತ್ತು ಉದ್ಯಮಗಳ ಹಿತಾಸಕ್ತಿ ಎರಡನ್ನೂ ಗಮನದಲ್ಲಿ ಇರಿಸಿಕೊಂಡು ಮಸೂದೆ ಸಿದ್ಧಪಡಿಸಲಾಗಿತ್ತು. ವಿಸ್ತೃತ ಚರ್ಚೆಯ ಅವಶ್ಯಕತೆ ಇರುವ ಕಾರಣ ಮಸೂದೆಯನ್ನು ತಕ್ಷಣಕ್ಕೆ ತಡೆಹಿಡಿಯಲಾಗಿದೆ' ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳು ಕರ್ನಾಟಕದಿಂದ ಉದ್ಯಮಗಳನ್ನು ಸೆಳೆಯಲು ಪ್ರಯತ್ನಿಸುತ್ತಿರುವಾಗಲೇ ರಾಜ್ಯದಲ್ಲಿ ಇಂತಹದ್ದೊಂದು ಕಾಯ್ದೆ ಜಾರಿ ಮಾಡುವುದರಿಂದ ಕೈಗಾರಿಕಾ ಕ್ಷೇತ್ರದ ಮೇಲೆ ಭಾರೀ ಪರಿಣಾಮ ಬೀರಲಿದೆ ಎಂದು ಸರ್ಕಾರದ ಕೆಲವು ಹಿರಿಯ ಸಚಿವರು ಮುಖ್ಯಮಂತ್ರಿಗೆ ಮನವರಿಕೆ ಮಾಡಿದರು ಎಂದು ಮೂಲಗಳು ಹೇಳಿವೆ.

ಪೋಸ್ಟ್ ಅಳಿಸಿ, ಹೊಸ ಪೋಸ್ಟ್ ಮಾಡಿದ ಸಿ.ಎಂ

ಒಂದನೇ ಪುಟದಿಂದ...

ಸಿದ್ದರಾಮಯ್ಯ ಪೋಸ್ಟ್ ಅಳಿಸಿ, ಮರುಪೋಸ್ಟ್ ಮಾಡಿದ್ದನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ. 'ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು ಎಂಬ ಗಾದೆ ಮಾತು ಸಿ.ಎಂ ಸಿದ್ದರಾಮಯ್ಯನವರಿಗೆ ಅನ್ವಯಿಸುತ್ತದೆ' ಎಂದು ಪ್ರತಿಕ್ರಿಯಿಸಿದರು.

ಈ ಬಗ್ಗೆ ಜೆಡಿಎಸ್ ತನ್ನ 'ಎಕ್ಸ್' ಖಾತೆಯಲ್ಲಿ 'ಸರ್ಕಾರದ ಈ ನಡೆಯನ್ನು ಸ್ವಾಗತಿಸುತ್ತೇವೆ. ಆದರೆ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳಲ್ಲಿ ಶೇ 100ರಷ್ಟು ಮೀಸಲಾತಿ ನೀಡುತ್ತೇವೆ ಎಂಬ ಪೋಸ್ಟ್ ಅನ್ನು ಮುಖ್ಯಮಂತ್ರಿ ಅಳಿಸಿದ್ದು ಯಾಕೆ? ಉದ್ಯಮಿಗಳ ಆಕ್ರೋಶಕ್ಕೆ ಮಣಿದು ಹೀಗೆ ಮಾಡಿದಿರಾ' ಎಂದು ಪ್ರಶ್ನಿಸಿದೆ.

ಬುಧವಾರ ರಾತ್ರಿ ಮತ್ತೆ ಪೋಸ್ಟ್ ಮಾಡಿದ ಸಿ.ಎಂ, ಮುಂದಿನ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗುತ್ತದೆ ಎಂದರು.

ಮಸೂದೆಯಲ್ಲಿ ಇದ್ದದ್ದು...

ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಒದಗಿಸಲು ರಾಜ್ಯ ಸರ್ಕಾರವು 'ಕರ್ನಾಟಕ ರಾಜ್ಯ ಕೈಗಾರಿಕೆ, ಕಾರ್ಖಾನೆ ಮತ್ತು ಇತರೆ ಸಂಸ್ಥೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಉದ್ಯೋಗವಕಾಶ ಮಸೂದೆ–2024' ಅನ್ನು ಸಿದ್ಧಪಡಿಸಿದೆ. ಮಸೂದೆಯ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಮಸೂದೆಯಲ್ಲಿದ್ದ ವಿವರಗಳು ಈ ಮುಂದಿನಂತಿವೆ.

50%
ಆಡಳಿತಾತ್ಮಕ ಹುದ್ದೆಗಳಲ್ಲಿ ಸ್ಥಳೀಯರಿಗೆ ನೀಡಬೇಕಾದ ಮೀಸಲಾತಿಯ ಪ್ರಮಾಣ

ಆಡಳಿತಾತ್ಮಕ ಹುದ್ದೆಗಳು: ಮೇಲ್ವಿಚಾರಕ, ವ್ಯವಸ್ಥಾಪಕ, ತಾಂತ್ರಿಕ, ಕಾರ್ಯನಿರ್ವಾಹಕ, ಆಡಳಿತ ಮತ್ತು ಅದಕ್ಕಿಂತಲೂ ಉನ್ನತ ಹುದ್ದೆಗಳು

70%
ಆಡಳಿತಾತ್ಮಕವಲ್ಲದ ಹುದ್ದೆಗಳಲ್ಲಿ ಸ್ಥಳೀಯರಿಗೆ ನೀಡಬೇಕಾದ ಮೀಸಲಾತಿಯ ಪ್ರಮಾಣ

ಆಡಳಿತಾತ್ಮಕವಲ್ಲದ ಹುದ್ದೆಗಳು: ಗುಮಾಸ್ತ, ಕೌಶಲ ಬೇಡದ ಹುದ್ದೆಗಳು, ಅರೆಕೌಶಲ ಬೇಡುವ ಹುದ್ದೆ

ಅನ್ವಯ: ಕೈಗಾರಿಕೆ, ಕಾರ್ಖಾನೆ, ಇತರ ಯಾವುದೇ ಖಾಸಗಿ ಸಂಸ್ಥೆ

ಸ್ಥಳೀಯ ಅಭ್ಯರ್ಥಿಗಳು: ಕರ್ನಾಟಕದಲ್ಲಿ ಹುಟ್ಟಿದವರು ಮತ್ತು 15 ವರ್ಷಗಳಿಂದ ಕರ್ನಾಟಕದಲ್ಲಿ ನೆಲೆಸಿರುವವರು. ಸ್ಪಷ್ಟವಾಗಿ ಕನ್ನಡ ಮಾತನಾಡಲು, ಓದಲು ಮತ್ತು ಬರೆಯಲು ಬರುವವರು.

ದಂಡ: ಉಲ್ಲಂಘನೆಗೆ ಕನಿಷ್ಠ ₹10,000 ದಿಂದ ಗರಿಷ್ಠ ₹25,000 ದವರೆಗೆ ದಂಡ. ದಂಡ ವಿಧಿಸಿದ ದಿನದಿಂದ ಮೀಸಲಾತಿಯ ಅನ್ವಯ ನೇಮಕ ಮಾಡಿಕೊಳ್ಳುವವರೆಗೆ ಪ್ರತಿದಿನ ₹100 ಹೆಚ್ಚುವರಿ ದಂಡ

ಷರತ್ತುಗಳು ಮತ್ತು ವಿನಾಯಿತಿಗಳು

- ಸ್ಥಳೀಯ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದರೆ, ಸಂಬಂಧಿತ ಕಂಪನಿಯು ಸರ್ಕಾರದ ಸಹಯೋಗದಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಅಗತ್ಯ ತರಬೇತಿ ನೀಡಬೇಕು
- ಅಗತ್ಯವಿರುವಷ್ಟು ಸ್ಥಳೀಯ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದರೆ ಸಂಬಂಧಿತ ಕಂಪನಿಗಳು ವಿನಾಯಿತಿ ಕೋರಿ ಸರ್ಕಾರಕ್ಕೆ ಪತ್ರ ಬರೆಯಬೇಕು
- ವಿನಾಯಿತಿ ಅನ್ವಯವಾದರೂ, ಆಡಳಿತಾತ್ಮಕ ಹುದ್ದೆಗಳಲ್ಲಿ ಕನಿಷ್ಠ ಶೇ 25ರಷ್ಟು ಮತ್ತು ಆಡಳಿತಾತ್ಮಕವಲ್ಲದ ಹುದ್ದೆಗಳಲ್ಲಿ ಕನಿಷ್ಠ ಶೇ 50ರಷ್ಟು ಮೀಸಲಾತಿ ಇರಲೇಬೇಕು

ನಿರ್ದೇಶಕ ಸ್ಥಾನಕ್ಕೆ ಪಿಚ್ಚಳ್ಳಿ ಶ್ರೀನಿವಾಸ, ತಿಪಟೂರು ಸತೀಶ್, ಕೃಷ್ಣಪ್ರಸಾದ್ ಪೈಪೋಟಿ

ರಂಗಾಯಣ: ಮೂವರ ಹೆಸರು ಶಿಫಾರಸು

ಪ್ರಜಾವಾಣಿ ವಾರ್ತೆ

ಮೈಸೂರು: ವರ್ಷದಿಂದಲೂ ತೆರವಾಗಿದ್ದ ಇಲ್ಲಿನ ರಂಗಾಯಣ ನಿರ್ದೇಶಕ ಸ್ಥಾನಕ್ಕೆ ಮೂವರ ಹೆಸರನ್ನು ರಂಗ ಸಮಾಜವು ಶಿಫಾರಸು ಮಾಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಬ್ಬರ ಹೆಸರನ್ನು ಅಂತಿಮಗೊಳಿಸಲಿದ್ದಾರೆ.

ಜಾನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ, ತಿಪಟೂರಿನ ಭೂಮಿ ಬಳಗದ ತಿಪಟೂರು ಸತೀಶ್ ಹಾಗೂ ರಂಗಾಯಣದ ನಿವೃತ್ತ ಕಲಾವಿದ ಕೃಷ್ಣಪ್ರಸಾದ್ ಅವರ ಹೆಸರನ್ನು ಶಿಫಾರಸು ಮಾಡಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಈಚೆಗೆ ರಂಗ ಸಮಾಜದ ಸಭೆಯು ನಡೆದಿತ್ತು. ಸದಸ್ಯರಾದ ಶಶಿಧರ ಬಾರಿಘಾಟ್, ರಾಜಪ್ಪ ದಳವಾಯಿ, ನರೇಶ್ ಡಿಂಗ್ರಿ, ಸುರೇಶ್ ಬಾಬು, ಮಹಾಂತೇಶ ಗಜೇಂದ್ರಗಡ ಅವರ ಸಮಿತಿಯು ಮೂವರನ್ನು ಅಂತಿಮಗೊಳಿಸಿದೆ.


ಪಿಚ್ಚಳ್ಳಿ ಶ್ರೀನಿವಾಸ್


ತಿಪಟೂರು ಸತೀಶ್


ಕೃಷ್ಣಪ್ರಸಾದ್

'ಮೈಸೂರಿನ ಜೊತೆಗೆ ಶಿವಮೊಗ್ಗ, ಧಾರವಾಡ, ಕಲಬುರಗಿ, ದಾವಣಗೆರೆ ಹಾಗೂ ಕಾರ್ಕಳದ ರಂಗಾಯಣದ ನಿರ್ದೇಶಕ ಸ್ಥಾನಗಳಿಗೂ ತಲಾ ಮೂವರ ಹೆಸರನ್ನು ಆಯ್ಕೆ ಮಾಡಿದ್ದು, ಎರಡು– ಮೂರು ದಿನದಲ್ಲಿಯೇ 18 ಮಂದಿಯಲ್ಲಿ 6 ನಿರ್ದೇಶಕರ ಹೆಸರು ಘೋಷಣೆಯಾಗಲಿದೆ' ಎಂದು ರಂಗಸಮಾಜದ ಸದಸ್ಯ ಸುರೇಶ್ ಬಾಬು 'ಪ್ರಜಾವಾಣಿ'ಗೆ ತಿಳಿಸಿದರು.

'ರಂಗಸಮಾಜದಲ್ಲಿ ಖಾಲಿಯಿದ್ದ ನಾಮನಿರ್ದೇಶಿತ ಸದಸ್ಯ ಸ್ಥಾನಕ್ಕೆ ರಂಗಕರ್ಮಿ ಶಕೀಲ್ ಅಹಮ್ಮದ್ ಅವರನ್ನು ಸಭೆಯಲ್ಲಿ ಆಯ್ಕೆ ಮಾಡಲಾಯಿತು' ಎಂದು ಮಾಹಿತಿ ನೀಡಿದರು.

ಈ ಹಿಂದೆ ನಿರ್ದೇಶಕರಾದ್ದವರು: ಮೈಸೂರು ರಂಗಾಯಣ ಇದುವರೆಗೆ 10 ನಿರ್ದೇಶಕರನ್ನು ಕಂಡಿದೆ.

1989ರಿಂದ 1996ರವರೆಗೆ ಬಿ.ವಿ. ಕಾರಂತರು ಮೊದಲ ನಿರ್ದೇಶಕರಾಗಿದ್ದರು. ನಂತರ ಕ್ರಮವಾಗಿ ಸಿ. ಬಸವಲಿಂಗಯ್ಯ, ಪ್ರಸನ್ನ, ಚಿದಂಬರರಾವ್ ಜಂಬೆ, ಬಿ. ಜಯಶ್ರೀ, ಲಿಂಗದೇವರು ಹಳೇಮನೆ, ಬಿ.ವಿ. ರಾಜಾರಾಂ, ಎಚ್. ಜನಾರ್ದನ (ಜನ್ನಿ), ಭಾಗೀರಥಿಬಾಯಿ, ಅಡ್ಡಂಡ ಕಾರ್ಯಪ್ಪ ಕಾರ್ಯನಿರ್ವಹಿಸಿದ್ದರು.

ವರ್ಷದಿಂದಲೂ ಖಾಲಿ..

2023ರ ಮೇ 14ರಿಂದಲೂ ಮೈಸೂರಿನ ರಂಗಾಯಣ ನಿರ್ದೇಶಕ ಸ್ಥಾನ ತೆರವಾಗಿತ್ತು. ಕಾಂಗ್ರೆಸ್ ಸರ್ಕಾರ ರಚನೆಯಾಗುವುದಕ್ಕೂ ಮುಂಚೆಯೇ ಅಡ್ಡಂಡ ಸಿ.ಕಾರ್ಯಪ್ಪ ರಂಗಾಯಣ ನಿರ್ದೇಶಕರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನಂತರ ಸರ್ಕಾರವೂ ನೇಮಕ ಪ್ರಕ್ರಿಯೆ ನಡೆಸಿರಲಿಲ್ಲ.

ಈ ವೇಳೆ ನಿರ್ದೇಶಕ ಸ್ಥಾನಕ್ಕೆ ನೇಮಕಗೊಳಿಸಲು ವರ್ಷದಿಂದಲೂ ಸಾಮಾಜಿಕ ಜಾಲತಾಣದಲ್ಲೂ ಚರ್ಚೆ ನಡೆದಿತ್ತು. ಯುವಕರಿಗೆ ಆದ್ಯತೆ ನೀಡಬೇಕೆಂಬ ಒತ್ತಾಯ ಕೇಳಿಬಂದಿತ್ತು.

ಈ ಹಿಂದೆ ನಿರ್ದೇಶಕರಾಗಿದ್ದ ಸಿ. ಬಸವಲಿಂಗಯ್ಯ, ಎಚ್. ಜನಾರ್ದನ (ಜನ್ನಿ) ಹೆಸರುಗಳು ಮತ್ತೊಮ್ಮೆ ಚಾಲ್ತಿಯಲ್ಲಿದ್ದವು. ತಿಪಟೂರಿನ ಭೂಮಿ ಬಳಗದ ಸತೀಶ್, ಧಾರವಾಡದ ಮಹದೇವ ಹಡಪದ, ಉಮೇಶ್ ಸಾಲಿಯಾನ, ಕೆ.ಪಿ.ಲಕ್ಷ್ಮಣ ಹೆಸರುಗಳು ಪ್ರಸ್ತಾಪಗೊಂಡಿದ್ದವು.

ಇದೀಗ ರಂಗ ಸಮಾಜವು ಮೂವರ ಹೆಸರನ್ನು ಅಂತಿಮಗೊಳಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಹೆಸರು ಘೋಷಿಸುವುದಷ್ಟೇ ಬಾಕಿಯಿದೆ.

'ಈ ಬಾರಿ ಯಾರೇ ನಿರ್ದೇಶಕರಾಗಲಿ, ಈಚಿನ ದಿನಗಳಲ್ಲಿ ವಿವಾದಗಳಲ್ಲೇ ಕಳೆದು ಹೋಗಿರುವ ಸಂಸ್ಥೆಗೆ ಪುನಶ್ಚೇತನ, ಸಾಂಸ್ಕೃತಿಕ ಮೆರುಗು ನೀಡಬೇಕು. ಪ್ರಯೋಗಶೀಲತೆಯನ್ನು ಮೈಗೂಡಿಸಿಕೊಳ್ಳುವವರು ಸ್ಥಾನಕ್ಕೆ ಬರಬೇಕು' ಎಂಬುದು ರಂಗಾಸಕ್ತರ ಆಶಯ.



ಸುಭಾಷಿತ

ಇತರರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವುದೇ ಯಶಸ್ಸಿನ ರಹಸ್ಯ.

–ಹೆನ್ರಿ ಫೋರ್ಡ್

ನೇಪಾಳದಲ್ಲಿ ಮುಂದುವರಿದ ಅಸ್ಥಿರತೆ ಭಾರತದ ಜೊತೆಗಿನ ಸಂಬಂಧವೂ ಅಸ್ಥಿರ?

ನೆರೆಯ ನೇಪಾಳದ ಪಾಲಿಗೆ ರಾಜಕೀಯ ಸ್ಥಿರತೆಯನ್ನು ಕಂಡುಕೊಳ್ಳುವುದು ಸವಾಲಾಗಿ ಪರಿಣಮಿಸಿದೆ. ಕೆ.ಪಿ. ಶರ್ಮಾ ಓಲಿ ಅವರು ದೇಶದ ನೂತನ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿರುವುದು, ನೇಪಾಳವು ಗಣರಾಜ್ಯವಾಗಿ ಬದಲಾದ ದಿನದಿಂದಲೂ ಸಮಸ್ಯೆಯಾಗಿ ಕಾಡುತ್ತಿರುವ ರಾಜಕೀಯ ಅಸ್ಥಿರತೆಯನ್ನು ಎತ್ತಿತೋರಿಸಿದೆ. ಈ ಹಿಂದಿನ ಪ್ರಧಾನಿ ಹಾಗೂ ನೇಪಾಳದ ಕಮ್ಯುನಿಸ್ಟ್ ಪಕ್ಷ (ಎಂಸಿ) ನಾಯಕ ಪುಷ್ಪ ಕಮಲ್ ದಹಲ್ 'ಪ್ರಚಂಡ' ಅವರಿಗೆ 275 ಸದಸ್ಯ ಬಲದ ಸದನದಲ್ಲಿ ಜುಲೈ 12ರಂದು 63 ಸದಸ್ಯರ ಬೆಂಬಲವನ್ನು ಮಾತ್ರ ಸಾಬೀತು ಮಾಡಲು ಸಾಧ್ಯವಾದಾಗ, ಓಲಿ ಅವರನ್ನು ಪ್ರಧಾನಿಯಾಗಿ ನೇಮಕ ಮಾಡುವುದು ಅನಿವಾರ್ಯವಾಯಿತು. ಓಲಿ ಅವರ ಸಿಪಿಎನ್-ಯುಎಂಎಲ್ ಪಕ್ಷದ ಬೆಂಬಲದೊಂದಿಗೆ ಪ್ರಚಂಡ ಅವರು ಆಡಳಿತ ನಡೆಸುತ್ತಿದ್ದರು. ಆದರೆ ಓಲಿ ಅವರ ಪಕ್ಷವು ಪ್ರಚಂಡ ಅವರಿಗೆ ನೀಡಿದ್ದ ಬೆಂಬಲ ಹಿಂಪಡೆಯಿತು. ಬೆಂಬಲ ಹಿಂಪಡೆಯುವುದಕ್ಕೂ ಮೊದಲು ಓಲಿ ಅವರು, ಪ್ರಚಂಡ ಅವರಿಗೆ ತಿಳಿಯದಂತೆ ನೇಪಾಳಿ ಕಾಂಗ್ರೆಸ್ ಪಕ್ಷದ ಶೇರ್ ಬಹದ್ದೂರ್ ದೇಉಬಾ ಅವರೊಂದಿಗೆ ಕೈಜೋಡಿಸಿದ್ದರು. ಹೊಸ ಸರ್ಕಾರವನ್ನು ರಚಿಸಲು ಓಲಿ ಅವರು ರಾಷ್ಟ್ರಪತಿ ರಾಮಚಂದ್ರ ಪೌದೆಲ್ ಅವರಲ್ಲಿ ಹಕ್ಕು ಮಂಡಿಸುವ ಹೊತ್ತಿನಲ್ಲಿ 165 ಸಂಸದರ ಬೆಂಬಲ ಇರುವ ಪತ್ರವನ್ನು ಸಲ್ಲಿಸಿದ್ದರು. ಓಲಿ ಅವರ ಪಕ್ಷವು 77 ಸದಸ್ಯ ಬಲ ಹೊಂದಿದೆ. ನೇಪಾಳಿ ಕಾಂಗ್ರೆಸ್ ಪಕ್ಷವು 88 ಸದಸ್ಯರನ್ನು ಹೊಂದಿದೆ. ಈ ಎರಡು ಪಕ್ಷಗಳು ಒಟ್ಟಾಗಿರುವ ಕಾರಣ, ಸರ್ಕಾರ ರಚಿಸಲು ಅಗತ್ಯವಿರುವ ಸದಸ್ಯ ಬಲವನ್ನು ಒಗ್ಗೂಡಿಸಿದಂತೆ ಆಗಿದೆ. ನೇಪಾಳದಲ್ಲಿ ಸರ್ಕಾರ ರಚಿಸಲು ಕನಿಷ್ಠ 138 ಸದಸ್ಯರ ಬೆಂಬಲ ಅಗತ್ಯ.



ನೇಪಾಳದ ನೂತನ ಪ್ರಧಾನಿ ಓಲಿ ಅವರು ಭಾರತಕ್ಕಿಂತ ಹೆಚ್ಚಾಗಿ ಚೀನಾದ ಪರ ಒಲವು ಹೊಂದಿರುವುದರಿಂದ, ನೆರೆ ರಾಷ್ಟ್ರದ ಬೆಳವಣಿಗೆಯನ್ನು ಭಾರತ ಅತ್ಯಂತ ಎಚ್ಚರಿಕೆಯಿಂದ ಗಮನಿಸಬೇಕಾಗಿದೆ

ಇಲ್ಲಿ ಗಮನಾರ್ಹ ಅಂಶವೆಂದರೆ, ಓಲಿ ಅವರ ಪಕ್ಷವು ಮೈತ್ರಿಕೂಟದಲ್ಲಿ ನೇಪಾಳಿ ಕಾಂಗ್ರೆಸ್ಸಿಗೆ ಇರುವ ಸದಸ್ಯ ಬಲಕ್ಕೆ ಹೋಲಿಸಿದರೆ ಕಡಿಮೆ ಸಂಖ್ಯೆಯ ಸದಸ್ಯರನ್ನು ಹೊಂದಿದೆ. ಇದು ಹೊಸದಾಗಿ ರಚನೆ ಆಗಿರುವ ಸರ್ಕಾರದ ದೌರ್ಬಲ್ಯವನ್ನು ಹೇಳುತ್ತಿದೆ. 2027ರಲ್ಲಿ ನೇಪಾಳದಲ್ಲಿ ಚುನಾವಣೆ ನಡೆಯಬೇಕಿದೆ. ಅಲ್ಲಿಯವರೆಗಿನ ಅವಧಿಯಲ್ಲಿ ಪ್ರಧಾನಿ ಹುದ್ದೆಯನ್ನು ಸಮಾನ ಅವಧಿಗೆ ಎರಡೂ ಪಕ್ಷಗಳು ಹಂಚಿಕೊಳ್ಳುವ ಒಪ್ಪಂದ ಮಾಡಿಕೊಂಡಿವೆ. ಆದರೆ ರಾಜಕಾರಣದಲ್ಲಿ ಇಂತಹ ಒಪ್ಪಂದಗಳಿಗೆ ಹೆಚ್ಚಿನ ಅರ್ಥ ಇರುವುದಿಲ್ಲ. ಪ್ರಧಾನಿ ಹುದ್ದೆಯಲ್ಲಿ ತಮ್ಮ ಅವಧಿ ಪೂರ್ಣಗೊಂಡ ನಂತರ ಓಲಿ ಅವರು ದೇಉಬಾ ಅವರಿಗೆ ಹುದ್ದೆಯನ್ನು ಬಿಟ್ಟುಕೊಡುತ್ತಾರೆ ಎಂಬುದು ಖಚಿತವೇನೂ ಅಲ್ಲ. ದೇಉಬಾ ಅವರೂ ಓಲಿ ಅವರಂತೆಯೇ ಮಹತ್ವಾಕಾಂಕ್ಷೆಗಳನ್ನು ಹೊಂದಿರುವ ರಾಜಕಾರಣಿ. ಓಲಿ ಹಾಗೂ ದೇಉಬಾ ಅವರ ಪಕ್ಷಗಳ ನಡುವೆ ಸೈದ್ಧಾಂತಿಕ ಸಾಮ್ಯತೆ ಹೆಚ್ಚೇನೂ ಇಲ್ಲವಾಗಿರುವ ಕಾರಣ, ಎರಡೂ ಪಕ್ಷಗಳು ಒಟ್ಟಾಗಿ ಉಳಿಯಲಿವೆ ಎಂಬುದನ್ನು ಖಚಿತವಾಗಿ ಹೇಳಲಾಗದು. ಓಲಿ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿರುವುದು ಇದು ನಾಲ್ಕನೆಯ ಬಾರಿ. ತಮ್ಮ ಅಧಿಕಾರ ಅವಧಿಯನ್ನು ಪೂರ್ಣಗೊಳಿಸಲು ಅಗತ್ಯವಿರುವ ಮೈತ್ರಿಧರ್ಮದ ಪಾಲನೆಯ ಸಾಮರ್ಥ್ಯ ತಮಗೆ ಇದೆ ಎಂಬುದನ್ನು ಓಲಿ ಅವರು ಇನ್ನಷ್ಟೇ ತೋರಿಸಿಕೊಡಬೇಕಿದೆ. ಈಗ ಅವರು ಸಂಸತ್ತಿನಲ್ಲಿ ಬಹುಮತ ಸಾಬೀತು ಮಾಡಬೇಕಾಗಿದೆ.

ಓಲಿ ಅವರು ಅಧಿಕಾರಕ್ಕೇರಿರುವುದು ಭಾರತಕ್ಕೆ ಒಂದಿಷ್ಟು ಕಳವಳ ಮೂಡಿಸುವಂಥ ವಿಚಾರವೇ. ಪ್ರಧಾನಿ ನರೇಂದ್ರ ಮೋದಿ ಅವರು ಓಲಿ ಅವರಿಗೆ ಶುಭಾಶಯ ಕೋರಿದ್ದಾರಾದರೂ ಓಲಿ ಅವರು ಭಾರತಕ್ಕಿಂತಲೂ ಹೆಚ್ಚಾಗಿ ಚೀನಾದ ಪರ ಒಲವು ಹೊಂದಿದ್ದಾರೆ ಎಂಬುದು ಗೊತ್ತಿರುವ ಸಂಗತಿ. ಭಾರತವು ನೇಪಾಳದ ವಿಚಾರದಲ್ಲಿ ಹೊಂದಿರುವ ನೀತಿಗಳ ವಿರುದ್ಧವಾಗಿ ಓಲಿ ಅವರು ಪ್ರಚಾರ ನಡೆಸಿದ್ದರು. ಭಾರತವು ಈ ಪ್ರದೇಶದಲ್ಲಿ ಪ್ರಭಾವವನ್ನು ಬೀರಲು ಯತ್ನಿಸುವ, ತೊಂದರೆಗಳನ್ನು ಸೃಷ್ಟಿಸುವ ದೊಡ್ಡಣ್ಣನಂತೆ ವರ್ತಿಸುತ್ತದೆ ಎಂಬ ಚಿತ್ರಣ ಮೂಡಿಸಲು ಯತ್ನಿಸಿದ್ದರು. ಓಲಿ ಅವರು ಈ ಹಿಂದೆ ಪ್ರಧಾನಿಯಾಗಿದ್ದಾಗ, ಭಾರತ ಮತ್ತು ನೇಪಾಳದ ನಡುವೆ ಅಂತರ ಸೃಷ್ಟಿಸಲು ಬಹಳಷ್ಟು ಶ್ರಮಪಟ್ಟಿದ್ದರು. 2020ರಲ್ಲಿ ಓಲಿ ಅವರು ಭಾರತದ ಕೆಲವು ಪ್ರದೇಶಗಳು ನೇಪಾಳಕ್ಕೆ ಸೇರಬೇಕು ಎಂಬ ಆಧಾರರಹಿತ ಹಾಗೂ ಅನಿರೀಕ್ಷಿತ ಹೇಳಿಕೆ ನೀಡಿದ್ದರು. ಈ ಬಾರಿ ಓಲಿ ಅವರು ಮೈತ್ರಿಕೂಟದ ಸರ್ಕಾರದ ನಾಯಕತ್ವ ವಹಿಸಿದ್ದಾರೆ ಹಾಗೂ ಮೈತ್ರಿಕೂಟದಲ್ಲಿ ಅತಿಹೆಚ್ಚಿನ ಸದಸ್ಯ ಬಲ ಹೊಂದಿರುವ ನೇಪಾಳಿ ಕಾಂಗ್ರೆಸ್ ಪಕ್ಷವು ಭಾರತದ ಜೊತೆ ಹಿಂದಿನಿಂದ ಉತ್ತಮ ಸಂಬಂಧ ಹೊಂದಿದೆ ಎಂಬುದು ಈ ಬಾರಿ ಸಮಾಧಾನ ತರುವ ವಿಚಾರ. ನೇಪಾಳದ ರಾಜನು ಪಕ್ಷಕ್ಕೆ ಕಿರುಕುಳ ನೀಡಿದ್ದಾಗ, ಪಕ್ಷದ ನಾಯಕರು, ಅದರಲ್ಲೂ ಮುಖ್ಯವಾಗಿ ಕೊಯಿರಾಲಾ ಕುಟುಂಬದವರು ಭಾರತದಲ್ಲಿ ಆಶ್ರಯ ಪಡೆದಿದ್ದರು. ಹೀಗಾಗಿ, ನೇಪಾಳಿ ಕಾಂಗ್ರೆಸ್ ಪಕ್ಷಕ್ಕೆ ಭಾರತ–ನೇಪಾಳ ಸಂಬಂಧ ಚೆನ್ನಾಗಿರಬೇಕಾದುದರ ಮಹತ್ವ ಗೊತ್ತಿದೆ.

ದಿನದ ಟ್ವೀಟ್

ಅರಿಯೋಣ ಉಡುಗೆ– ತೊಡುಗೆಯ ಮಹತ್ವ



ಸ್ನೇಹಿತರು, ಸಂಬಂಧಿಕರ ಭೇಟಿ, ಧಾರ್ಮಿಕ ಸ್ಥಳಗಳಿಗೆ ತೆರಳುವಂತಹ ಸಂದರ್ಭಗಳಲ್ಲಿ ನಿರ್ದಿಷ್ಟ ರೀತಿಯ ಉಡುಗೆ– ತೊಡುಗೆಗಳನ್ನು ಧರಿಸಬೇಕೆಂದು ತಾವು ಬಯಸುವುದೇಕೆ ಎಂಬುದನ್ನು ತಮ್ಮ ಮಕ್ಕಳಿಗೆ ಅರ್ಥ ಮಾಡಿಸಬೇಕಾದುದು ಪೋಷಕರ ಕರ್ತವ್ಯ ಮತ್ತು ಬಾಧ್ಯತೆಯಾಗಿರುತ್ತದೆ. ಆದರೆ ಅದು ಪೋಷಕರಿಂದ ಆಗುವ ಹೇರಿಕೆಯಂತೆ ಇರಬಾರದು... ಪ್ರೀತಿ ಮತ್ತು ಕಾಳಜಿಯಿಂದ ಅವರು ಅರಿತುಕೊಳ್ಳುವಂತೆ ಹೇಳಿದರೆ ಸಾಕು.

ಮುಖ್‌ಬಿಲ್ ಚಿಸ್ತಿ, ಬೋಧಕಿ

ಕಿಡಿನುಡಿ



ಉತ್ತರಪ್ರದೇಶದ ಪೊಲೀಸರಿಂದ ಆಘಾತಕಾರಿ ಆದೇಶ: 'ಉಪಾಹಾರ ಗೃಹಗಳು, ತಿಂಡಿ ತಿನಿಸಿನ ಮಳಿಗೆಗಳು ಮತ್ತು ತಳ್ಳುಗಾಡಿಗಳು ಮಾಲೀಕರ ಹೆಸರನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು'. ನಾವು ಎತ್ತ ಸಾಗುತ್ತಿದ್ದೇವೆ? ಅಂಗಡಿಗಳು ಹಾಗೂ ಮಾಲ್‌ಗಳಿಗೂ ಈಗ ಮಾಲೀಕರ ಧರ್ಮದ ಮೊಹರು ಹಚ್ಚಲಾಗುವುದೇ? ಪ್ರಜಾಪ್ರಭುತ್ವದಲ್ಲಿ ಇದನ್ನು ಒಪ್ಪಲಾಗದು!

ಸಲ್ಮಾನ್ ನಿಝಾಮಿ, ಮುಖ್ಯ ವಕ್ತಾರ, ಡೆಮಾಕ್ರಟಿಕ್ ಪ್ರೋಗ್ರೆಸಿವ್ ಆಜಾದ್ ಪಾರ್ಟಿ

25 ವರ್ಷಗಳ ಹಿಂದೆ

ಭಾನುವಾರ, 18-7-1999

● ಪಟೇಲ್ ನಿಲುವಿಗೆ ವಿರೋಧ ವಿಭಜನೆಯತ್ತ ದಳ

ನವದೆಹಲಿ, ಜುಲೈ 17– ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ಜತೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ವಿಚಾರಧಾರೆಗೆ ಇಂದು ನಡೆದ ದಳದ ರಾಜಕೀಯ ವ್ಯವಹಾರಗಳ ಸಮಿತಿ ಸಭೆಯಲ್ಲಿ ತೀವ್ರ ವಿರೋಧ ವ್ಯಕ್ತವಾಯಿತು.

ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಸಮಾನ ದೂರದಲ್ಲಿದ್ದು, ಕೆಲವು ಮಿತ್ರಪಕ್ಷಗಳೊಡನೆ ಸ್ಥಳೀಯವಾಗಿ ಸ್ಥಾನ ಹೊಂದಾಣಿಕೆಗೆ ಒಮ್ಮತ ಮೂಡಿಬರುವ ಲಕ್ಷಣಗಳು ಇಂದು ರಾತ್ರಿ ಕಂಡುಬಂದವು. ಇದು ಸಾಧ್ಯವಾಗದಿದ್ದರೆ ಕರ್ನಾಟಕದ ಜನತಾದಳ ಹೋಳಾಗುವುದು ಅನಿವಾರ್ಯವಾಗಬಹುದು.

● ಬಿಹಾರದಲ್ಲಿ ಸೇನೆಗೆ ಸೇರಲು ನೂಕುನುಗ್ಗಲು, ಗೋಲಿಬಾರ್: 3 ಸಾವು

ಪಟ್ನಾ, ಜುಲೈ 17 (ಪಿಟಿಐ)– ಸೇನೆಗೆ ಸೇರ ಬಯಸಿ ಬಂದಿದ್ದ ಸಂದರ್ಶನಾರ್ಥಿಯೊಬ್ಬ ಪೊಲೀಸ್ ಅಧಿಕಾರಿ ಬಳಿ ಇದ್ದ ಪಿಸ್ತೂಲ್ ಕಸಿದುಕೊಂಡು ಅವರ ಮೇಲೇ ಗುಂಡು ಹಾರಿಸಿದಾಗ ಉಂಟಾದ ನೂಕುನುಗ್ಗಲು ಹಾಗೂ ಗುಂಪನ್ನು ನಿಯಂತ್ರಿಸಲು ಪ್ರತಿಯಾಗಿ ಪೊಲೀಸರು ಹಾರಿಸಿದ ಗುಂಡೇಟಿಗೆ ಒಟ್ಟು ಮೂವರು ಮೃತಪಟ್ಟು, ಇತರ 30 ಮಂದಿ ಗಾಯಗೊಂಡಿರುವ ಘಟನೆ ದರ್ಭಾಂಗಾ ಹಾಗೂ ಚಾಪ್ರಾದಲ್ಲಿ ಇಂದು ಸಂಭವಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 18-7-1974

● ವೇತನಶ್ರೇಣಿ ಪುನರ್ವಿಮರ್ಶೆಗೆ ಆಯೋಗ ರಚಿಸಲು ಕರ್ನಾಟಕ ಸರ್ಕಾರದ ನಿರ್ಧಾರ

ಬೆಂಗಳೂರು, ಜುಲೈ 17– ರಾಜ್ಯ ಸರ್ಕಾರಿ ನೌಕರರು, ಸ್ಥಳೀಯ ಸಂಸ್ಥೆಗಳು ಹಾಗೂ ಅನುದಾನ ಪಡೆಯುತ್ತಿರುವ ಸಂಸ್ಥೆಗಳ ಸಿಬ್ಬಂದಿಯ ವೇತನಶ್ರೇಣಿ ಪುನರ್ವಿಮರ್ಶೆಗೆ ಆಯೋಗವೊಂದನ್ನು ನೇಮಿಸಲು ಕರ್ನಾಟಕ ಸಚಿವ ಸಂಪುಟ ಇಂದು ನಿರ್ಧರಿಸಿತು.

ಕೆಲವು ದಿನಗಳಲ್ಲಿಯೇ ರಚಿತವಾಗುವ ಈ ಆಯೋಗವು ರಾಜ್ಯದ ಆರ್ಥಿಕ ಸೌಕರ್ಯದ ಚೌಕಟ್ಟಿನಲ್ಲಿ, ಯಾವ ರೀತಿಯಲ್ಲಿ ವೇತನಶ್ರೇಣಿ ಪುನರ್ವಿಮರ್ಶೆಯಾಗಬೇಕು ಎಂಬುದರ ಬಗ್ಗೆ ವ್ಯಾಪಕ ಹಾಗೂ ಆಳವಾದ ಸಮೀಕ್ಷೆ ನಡೆಸುವುದು ಎಂದು ಅರ್ಥ ಹಾಗೂ ವಾರ್ತಾ ಮಂತ್ರಿ ಶ್ರೀ ಎಂ.ವೈ. ಘೋರ್ಪಡೆ ಅವರು ವರದಿಗಾರರಿಗೆ ತಿಳಿಸಿದರು.

● ವೈದ್ಯರೂ ವಕೀಲರೂ ತೆರಿಗೆಗಳ್ಳರೇ!

ನವದೆಹಲಿ, ಜುಲೈ 17– ದೇಶದಲ್ಲಿರುವ ವೃತ್ತಿನಿರತ ವೈದ್ಯರಲ್ಲಿ ಕೇವಲ ಶೇ 50ರಷ್ಟು ಮಂದಿ ಆದಾಯ ತೆರಿಗೆ ಸಲ್ಲಿಸುತ್ತಿದ್ದಾರೆಂದು ಹಣಕಾಸು ಖಾತೆ ಸ್ಟೇಟ್ ಸಚಿವ ಕೆ.ಆರ್. ಗಣೇಶ್ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

ವಕೀಲರೂ ಸೇರಿದಂತೆ ವೃತ್ತಿನಿರತರಲ್ಲಿ, ಸ್ವಯಂ ಉದ್ಯೋಗಿಗಳಲ್ಲಿ ತೆರಿಗೆಗಳ್ಳತನದ ಪ್ರಮಾಣ ಹೆಚ್ಚಾಗಿಯೇ ಇದೆ ಎಂಬುದನ್ನು ಅವರು ಒಪ್ಪಿಕೊಂಡಿದ್ದಾರೆ.

ಈ ವರ್ಗದವರಲ್ಲಿ ತೆರಿಗೆ ತಪ್ಪಿಸಿಕೊಳ್ಳುವವರ ಸಮೀಕ್ಷೆ ನಡೆಸಲು ಆದಾಯ ತೆರಿಗೆ ಇಲಾಖೆಗೆ ಸೂಚಿಸಲಾಗಿದೆ ಎಂದು ಸಚಿವರು ಇಂದು ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಯ ಫಲಿತಾಂಶದ ಕಾರಣದಿಂದ ಆಗಿರುವ ಪರಿಣಾಮಗಳು ಹಲವು

ರಾಜ್ಯ ರಾಜಕಾರಣದ ಸೆಳೆತ ಎತ್ತ?



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಲೋಕಸಭಾ ಚುನಾವಣೆಯ ಫಲಿತಾಂಶ ಘೋಷಣೆ ಆಗಿ ಸರಿಸುಮಾರು ಆರು ವಾರಗಳು ಕಳೆದಿವೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷವೊಂದು ಹೆಚ್ಚಿನ ಸಾಧನೆ ತೋರಿತೇ ಅಥವಾ ಅದು ತನ್ನ ಮೈತ್ರಿ ಪಾಲುದಾರ ಪಕ್ಷದ ಆಸರೆ ಪಡೆದು ತಾನು ಗೆದ್ದೆ ಎಂಬ ಘೋಷಣೆ ಮಾಡಿತೇ ಎಂಬ ವಿಚಾರವಾಗಿ ಹಲವು ಬಗೆಯ ಚರ್ಚೆಗಳು ನಡೆದಿವೆ. ಲೋಕಸಭೆಯಲ್ಲಿ ವಿರೋಧ ಪಕ್ಷವು ಬಲಿಷ್ಠವಾಗಿದೆ ಅಂದಮಾತ್ರಕ್ಕೆ ಅಲ್ಲಿ ವಿರೋಧ ಪಕ್ಷದ ಕಾರ್ಯಗಳು ಹೆಚ್ಚು ಉತ್ತಮವಾಗಿರುತ್ತವೆ ಎಂದು ಭಾವಿಸಬಹುದೇ ಎಂಬ ಪ್ರಶ್ನೆಯೂ ಇದೆ. ಆದರೆ ಈ ಬರಹವು ಕರ್ನಾಟಕದಲ್ಲಿನ ಫಲಿತಾಂಶವು ಇಲ್ಲಿನ ರಾಜಕಾರಣದ ಮೇಲೆ ಯಾವ ಬಗೆಯ ಪರಿಣಾಮ ಬೀರುತ್ತದೆ ಎಂಬುದನ್ನು ಅವಲೋಕಿಸುತ್ತದೆ.

ಕರ್ನಾಟಕದ ಫಲಿತಾಂಶವನ್ನು ಯಾವ ಮಸೂರ ಹಿಡಿದು ವಿಶ್ಲೇಷಿಸಬಹುದು? ರಾಜ್ಯದ ಪ್ರಮುಖ ಪಕ್ಷಗಳ ಪೈಕಿ ಯಾವ ಪಕ್ಷವೂ ತಾನು ಭಾರಿ ಜಯ ಸಾಧಿಸಿದ್ದೇನೆ ಎಂದು ಹೇಳಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ರಾಜ್ಯದ ಪ್ರಮುಖ ಪಕ್ಷಗಳು ಸಂಯಮದಿಂದ ಪ್ರತಿಕ್ರಿಯೆ ನೀಡಬೇಕಾದ ಸ್ಥಿತಿಯನ್ನು ಮತದಾರರು ಸೃಷ್ಟಿಸಿದ್ದಾರೆ. ವಿಧಾನಸಭಾ ಚುನಾವಣೆ ಹಾಗೂ ಲೋಕಸಭಾ ಚುನಾವಣೆಯನ್ನು ಭಿನ್ನವಾಗಿ ಕಾಣುವ ತಮ್ಮ ಹಿಂದಿನ ನಿಲುವಿಗೆ ಅನುಗುಣವಾಗಿಯೇ ರಾಜ್ಯದ ಮತದಾರರು ಈ ಬಾರಿಯೂ ಮತ ಚಲಾಯಿಸಿದ್ದಾರೆ.

2013ರಿಂದ ರಾಜ್ಯದಲ್ಲಿ ಮೂರು ವಿಧಾನಸಭಾ ಚುನಾವಣೆಗಳು ನಡೆದಿವೆ. ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆದ ಒಂದು ವರ್ಷದ ನಂತರ ಲೋಕಸಭಾ ಚುನಾವಣೆ ನಡೆದಿದೆ. ವಿಧಾನಸಭಾ ಚುನಾವಣೆಯ ನಂತರ ರಾಜ್ಯದಲ್ಲಿ ಒಂದು ಪಕ್ಷ ಅಥವಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ, ಅದರ ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಎದುರಾಳಿ ಪಕ್ಷವು ಇಲ್ಲಿ ಹೆಚ್ಚಿನ ಸ್ಥಾನ ಗೆದ್ದುಕೊಂಡಿದೆ. ಈ ಮಾತು 2023ರ ವಿಧಾನಸಭಾ ಚುನಾವಣೆ ಹಾಗೂ 2024ರ ಲೋಕಸಭಾ ಚುನಾವಣೆಯ ವಿಚಾರದಲ್ಲಿಯೂ ಸತ್ಯ. ಆದರೆ ಸಾಮ್ಯತೆಯು ಇಷ್ಟಕ್ಕೇ ಕೊನೆಗೊಳ್ಳುತ್ತದೆ ಎಂಬುದು ಇಲ್ಲಿ ಮುಖ್ಯ.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಸ್ಥಾನಗಳ ಸಂಖ್ಯೆ ಕುಸಿಯಿತು. ರಾಜ್ಯದಲ್ಲಿ ಹೆಚ್ಚಿನ ಲೋಕಸಭಾ ಸ್ಥಾನಗಳನ್ನು ಗೆದ್ದಿದ್ದು ಬಿಜೆಪಿಯೇ ಆದರೂ ಅದು ಹಿಂದಿನ ಬಾರಿ ಗೆದ್ದಿದ್ದ 25 ಸ್ಥಾನಗಳಿಗೆ ಹೋಲಿಸಿದರೆ ಈ ಬಾರಿ ಎಂಟು ಸ್ಥಾನಗಳು ಕಡಿಮೆ ಆಗಿವೆ. ಜೆಡಿಎಸ್, ಹಿಂದಿನ ಬಾರಿ ಒಂದು ಸ್ಥಾನ ಗೆದ್ದಿತ್ತು. ಈ ಬಾರಿ ಬಿಜೆಪಿಯ ರಾಜಕೀಯ ಪಾಲುದಾರ ಪಕ್ಷವಾಗಿ ಎರಡು ಸ್ಥಾನ ಗೆದ್ದುಕೊಂಡರೂ ತನ್ನ ಭದ್ರಕೋಟೆಯಾದ ಹಾಸನವನ್ನು ಉಳಿಸಿಕೊಳ್ಳಲಾಗದೆ ಭಾರಿ ಹಿನ್ನಡೆ ಕಂಡಿತು. ಕಾಂಗ್ರೆಸ್ ಪಕ್ಷವು ತನ್ನ ಸ್ಥಾನ ಗಳಿಕೆಯು ಒಂಬತ್ತು ಪಟ್ಟು ಹೆಚ್ಚಾಗಿದೆ ಎಂದು ಹೇಳಿಕೊಳ್ಳಬಹುದಾದರೂ ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಪಕ್ಷವಾಗಿ ಉದ್ದೇಶಿಸಿದಷ್ಟು ಸ್ಥಾನಗಳನ್ನು (ರಾಜ್ಯದಲ್ಲಿ ಇತರರಿಗಿಂತ ಹೆಚ್ಚಿನ ಸ್ಥಾನಗಳನ್ನು) ಗೆಲ್ಲಲು ಅದಕ್ಕೆ ಆಗಲಿಲ್ಲ. ಕಾಂಗ್ರೆಸ್ಸಿನ ಸ್ಥಾನಗಳು ಹೆಚ್ಚಿದವಾದರೂ ರಾಜ್ಯದಲ್ಲಿನ ಒಟ್ಟು ಸ್ಥಾನಗಳ ಪೈಕಿ ಮೂರನೆಯ ಒಂದರಷ್ಟಕ್ಕಿಂತ ಕಡಿಮೆ ಸ್ಥಾನಗಳನ್ನು ಕಾಂಗ್ರೆಸ್ ಗೆದ್ದುಕೊಂಡಿದೆ. ಈ ಕಾರಣಗಳಿಂದಾಗಿ, ರಾಜ್ಯದ ಮತದಾರರ ತೀರ್ಮಾನವು ಎಲ್ಲ ಪಕ್ಷಗಳಿಗೂ ಗರ್ವಭಂಗ ಉಂಟುಮಾಡಿದೆ.

ಮೊದಲು ಕಾಂಗ್ರೆಸ್ಸಿನ ಬಗ್ಗೆ ನೋಟ ಹರಿಸೋಣ. ಆಡಳಿತಾರೂಢ ಪಕ್ಷವಾದ ಕಾಂಗ್ರೆಸ್, ರಾಜ್ಯದಲ್ಲಿ ತಾನು ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟು ಮತ ಯಾಚಿಸಿತು. ಗ್ಯಾರಂಟಿಗಳ ಕಾರಣದಿಂದಾಗಿ ಪಕ್ಷವು ಒಂಬತ್ತು ಸ್ಥಾನಗಳನ್ನು ಗೆದ್ದುಕೊಂಡಿತು ಎಂದು ವಾದಿಸಬಹುದು. ಹೀಗಿದ್ದರೂ ಫಲಿತಾಂಶವು ಪಕ್ಷದಲ್ಲಿನ ಭಿನ್ನಮತವು ಬಹಿರಂಗವಾಗಿ ವ್ಯಕ್ತವಾಗುವಂತೆ ಮಾಡಿತು. ತಮಗೆ ವಹಿಸಿದ್ದ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸುವಂತೆ ನೋಡಿಕೊಳ್ಳಲು ಹಲವು ಸಚಿವರಿಗೆ ಸಾಧ್ಯವಾಗಲಿಲ್ಲ. ಅಷ್ಟೇ ಅಲ್ಲ, ಹಲವು ಸಚಿವರಿಗೆ, ತಾವು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರದಲ್ಲೇ ಪಕ್ಷದ ಅಭ್ಯರ್ಥಿಗೆ ಮುನ್ನಡೆ ಕೊಡಿಸಲು ಸಾಧ್ಯವಾಗಲಿಲ್ಲ. ಹಿನ್ನಡೆಗೆ ಅವರನ್ನು ಉತ್ತರದಾಯಿ ಆಗಿಸಬೇಕು ಎಂಬ ಬೇಡಿಕೆಯು ಹೆಚ್ಚೆಚ್ಚು ಬಲವಾಯಿತು. ಒಂದು ವರ್ಷದ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ರಚನೆಯಾದಾಗ ಪಕ್ಷದ ಹೈಕಮಾಂಡ್, ಒಂದು ಉಪಮುಖ್ಯಮಂತ್ರಿ ಹುದ್ದೆಯನ್ನು ಸೃಷ್ಟಿಸಿ ಅಧಿಕಾರ ಹಂಚಿಕೆಯ ಸೂತ್ರವನ್ನು ಸಿದ್ಧಪಡಿಸಿತ್ತು. ಉಪಮುಖ್ಯಮಂತ್ರಿ ಹುದ್ದೆ ಒಂದೇ ಇರಬೇಕು ಎಂದು ಆಗ ಹೇಳಲಾಗಿತ್ತು. ಲೋಕಸಭಾ ಚುನಾವಣೆಯ ನಂತರ ಸರ್ಕಾರದ ನಾಯಕತ್ವ ಬದಲಾಗಬೇಕು ಎಂಬ ಮಾತುಗಳು ಇದ್ದವಾದರೂ ಫಲಿತಾಂಶವು ಹೇಗಿದೆಯೆಂದರೆ, ಯಾವ ನಾಯಕನಿಗೂ ತಾನು ಗೆದ್ದೆ ಎಂದು ಹೇಳಲಾಗದ ಸ್ಥಿತಿ ಇದೆ.


ರಾಜ್ಯದ ಸಂಪುಟದಲ್ಲಿ ಸ್ಥಾನ ಪಡೆಯಲು ಸಾಧ್ಯವಾಗದೆ ಅಸಮಾಧಾನಗೊಂಡಿದ್ದವರು ಈಗ ಸಂಪುಟ ಪುನರ್‌ರಚನೆ ಆಗಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಆದರೆ, ಇಲ್ಲಿ ಯಥಾಸ್ಥಿತಿ ಮುಂದುವರಿಯಲಿ, ಆಡಳಿತದ ಬಗ್ಗೆ ಹೆಚ್ಚು ಗಮನ ಕೊಡಿ ಎಂಬ ಸೂಚನೆ ರವಾನಿಸುವ ಮೂಲಕ ಪಕ್ಷದ ಹೈಕಮಾಂಡ್ ಕದನ ವಿರಾಮವೊಂದನ್ನು ಸಾಧ್ಯವಾಗಿಸಿದಂತಿದೆ. ಆದರೂ ತೆರೆಯ ಹಿಂದೆ ಗುದ್ದಾಟ ಮುಂದುವರಿದಿದೆ. ಒಬಿಸಿ ಸಮುದಾಯಗಳಲ್ಲಿ ಪ್ರಬಲವಲ್ಲದ ಜಾತಿಗಳ ಮತವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಳ್ಳಲು ಕಾಂಗ್ರೆಸ್ಸಿಗೆ ಆಗಿಲ್ಲ ಎಂಬುದನ್ನು ಲೋಕನೀತಿ ಸಂಸ್ಥೆ ನಡೆಸಿದ ಮತದಾನೋತ್ತರ ಸಮೀಕ್ಷೆಯು ಕಂಡುಕೊಂಡಿದೆ.

ಬಿಜೆಪಿಯು ತಾನು ಈಗ ಪಡೆದಿರುವುದಕ್ಕಿಂತ ಹೆಚ್ಚಿನ ಸ್ಥಾನಗಳ ನಿರೀಕ್ಷೆಯಲ್ಲಿತ್ತು. ರಾಜ್ಯದಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆದ್ದಿರುವುದು ಪಕ್ಷದ ರಾಜ್ಯ ನಾಯಕತ್ವಕ್ಕೆ ಒಂದಿಷ್ಟು ಸಮಾಧಾನ ತಂದಿದೆ. ಆದರೆ, ಪಕ್ಷದಲ್ಲಿನ ಆಂತರಿಕ ಭಿನ್ನಾಭಿಪ್ರಾಯಗಳು ಮತ್ತೆ ಕಾಣಿಸಿಕೊಂಡಿವೆ. ರಾಜ್ಯದಲ್ಲಿ ಎರಡನೆಯ ಹಂತದಲ್ಲಿ ಮತದಾನ ನಡೆದ ಕ್ಷೇತ್ರಗಳಲ್ಲಿ (ಇಲ್ಲಿ ಬಿಜೆಪಿ ಪ್ರಬಲವಾಗಿದೆ) ಆಗಿರುವ ಹಿನ್ನಡೆಗೆ ಹೊಣೆ ನಿಗದಿ ಮಾಡಬೇಕು ಎಂಬ ಬೇಡಿಕೆಗಳು ಪಕ್ಷದಲ್ಲಿ ಬಂದಿವೆ. ಲಿಂಗಾಯತ ಸಮುದಾಯದ ಮತಗಳ ಪೈಕಿ ಕಳೆದುಕೊಂಡಿದ್ದನ್ನು ಮತ್ತೆ ಪಡೆದುಕೊಳ್ಳಲು ಬಿಜೆಪಿಗೆ ಸಾಧ್ಯವಾಗಿದ್ದರೂ ಪರಿಶಿಷ್ಟ ಸಮುದಾಯದ ಮತಗಳನ್ನು ಪಡೆಯುವಲ್ಲಿ ಬಿಜೆಪಿಯು ಕಾಂಗ್ರೆಸ್ಸಿಗಿಂತ ಹಿಂದುಳಿದಿದೆ ಎಂಬುದನ್ನು ಲೋಕನೀತಿ ಸಮೀಕ್ಷೆಯು ತಿಳಿಸಿದೆ. ಮುಂದಿನ ವಿಧಾನಸಭಾ ಚುನಾವಣೆಗೆ ಪಕ್ಷವು ಈಗಲೇ ತಯಾರಿ ಶುರು ಮಾಡಬೇಕಿದೆ. ರಾಜ್ಯದ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಪಕ್ಷವು ರಚನಾತ್ಮಕ ಪ್ರತಿಪಕ್ಷವಾಗಿ ಕೆಲಸ ಮಾಡಬೇಕಿದೆ. ಪಕ್ಷದ ನಾಯಕರು ಸಿದ್ಧತೆಯೊಂದಿಗೆ ಕೆಲಸ ಮಾಡಬೇಕಿದೆ.

ಜೆಡಿಎಸ್ ಪಕ್ಷದ ನಾಯಕರಿಗೆ ನರೇಂದ್ರ ಮೋದಿ ನೇತೃತ್ವದ ಸಂಪುಟದಲ್ಲಿ ಪ್ರಮುಖ ಖಾತೆ ದೊರೆತಿದೆ. ಇದನ್ನು ಪಕ್ಷವು ಯಾವ ರೀತಿಯಲ್ಲಿ ಬಳಸಿಕೊಳ್ಳುತ್ತದೆ, ರಾಜ್ಯದಲ್ಲಿ ಪಕ್ಷದ ನೆಲೆಯನ್ನು ಹೇಗೆ ಗಟ್ಟಿ ಮಾಡಿಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕು.

ಆದರೆ, ಪಕ್ಷದಲ್ಲಿನ ಆಂತರಿಕ ಕಚ್ಚಾಟ ಹಾಗೂ ಜೆಡಿಎಸ್‌ನ ಪ್ರಮುಖ ಕುಟುಂಬವು ಚುನಾವಣೆಯ ಸಂದರ್ಭದಲ್ಲಿ ಎದುರಿಸಿದ ಮುಜುಗರದ ಪರಿಸ್ಥಿತಿಯು ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಉಂಟುಮಾಡಿರುವಂತಿದೆ. ಕೇಂದ್ರದಲ್ಲಿನ ಅಧಿಕಾರ ಹಂಚಿಕೆಯ ಭಾಗವಾಗಿ ತನಗೆ ಸಿಕ್ಕಿರುವ ಖುಷಿಯನ್ನು ಜೆಡಿಎಸ್ ನಾಯಕತ್ವವು ಅನುಭವಿಸುತ್ತ ಕಾಲ ಕಳೆಯುತ್ತದೆಯೋ ಅಥವಾ ರಾಜ್ಯದಲ್ಲಿ ಪಕ್ಷವನ್ನು ಮತ್ತೆ ಕಟ್ಟಲು ಆದ್ಯತೆ ನೀಡುತ್ತದೆಯೋ? ಪಕ್ಷದ ಪ್ರಮುಖ ಕುಟುಂಬದ ಯುವಕರನ್ನು ಸುತ್ತಿಕೊಂಡಿರುವ ವಿವಾದಗಳಿಂದ ಪಕ್ಷವು ಹೊರಬರಲಿದೆಯೋ?

ರಾಜ್ಯದಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಶೀಘ್ರದಲ್ಲಿಯೇ ನಡೆಯಲಿರುವ ಉಪಚುನಾವಣೆಯು ರಾಜಕೀಯ ಗಮನವನ್ನು ಸೆಳೆಯಲಿದೆ. ಮುಂದಿನ ಚುನಾವಣಾ ಕದನದವರೆಗೆ ರಾಜಕೀಯ ಪಕ್ಷಗಳು, ಲೋಕಸಭಾ ಚುನಾವಣೆಯ ಕಾರಣದಿಂದಾಗಿ ಉಂಟಾಗಿರುವ ಆಂತರಿಕ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳಲು ಗಮನ ನೀಡಲಿವೆ.



ಚುರುಮುರಿ



ಪೇಪರ್‌ನಲ್ಲಿ ಫೋಟೊ!

● ಗುರು ಪಿ.ಎಸ್.

'ಬೇಗ ರೆಡಿ ಆಗು, ಮದುವೆಗೆ ಹೋಗಬೇಕು. ಹಾಗೇ, ಹೋಗುವಾಗ ಒಂದೊಳ್ಳೆ ಗಿಫ್ಟ್ ಬೇರೆ ತಗೋಬೇಕು'.

'ಎಮ್ಮೆಲ್ಲೆ ಆಗಿ ನೀವೇ ಗಿಫ್ಟ್ ಕೊಡೋದಾಯ್ತು' ಅಸಮಾಧಾನದಲ್ಲಿಯೇ ಹೇಳಿದಳು ಹೆಂಡತಿ.

'ಮದುವೆಗೆ ಹೋಗುವವರೇ ಗಿಫ್ಟ್ ಕೊಡಬೇಕಲ್ವೇನಮ್ಮ?'

'ನೀವು ಎಮ್ಮೆಲ್ಲೆ ಆಗೋ ಬದಲು ಸಿನಿಮಾ ಸ್ಟಾರ್ ಅಥವಾ ಕ್ರಿಕೆಟರ್ ಆಗಬೇಕಿತ್ತು. ಆಗ ಅಂಬಾನಿ ಮಗನ ಮದುವೆಗೆ ನಿಮ್ಮನ್ನು ಕರೆದಿರೋರು, 2 ಕೋಟಿ ರೂಪಾಯಿ ವಾಚ್ ಕೊಟ್ಟಿರೋರು'. ದೊಡ್ಡ ಅವಕಾಶ ತಪ್ಪಿದ ದುಃಖದಲ್ಲಿದ್ದಳು ಪತ್ನಿ.

'ಶಾಸಕನಾಗಿದ್ದೇ ನನ್ನ ಪುಣ್ಯ'.

'ಏನ್ ಶಾಸಕ ಬಿಡ್ರೀ, ನಮ್ಮ ಮನೆಯವರು ಮತ್ತು ಈ ಕ್ಷೇತ್ರದ ಜನ ಬಿಟ್ಟರೆ ಬೇರೆ ಯಾರಿಗೂ ನಿಮ್ಮ ಹೆಸರು ಕೂಡ ಗೊತ್ತಿಲ್ಲ' ಚುಚ್ಚಿದಳು ಹೆಂಡತಿ.

'ಏನ್ ಮಾಡೋದು... ಮಿನಿಸ್ಟರ್ ಆಗಿದ್ದರೆ ರಾಜ್ಯಕ್ಕೆಲ್ಲ ಗೊತ್ತಿರ್ತಿದ್ದೆ' ಎಂದೆ.

'ಮಂತ್ರಿ ಆಗದಿದ್ದರೂ ನಿಗಮ–ಮಂಡಳಿ ಅಧ್ಯಕ್ಷನಾದರೂ ಆಗಬಹುದಿತ್ತು, ಆಗಲಾದರೂ ಡೈಲಿ ಪೇಪರ್‌ನಲ್ಲಿ ನಿಮ್ಮ ಹೆಸರು, ಫೋಟೊ ಬಂದಿರೋದು'.

'ಎಮ್ಮೆಲ್ಲೆ ಆಗಿದ್ದುಕೊಂಡೂ ಜನರ ಸೇವೆ ಮಾಡಬಹುದು ಬಿಡು' ಎಂದೆ ದೃಢವಾಗಿ.

'ನಿಮ್ ಪುರಾಣ ನಿಲ್ಲಿಸ್ರೀ ಸಾಕು. ಎಮ್ಮೆಲ್ಲೆ ಹೆಂಡತಿಯಾದರೂ ನನ್ನ ಅಕೌಂಟ್‌ನಲ್ಲಿ ಎಷ್ಟು ದುಡ್ಡಿದೆ ಅಂತ ಗೊತ್ತೇನ್ರೀ ನಿಮಗೆ?'

'ನಾನು ನಿಗಮ– ಮಂಡಳಿ ಅಧ್ಯಕ್ಷನಾಗೋದಕ್ಕೂ ನಿನ್ನ ಅಕೌಂಟ್‌ನಲ್ಲಿ ಇರೋ ದುಡ್ಡಿಗೂ ಏನಮ್ಮ ಸಂಬಂಧ' ತಲೆ ಕೆರೆದುಕೊಂಡೆ.

'ನಿಗಮದ ಅಕೌಂಟ್‌ನಿಂದ ನನ್ನ ಅಕೌಂಟ್‌ಗೆ ಒಂದ್ 20 ಕೋಟಿ ರೂಪಾಯಿ ಹಾಕಿಸಿಕೊಳ್ಳಬಹುದಿತ್ತಲ್ವ, ನಾಲ್ಕು ವರ್ಷ ಅದರ ಬಡ್ಡಿ ದುಡ್ಡಿನಲ್ಲಿಯೇ ಮತ್ತಷ್ಟು ಆಸ್ತಿ ಮಾಡಬಹುದಿತ್ತು' ದೂರಾಲೋಚನೆಯ ಮಾತು ಆಡಿದಳು ಪತ್ನಿ.

'ಸರಿ ಬಿಡು. ನೀನು ಹೇಳಿದಂತೆ, ಆಗ ಡೈಲಿ ನನ್ನ ಫೋಟೊ ಪೇಪರ್‌ನಲ್ಲಿ ಬರ್ತಿತ್ತು. ಆದರೆ ನೀನು ಮುಖ ಮುಚ್ಚಿಕೊಂಡು ಓಡಾಡಬೇಕಾಗ್ತಿತ್ತು' ಎಂದೆ.

ಮೌನಕ್ಕೆ ಜಾರಿದಳು ಪತ್ನಿ!

ಸಂಗತ

ಕಂಡಿರಾ, ನಾಗರಿಕನೆಂಬ 'ದ್ವೀಪ'?

ಸ್ವಜಾತಿಪ್ರೇಮ ಮನುಷ್ಯನ ಅಂತಃಕರಣವನ್ನು ಕ್ಷೀಣವಾಗಿಸಿದೆ

● ರಾಜಕುಮಾರ ಕುಲಕರ್ಣಿ

ನಟಿ, ನಿರೂಪಕಿ ಅಪರ್ಣಾ ಅವರ ನಿಧನದ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಸಮುದಾಯದ ಅಭಿಮಾನಿಯೊಬ್ಬರು, ಈ ಸಾವು ತಮ್ಮ ಸಮುದಾಯಕ್ಕಾದ ತುಂಬಲಾರದ ನಷ್ಟ ಎಂದು ವಾಟ್ಸ್‌ಆ್ಯಪ್‌ನಲ್ಲಿ ಶೋಕ ಸಂದೇಶವನ್ನು ಹಂಚಿಕೊಂಡಿದ್ದು ಓದಿ ದಿಗ್ಭ್ರಮೆಯಾಯಿತು. ತಮ್ಮ ನಿರೂಪಣೆಯಿಂದ ಕನ್ನಡ ಭಾಷೆಗೆ ಘನತೆ ಮತ್ತು ಹಿರಿಮೆಯನ್ನು ತಂದುಕೊಟ್ಟವರು ಅಪರ್ಣಾ. ನಾಡಿನ ವಿವಿಧ ಕ್ಷೇತ್ರಗಳ ಗಣ್ಯರು ಮತ್ತು ಸಾರ್ವಜನಿಕರು ಅವರ ಸಾವಿಗೆ ಕಂಬನಿ ಮಿಡಿದರು. ಹೀಗಿರುವಾಗ, ತಮ್ಮ ಸಮುದಾಯಕ್ಕಾದ ನಷ್ಟ ಎಂದು ಕಲಾವಿದೆಯನ್ನು ಒಂದು ಗುಂಪಿಗೆ ಸೀಮಿತಗೊಳಿಸುವುದು ಸರಿಯಲ್ಲ.

ಕಲಾವಿದರಿಗೆ ಜಾತಿ ಮತ್ತು ಧರ್ಮದ ಹಂಗಿಲ್ಲ ಎಂದು ರಾಜ್‌ಕುಮಾರ್ ಆದಿಯಾಗಿ ಎಲ್ಲ ಕಲಾವಿದರು ತಮ್ಮ ಅಭಿನಯದ ಮೂಲಕ ಕಾಲಕಾಲಕ್ಕೆ ಸಾಬೀತುಪಡಿಸಿದ್ದಾರೆ. ಜಾತಿ ಎನ್ನುವ ಸೀಮಿತ ವಲಯವನ್ನು ದಾಟಿದ್ದರಿಂದಲೇ ರಾಜ್‌ಕುಮಾರ್ ಅವರಿಗೆ ಕನಕದಾಸ, ಕುಂಬಾರ, ಕಬೀರ, ತುಕಾರಾಮ, ರಾಘವೇಂದ್ರಸ್ವಾಮಿ, ರಾಮ, ಕೃಷ್ಣ, ಕಾಳಿದಾಸನಂತಹ ಎಲ್ಲ ಪಾತ್ರಗಳಲ್ಲಿ ಲೀಲಾಜಾಲವಾಗಿ ಅಭಿನಯಿಸಲು ಸಾಧ್ಯವಾಯಿತು. ಪ್ರೇಕ್ಷಕವರ್ಗ ಕೂಡ ಯಾವ ಸಂಕುಚಿತ ಭಾವನೆಗಳೂ ಇಲ್ಲದೆ ರಾಜ್‌ಕುಮಾರ್ ಅವರನ್ನು ಇಂತಹ ಪಾತ್ರಗಳಲ್ಲಿ ನೋಡಿ ಆನಂದಿಸಿತು. ಅವರನ್ನು ಯಾವುದೇ ಒಂದು ಸಮುದಾಯಕ್ಕೆ ಕಟ್ಟಿಹಾಕದೆ ಇಡೀ ನಾಡಿನ ಸಾಂಸ್ಕೃತಿಕ ನಾಯಕನೆನ್ನುವ ಗೌರವದಿಂದ ನೋಡಲಾಯಿತು.

ಮನುಷ್ಯ ಸುಶಿಕ್ಷಿತನಾದಷ್ಟೂ ಅವನ ಮನಸ್ಸು ಮತ್ತು ಭಾವನೆಗಳು ಸಂಕುಚಿತಗೊಳ್ಳುತ್ತಿವೆ. ಜಾತಿ, ಧರ್ಮ ಮತ್ತು ವರ್ಗ ಪ್ರೇಮ ಗಾಢವಾಗುತ್ತಿದೆ. ನನ್ನ ಸ್ನೇಹಿತ ಶಿಕ್ಷಕನಾಗಿರುವ ಶಾಲೆಗೆ ಇತ್ತೀಚೆಗೆ ಭೇಟಿ ನೀಡಿದ್ದ ಹಿರಿಯರೊಬ್ಬರು, ತಮ್ಮ ಜಾತಿಗೆ ಸೇರಿದ ವಿದ್ಯಾರ್ಥಿಗಳನ್ನು ಮಾತನಾಡಿಸಿ, ವಿದ್ಯಾಭ್ಯಾಸದ ಪ್ರಗತಿಯ ಬಗ್ಗೆ ವಿಚಾರಿಸಿದರಂತೆ. ಸಮುದಾಯದ ಮುಖಂಡರಿಂದ ಹಣಕಾಸಿನ ನೆರವು ಒದಗಿಸುವ ಆಶ್ವಾಸನೆ ನೀಡಿ, ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿ ಎಂದು ಆಶೀರ್ವದಿಸಿದರಂತೆ. ಹೀಗೆ ಹೇಳುವಾಗ, ಆ ಶಾಲೆಯಲ್ಲಿ ಬೇರೆ ಜಾತಿ ಮತ್ತು ಸಮುದಾಯಗಳ ವಿದ್ಯಾರ್ಥಿಗಳು ಸಹ ಓದುತ್ತಿದ್ದಾರೆ ಎಂಬ ಕಿಂಚಿತ್ ಪ್ರಜ್ಞೆ ಕೂಡ ಅವರಲ್ಲಿ ಇಲ್ಲದಿದ್ದುದು ಆಶ್ಚರ್ಯದ ಸಂಗತಿ. 'ಮನುಷ್ಯಜಾತಿ ತಾನೊಂದೆ ವಲಂ' ಎಂದು ತರಗತಿಗಳಲ್ಲಿ ಬೋಧಿಸಿ, ಜಾತಿಯ ಸಂಕೋಲೆಯನ್ನು ಹರಿದೊಗೆಯಬೇಕೆಂದು ಯಾವ ಮಕ್ಕಳಿಗೆ ಪಾಠ ಮಾಡಿದ್ದೆವೋ ಅದೇ ಮಕ್ಕಳೆದುರು ಮುಜುಗರಕ್ಕೆ ಒಳಗಾಗಬೇಕಾಯಿತು ಎಂದು ಸ್ನೇಹಿತ ನೋವು ತೋಡಿಕೊಂಡ.

ಪ್ರತಿ ನಗರದಲ್ಲಿ ಸಮುದಾಯಕ್ಕೊಂದು ಮಠ, ದೇವಸ್ಥಾನ, ಸ್ಮಶಾನ ಭೂಮಿ ನಿರ್ಮಾಣವಾಗುತ್ತಿವೆ. ಸಭಾಭವನ ಹಾಗೂ ಕಲ್ಯಾಣಮಂಟಪಗಳು ಕೂಡ ಸಮುದಾಯದ ಹೆಸರಿನಲ್ಲಿ ಸ್ಥಾಪನೆಯಾಗುತ್ತಿವೆ. ಕಲ್ಯಾಣ ಕರ್ನಾಟಕದಲ್ಲಿ ಹೋಟೆಲ್ ಮತ್ತು ಖಾನಾವಳಿಗಳ ಹೆಸರುಗಳಲ್ಲಿ ಜಾತಿಸೂಚಕ ಪದಗಳನ್ನು ಕಾಣಬಹುದು. ಕಿತ್ತೂರು ಕರ್ನಾಟಕ ಭಾಗದಲ್ಲಿ ಅಪರಿಚಿತರು ಭೇಟಿಯಾದಾಗ ಅವರ ಹೆಸರಿನ ಬದಲು ಜಾತಿಸೂಚಕವಾದ ಮನೆತನದ ಹೆಸರನ್ನು ಕೇಳುವುದು ಇಂದಿಗೂ ರೂಢಿಯಲ್ಲಿದೆ. ಮನೆತನದ ಹೆಸರು ಜಾತಿಸೂಚಕವೆಂದು ತಮ್ಮ ಶಿಷ್ಯರನ್ನು ಅವರ ಊರಿನ ಹೆಸರಿನಿಂದ ಕರೆಯುತ್ತಿದ್ದ ಪುಟ್ಟರಾಜ ಗವಾಯಿಗಳ ನಡೆ ಸಮಾಜಕ್ಕೆ ಮಾದರಿಯಾಗಬೇಕಿದೆ.

ಪುರಸ್ಕಾರ, ಗೌರವ ಕೂಡ ಜಾತಿಪ್ರೇಮದ ಕಬಂಧಬಾಹುಗಳಲ್ಲಿ ಸಿಲುಕಿ ನರಳುತ್ತಿವೆ. ಸಾಧಕರನ್ನು ಗುರುತಿಸಿ ಗೌರವಿಸುವಲ್ಲಿ ಸ್ವಜಾತಿಪ್ರೇಮ ಮುನ್ನೆಲೆಗೆ ಬರುತ್ತಿದೆ. ಪ್ರತಿ ಸಮುದಾಯ ತನ್ನದೇ ಸಮುದಾಯದ ಸಾಧಕರನ್ನು ಮಾತ್ರ ಗೌರವಿಸುವ ಪರಿಪಾಟ ಚಾಲನೆಗೆ ಬಂದಿದೆ. ಒಟ್ಟಾರೆ, ಮನುಷ್ಯ ನಾಗರಿಕನಾದಂತೆ ಅವನೊಂದು ದ್ವೀಪವಾಗುತ್ತಿದ್ದಾನೆ. ಸಾವಿನಂತಹ ಸೂತಕಕ್ಕೂ ಈಗ ಜಾತಿ, ಧರ್ಮ, ಭಾಷೆಯ ಭೂತ ಬೆನ್ನುಹತ್ತಿದೆ.

ಯಶವಂತ ಚಿತ್ತಾಲರ ಕಥೆಯಲ್ಲಿ ಪಾತ್ರವೊಂದು ಹೀಗೆ ಪ್ರಶ್ನಿಸುತ್ತದೆ- 'ಸತ್ತವಳು ಯಾವ ಜಾತಿಯವಳಾಗಿ, ಕೊಂದವರು ಯಾವ ಜಾತಿಯವರಾದರೆ, ಇಲ್ಲ ಧರ್ಮದವರಾದರೆ, ಇಲ್ಲ ವರ್ಗದವರಾದರೆ ಈ 'ಸಾವು' ಮಹತ್ವಪೂರ್ಣವಾದೀತು?' ಈ ಮಾತು ಮನುಷ್ಯ ಸಂವೇದನೆ ಕಳೆದುಕೊಳ್ಳುವತ್ತ ಹೆಜ್ಜೆ ಹಾಕುತ್ತಿದ್ದಾನೆ ಎನ್ನುವುದಕ್ಕೊಂದು ದೃಷ್ಟಾಂತ.



ಮನುಷ್ಯರ ಸಂಕುಚಿತ ವರ್ತನೆ ನೋಡಿದಾಗಲೆಲ್ಲ ನನಗೆ ನನ್ನೂರಿನ ಬಾಲ್ಯದ ದಿನಗಳು ನೆನಪಾಗುತ್ತವೆ. ದೀಪಾವಳಿ, ಹೋಳಿಹುಣ್ಣಿಮೆ, ಕಾರಹುಣ್ಣಿಮೆ, ಮೊಹರಂ, ರಂಜಾನ್, ಸಂಕ್ರಾಂತಿ ಹಬ್ಬಗಳಲ್ಲಿ ಜಾತಿ, ಧರ್ಮದ ಹಂಗಿಲ್ಲದಂತೆ ಊರಿನವರೆಲ್ಲ ಅತ್ಯಂತ ಉಮೇದು ಮತ್ತು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ದೀಪಾವಳಿ ಹಬ್ಬದಲ್ಲಿ ಎಲ್ಲರ ಮನೆಗಳಲ್ಲೂ ಪಟಾಕಿಗಳು ಸಿಡಿಯುತ್ತಿದ್ದವು. ಹೋಳಿಹುಣ್ಣಿಮೆಯಂದು ಪರಸ್ಪರ ಓಕುಳಿ ಎರಚಿ ಸಂಭ್ರಮಿಸುತ್ತಿದ್ದರು. ರಂಜಾನ್ ಹಬ್ಬದಂದು ಸೇವಿಸಿದ ಹಾಲಿನ ಖಾದ್ಯದ ಘಮಲು ಇದೇ ಈಗ ಆಘ್ರಾಣಿಸಿದಂತಿದೆ. ಯಾರದಾದರೂ ಮನೆಯಲ್ಲಿ ಸಾವು ಸಂಭವಿಸಿದರೆ ಇಡೀ ಊರಿಗೆ ಸೂತಕದ ಛಾಯೆ ಆವರಿಸುತ್ತಿತ್ತು. ಆ ಮನೆಯವರ ದುಃಖದಲ್ಲಿ ಎಲ್ಲ ಜಾತಿ-ವರ್ಗ-ಸಮುದಾಯದ ಜನ ಭಾಗಿಯಾಗುತ್ತಿದ್ದರು.

ಸ್ವಜಾತಿ, ಸ್ವಧರ್ಮದ ಕುರುಡು ಮೋಹಕ್ಕೆ ಒಳಗಾದ ಮನುಷ್ಯ ಬೇರೆ ಜಾತಿ, ಧರ್ಮಗಳ ನಿಂದನೆಗೆ ವಾಟ್ಸ್‌ಆ್ಯಪ್, ಫೇಸ್‌ಬುಕ್ಕೆಂಬ ಹತಾರಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುತ್ತಿದ್ದಾನೆ. ಇಂತಹ ಅಸಹನೀಯ ವಾತಾವರಣದಿಂದ ಹೊರಬರಲು ಹಿಂದಿನ ಸೌಹಾರ್ದದ ದಿನಗಳು ಮರುಕಳಿಸಬೇಕಾದದ್ದು ಇಂದಿನ ತುರ್ತು ಅಗತ್ಯವಾಗಿದೆ.

ವಾಚಕರ ವಾಣಿ

ಭಾಷಾ ವೈವಿಧ್ಯ ಆಸ್ವಾದಿಸೋಣ

ಕನ್ನಡ ಭಾಷೆ ಕುರಿತು ಅನೇಕ ಬಗೆಯಲ್ಲಿ ಚರ್ಚೆಗಳು ನಡೆಯುತ್ತಿವೆ. ಭಾಷೆ ಅನ್ನುವುದು ಮೂಲತಃ ಒಂದು ಸಂವಹನ ಸಾಧನ. ನಾವು ಆಡಿದ ಮಾತು ಜನರಿಗೆ ಅರ್ಥ ಆಗಬೇಕು ಅನ್ನುವ ಉದ್ದೇಶದ ಜೊತೆಗೆ ಅದರಲ್ಲಿ ವೈವಿಧ್ಯವೂ ಸೇರಿರುತ್ತದೆ ಎಂಬುದನ್ನು ಒಪ್ಪಬೇಕಾಗುತ್ತದೆ. ಅಲ್ಲದೆ ಈ ವೈವಿಧ್ಯವು ಕನ್ನಡದ ನೆಲಕ್ಕಷ್ಟೇ ಸೀಮಿತವಲ್ಲ!

ಭಾಷೆಯ ಸ್ಪಷ್ಟತೆ ಕೆಲವರಿಗೆ ಆನುವಂಶೀಯವಾಗಿ, ಇನ್ನು ಕೆಲವರಿಗೆ ರೂಢಿಯಿಂದ ಬಂದಿರುತ್ತದೆ. ಪಂಡಿತರು ಆಡುವ ಭಾಷೆ, ಜನರು ಬಳಸುವ ಭಾಷೆಯಲ್ಲಿ ಶ್ರೇಷ್ಠ, ನಿಕೃಷ್ಟ ಎಂದೆಲ್ಲ ಇಲ್ಲ. ಪರಸ್ಪರ ಕಲಿಕೆ ಸ್ವಾಗತಾರ್ಹ. ವರನಟ ರಾಜ್‌ಕುಮಾರ್ ಅವರು ಆಡುತ್ತಿದ್ದ ಮಾತುಗಳನ್ನು ಸಾಹಿತಿ ಯು.ಆರ್.ಅನಂತಮೂರ್ತಿ ಅವರು ಪ್ರಶಂಸಿಸಿ, ರಾಜ್‌ಕುಮಾರ್ ಅವರ ಕನ್ನಡ ಭಾಷೆಯ ಬಳಕೆ ಕರ್ನಾಟಕವೇ ಒಪ್ಪಬಹುದಾದ ಮಾದರಿ ಅಂದರು. ಭಾಷೆಯು ಆಹಾರ ಇದ್ದಂತೆ. ಬೆಂಗಳೂರಿನ ವಿದ್ಯಾರ್ಥಿ ಭವನದ ಮಸಾಲೆ ದೋಸೆಯ ನುಣುಪೇ ಬೇರೆ, ಎಂಟಿಆರ್ ದೋಸೆಯ ಸ್ವಾದವೇ ಬೇರೆ. ಗ್ರಾಹಕರು ಎರಡನ್ನೂ ಸಂತೋಷದಿಂದ ಮೆಲ್ಲುತ್ತಾರೆ ಅಲ್ಲವೇ? ಹಾಗೆಯೇ ಭಾಷೆ. ಅದೇ ಭಾಷೆಯ ವೈವಿಧ್ಯ ಹಾಗೂ ಭಾಷಾ ಸೊಗಡನ್ನು ನಾವು ನೋಡಬೇಕಾದ ಅರ್ಥಪೂರ್ಣ ವಿಧಾನ.

ಆರ್.ವೆಂಕಟರಾಜು, ಬೆಂಗಳೂರು

ಸಂಸ್ಕೃತಿಯ ಅರಿವಿಲ್ಲದವರ ಅಕೃತ್ಯ

ಬೆಂಗಳೂರಿನ ಮಾಲ್ ಒಂದರಲ್ಲಿ ನಮ್ಮ ರೈತರೊಬ್ಬರು ಪಂಚೆ ಧರಿಸಿದ್ದರು ಎಂಬ ಕಾರಣಕ್ಕೆ ಪ್ರವೇಶ ನಿರಾಕರಿಸಿರುವುದು ಖಂಡನೀಯ. ಇದು, ನಮ್ಮ ಸಂಸ್ಕೃತಿಯ ಅರಿವಿಲ್ಲದವರ ಕೃತ್ಯವಾಗಿದೆ. ಹರಿದ ಜೀನ್ಸ್ ಆಧುನಿಕತೆಯ ಭಾಗ ಎಂದು ತಿಳಿದಿರುವಂತೆಯೇ ಪಂಚೆಯು ನಮ್ಮ ಸಂಪ್ರದಾಯದ ಭಾಗವಾಗಿದೆ. ನಮ್ಮ ನೆಲ, ಜಲ, ಗಾಳಿ, ಮಾನವ ಸಂಪನ್ಮೂಲ, ಆರ್ಥಿಕ ಸಂಪನ್ಮೂಲವನ್ನು ಒಪ್ಪಿರುವ ಕಂಪನಿಗಳು, ನಮ್ಮ ಸಂಸ್ಕೃತಿಯನ್ನೂ ಗೌರವಿಸಬೇಕು. ಪಂಚೆ-ಷರ್ಟ್-ಶಲ್ಯ ಕರ್ನಾಟಕದ ಅಸ್ಮಿತೆ.

ಚಂದನ ಶಂಕರ್, ಮೈಸೂರು

ಕ್ರಿಕೆಟ್ ಜನಪ್ರಿಯತೆ: ದೂಷಣೆ ಸಲ್ಲ

ಕ್ರಿಕೆಟ್ ಮಾತ್ರವಲ್ಲದೆ ಎಲ್ಲ ಕ್ರೀಡೆಗಳಿಗೂ ನಮ್ಮ ದೇಶದಲ್ಲಿ ಸೂಕ್ತ ಉತ್ತೇಜನ ಸಿಗಬೇಕು ಎಂಬ ಯೋಗಾನಂದ ಅವರ ಆಶಯ (ಸಂಗತ, ಜುಲೈ 17) ಸಮರ್ಪಕವಾಗಿದೆ. ಆದರೆ ಈ ಆಶಯದ ನೆಪದಲ್ಲಿ, ಕ್ರಿಕೆಟ್ ಆಟದ ಕಾರಣದಿಂದ ಅನರ್ಥಗಳು ಆಗುತ್ತಿವೆ ಎಂಬಂತೆ ಬಣ್ಣಿಸುವುದು ಸರಿಯಲ್ಲ. ದೇಶದ ಎಲ್ಲ ವಯೋಮಾನದವರು, ಎಲ್ಲ ಸಾಮಾಜಿಕ ಹಿನ್ನೆಲೆಯವರು ಒಂದಾಗಿ ಸಂಭ್ರಮಿಸುವಂತೆ ಮಾಡುವಲ್ಲಿ, ದೇಶದ ಪ್ರಜೆಗಳಲ್ಲಿ ದೇಶಾಭಿಮಾನ, ಒಗ್ಗಟ್ಟನ್ನು ಜಾಗೃತಗೊಳಿಸುವಲ್ಲಿ ಕ್ರಿಕೆಟ್ ಸಫಲವಾಗಿದೆ. ಚುನಾವಣಾ ಫಲಿತಾಂಶಗಳ ವಿಷಯದಲ್ಲೂ ಬೆಟ್ಟಿಂಗ್ ನಡೆಯುತ್ತದೆ. ಹಾಗೆಂದು, ಈ ಕಾರಣಕ್ಕೆ ಚುನಾವಣೆಗಳನ್ನು ದೂಷಿಸಲು ಸಾಧ್ಯವೇ?

ಜಗತ್ತಿನ ಒಂದೊಂದು ದೇಶದಲ್ಲಿ ಒಂದೊಂದು ಕ್ರೀಡೆ ಜನಪ್ರಿಯವಾಗಿರುತ್ತದೆ. ಅರ್ಜೆಂಟೀನ, ಬ್ರೆಜಿಲ್‌ನಂತಹ ದೇಶಗಳಲ್ಲಿ ಫುಟ್‌ಬಾಲ್ ಬಗ್ಗೆ ಎಂತಹ ಉತ್ಕಟ ಅಭಿಮಾನವಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಫುಟ್‌ಬಾಲ್ ಆಟದ ವೀಕ್ಷಕರ ದಾಂದಲೆಯಂತೂ ಗೊತ್ತೇ ಇದೆ. ಹೀಗಿರುವಾಗ, ಕ್ರಿಕೆಟ್ ಆಟದ ಅಭಿಮಾನದ ಬಗ್ಗೆ ಮಾತ್ರ ದೂಷಿಸುವುದು ಸೂಕ್ತವಲ್ಲ. ಅಮೆರಿಕದ ರಾಷ್ಟ್ರೀಯ ಕ್ರೀಡೆ ಬೇಸ್‌ಬಾಲ್ ಎಂದು ಪರಿಗಣಿಸಲಾಗಿದೆಯಾದರೂ ಅಲ್ಲಿನ ಜನಪ್ರಿಯ ಕ್ರೀಡೆ ಫುಟ್‌ಬಾಲ್. ಅದೇ ರೀತಿ ನಮ್ಮ ದೇಶದ ರಾಷ್ಟ್ರೀಯ ಕ್ರೀಡೆ ಹಾಕಿ ಆದರೂ ಜನಪ್ರಿಯ ಕ್ರೀಡೆ ಕ್ರಿಕೆಟ್ ಎಂಬ ವಾಸ್ತವವನ್ನು ಒಪ್ಪೋಣ. ನಮ್ಮ ದೇಶದ ಜನ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಯಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವಂತೆ ಕ್ರಿಕೆಟ್ ಆಟಗಾರರೂ ತಮ್ಮ ಸಾಧನೆಯಿಂದ ಜಗತ್ಪ್ರಸಿದ್ಧರಾಗಿ ದೇಶದ ಜನರ ಹೆಮ್ಮೆಗೆ ಕಾರಣರಾಗಿದ್ದಾರೆ. ಹೀಗಾಗಿ, ಕ್ರಿಕೆಟ್ ಪಂದ್ಯಗಳ ಬಗ್ಗೆ ದೇಶದ ಜನಸಾಮಾನ್ಯರ ಸಂಭ್ರಮ, ಸಡಗರವನ್ನು ನೋಡಿ ಸಂತೋಷಪಡೋಣ.

ಟಿ.ಜಯರಾಂ, ಕೋಲಾರ


ನೈತಿಕತೆ ಬೋಧನೆಗಷ್ಟೇ ಅಲ್ಲ

'ಜ್ಞಾನವೆಂಬ ದೀಪದ ಕೆಳಗಿನ ಕತ್ತಲೆ' ಎಂಬ ಗೀತಾ ವಸಂತ ಅವರ ಲೇಖನವನ್ನು (ಪ್ರ.ವಾ., ಜುಲೈ 15) ಓದಿದಾಗ ನನಗೆ ನನ್ನ ವೃತ್ತಿಜೀವನದ ಎರಡು ಪ್ರಕರಣಗಳು ನೆನಪಾದವು. ಸುಮಾರು ವರ್ಷಗಳಿಂದ ರಾಗಿ ಮುದ್ದೆಯ ಮಹತ್ವವನ್ನು ಪಿಯುಸಿ ತರಗತಿಯಲ್ಲಿ ಬೋಧಿಸುತ್ತಿದ್ದರೂ ಇದುವರೆಗೂ ಒಬ್ಬನೇ ಒಬ್ಬ ವಿದ್ಯಾರ್ಥಿಯೂ ಊಟದ ಬಾಕ್ಸ್‌ನಲ್ಲಿ ಮುದ್ದೆ ತಂದಿದ್ದನ್ನು ನಾನು ನೋಡಿಲ್ಲ. ಏಕಿರಬಹುದು ಎಂದು ತರಗತಿಯಲ್ಲಿ ಒಮ್ಮೆ ವಿದ್ಯಾರ್ಥಿಗಳನ್ನು ಪ್ರಶ್ನಿಸಿದ್ದೆ. 'ಬೋಧನೆ ಮಾಡಿದ್ದೆಲ್ಲವನ್ನೂ ಅಳವಡಿಸಿಕೊಳ್ಳಲು ಸಾಧ್ಯವೇ?' ಎಂದು ಒಬ್ಬ ವಿದ್ಯಾರ್ಥಿ ಕೇಳಿದರೆ, 'ರಾಗಿ ಮುದ್ದೆಯ ಮಹತ್ವ ಅರಿವಾದ ಮೇಲೆ ಎಷ್ಟೋ ದಿನಗಳಿಂದ ಮಧ್ಯಾಹ್ನ ತರಬೇಕೆಂದುಕೊಂಡಿದ್ದೆ. ಆದರೆ ಯಾರಾದರೂ ನೋಡಿ ನಗುತ್ತಾರೇನೊ ಎಂಬ ಭಯದಿಂದ ತಂದಿಲ್ಲ ಸರ್' ಎಂದು ಮತ್ತೊಬ್ಬ ವಿದ್ಯಾರ್ಥಿನಿ ಹೇಳಿದ್ದಳು. ಇನ್ನೊಮ್ಮೆ ತರಗತಿಯೊಂದರಲ್ಲಿ ಪ್ರಾಮಾಣಿಕತೆಯ ಬಗ್ಗೆ ಮಾತನಾಡುವಾಗ, 'ನಿಮ್ಮ ತರಗತಿ ಕೋಣೆಯಲ್ಲಿ ಐವತ್ತು ಸಾವಿರ ರೂಪಾಯಿಯ ದುಡ್ಡಿನ ಕಟ್ಟೊಂದು ನಿಮಗೆ ಸಿಕ್ಕಿದರೆ ಖಂಡಿತವಾಗಿಯೂ ಯಾವ ವಿದ್ಯಾರ್ಥಿಯೂ ಸಂಬಂಧಪಟ್ಟವರಿಗೆ ತಲುಪಿಸುವುದಿಲ್ಲ' ಎಂದು ನಾನು ಹೇಳಿದಾಗ, 'ಉಪನ್ಯಾಸಕರ ಕೊಠಡಿಯಲ್ಲಿ ಸಿಕ್ಕಿದರೆ ಉಪನ್ಯಾಸಕರು ಸಂಬಂಧಪಟ್ಟವರಿಗೆ ತಲುಪಿಸುತ್ತಾರೆಯೇ?' ಎಂದು ವಿದ್ಯಾರ್ಥಿಯೊಬ್ಬ ನನಗೆ ಮರುಪ್ರಶ್ನೆ ಹಾಕಿದ್ದ.

ಆದರ್ಶಗಳು ಬೋಧನೆಗಷ್ಟೇ ಸೀಮಿತ ವಿನಾ ಅನುಷ್ಠಾನಕ್ಕಲ್ಲ ಎಂಬ ಮನಃಸ್ಥಿತಿ ಸಮಾಜದಲ್ಲಿ ಬೇರೂರುತ್ತಿರುವುದನ್ನು, ನೈತಿಕತೆಯು ಮಾತಿಗಷ್ಟೇ ಸೀಮಿತವಾಗದೆ ಅನ್ವಯಿಸಿಕೊಳ್ಳಬೇಕಾದ ಅನಿವಾರ್ಯವನ್ನು, ಶಿಕ್ಷಕ ಮತ್ತು ಪೋಷಕ ತಾವು ಬತ್ತಿಗಳಾಗಿ ಉರಿಯದೆ ಸಮಾಜದಲ್ಲಿ ಹಣತೆಯನ್ನು ಹಚ್ಚಲು ಸಾಧ್ಯವಿಲ್ಲ ಎಂಬುದನ್ನು ಈ ಎರಡೂ ಪ್ರಕರಣಗಳು ಸೂಚಿಸುತ್ತವೆ. ಹಾಗಾಗಿ, ಖಲೀಲ್ ಗಿಬ್ರಾನ್ ಹೇಳುವಂತೆ, ಪೋಷಕ ಅಥವಾ ಶಿಕ್ಷಕರೆಂಬ ಬಿಲ್ಲುಗಳು ಬಾಗಿ ಮಕ್ಕಳೆಂಬ ಬಾಣ ಸರಿಯಾದ ಗುರಿ ಮುಟ್ಟುವಂತೆ ಮಾಡಬೇಕಾದುದು ಇಂದಿನ ತುರ್ತು.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಖಾಸಗಿ ವಲಯದಲ್ಲಿ ಮೀಸಲಾತಿ ಬೇಕು ಖಚಿತ ಕಾರ್ಯನೀತಿ

ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸುವ ಕಾಯ್ದೆ ಜಾರಿಗೆ ತರಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ. ಹೀಗಾಗಿ, ಖಾಸಗಿ ವಲಯದಲ್ಲಿ ಮೀಸಲಾತಿ ನೀಡುವ ವಿಚಾರ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಖಾಸಗಿ ಉದ್ದಿಮೆಗಳಲ್ಲಿ ಸಮಾಜದ ಅಂಚಿನ ಜನರಿಗೆ ಸಾಮಾಜಿಕ ಮೀಸಲಾತಿ ಕಲ್ಪಿಸುವ ಕೇಂದ್ರ ಸರ್ಕಾರದ ಪ್ರಯತ್ನ ಫಲಪ್ರದ ಆಗಿಲ್ಲ. ಆಯಾ ರಾಜ್ಯಗಳಲ್ಲಿ ಸ್ಥಳೀಯರಿಗೆ ನಿಗದಿತ ಪ್ರಮಾಣದಲ್ಲಿ ಉದ್ಯೋಗಾವಕಾಶ ಸಿಗುವಂತೆ ಮಾಡಬೇಕು ಎನ್ನುವ ಕೆಲವು ರಾಜ್ಯಗಳ ಪ್ರಯತ್ನ ಇದುವರೆಗೆ ತಾರ್ಕಿಕ ಅಂತ್ಯ ಕಂಡೇ ಇಲ್ಲ...

ಪ್ರಜಾವಾಣಿ ವಾರ್ತೆ

ಖಾಸಗಿ ವಲಯದಲ್ಲಿ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಟ್ಟದಲ್ಲಿ ಹಲವು ಪ್ರಯತ್ನಗಳು ನಡೆದಿವೆ. ಉದ್ಯೋಗದಲ್ಲಿ ಸ್ಥಳೀಯರಿಗೆ ಮೀಸಲಾತಿ ಕಲ್ಪಿಸುವ ರಾಜ್ಯಗಳ ಪ್ರಯತ್ನಗಳು ಕೋರ್ಟ್ ಮೆಟ್ಟಿಲೇರಿದ್ದರೆ, ಎಸ್‌ಸಿ, ಎಸ್‌ಟಿ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಕೇಂದ್ರದ ಪ್ರಸ್ತಾವ ಹಳ್ಳ ಹಿಡಿದಿದೆ.

ಕೇಂದ್ರ ಸರ್ಕಾರವು ಖಾಸಗಿ ವಲಯದಲ್ಲಿ ಸಾಮಾಜಿಕ ಹಿಂದುಳಿದಿರುವಿಕೆಯ ಆಧಾರದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಕಲ್ಪಿಸುವ ದಿಸೆಯಲ್ಲಿ ಕಾರ್ಯೋನ್ಮುಖವಾಗಿತ್ತು. ಹಲವು ರಾಜ್ಯ ಸರ್ಕಾರಗಳು ಸ್ಥಳೀಯ ಅಭ್ಯರ್ಥಿಗಳಿಗೆ ಖಾಸಗಿ ಕಂಪನಿಗಳಲ್ಲಿ ಇಂತಿಷ್ಟು ಪ್ರಮಾಣದಲ್ಲಿ ಉದ್ಯೋಗ ನೀಡಬೇಕು ಎನ್ನುವ ನೀತಿ ರೂಪಿಸಿದವು. ಆದರೆ, ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಈ ದಿಸೆಯಲ್ಲಿ ಇದುವರೆಗೂ ನಿರೀಕ್ಷಿತ ಯಶಸ್ಸು ಕಂಡಿಲ್ಲ; ಎಲ್ಲೂ ಖಚಿತವಾದ ಕಾರ್ಯಕ್ರಮ ಜಾರಿಯಾಗಿಲ್ಲ.

ಖಾಸಗಿ ವಲಯದಲ್ಲಿ ಸಾಮಾಜಿಕ ನ್ಯಾಯದ ಭಾಗವಾಗಿ ಮೀಸಲಾತಿ ಕಲ್ಪಿಸುವ ಬಗ್ಗೆ ಸಮಾಲೋಚಿಸಲು ಯುಪಿಎ ಸರ್ಕಾರವು 2006ರಲ್ಲಿ ಸಮನ್ವಯ ಸಮಿತಿ ರಚಿಸಿತ್ತು. ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ಬುಡಕಟ್ಟು ವ್ಯವಹಾರಗಳ ಇಲಾಖೆ, ಉದ್ಯಮ ಮತ್ತು ಆಂತರಿಕ ವ್ಯಾಪಾರದ ಉತ್ತೇಜನ ಇಲಾಖೆಯ ಕಾರ್ಯದರ್ಶಿಗಳು ಸಮಿತಿಯ ಭಾಗವಾಗಿದ್ದರು. ಜತೆಗೆ ಭಾರತೀಯ ಕೈಗಾರಿಕೆಗಳ ಒಕ್ಕೂಟ (ಐಸಿಸಿ), ಭಾರತೀಯ ವಾಣಿಜ್ಯ ಹಾಗೂ ಕೈಗಾರಿಕಾ ಮಹಾಮಂಡಳಿ (ಎಫ್‌ಐಸಿಸಿಐ) ಮತ್ತು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಅಸೋಚಾಂ) ಹಾಗೂ ದಲಿತರ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕೆ ಮಂಡಳಿ (ಡಿಐಸಿಸಿಐ) ಉದ್ಯಮ ಕ್ಷೇತ್ರವನ್ನು ಪ್ರತಿನಿಧಿಸಿ ಸಮಿತಿಯಲ್ಲಿ ಸ್ಥಾನ ಪಡೆದಿದ್ದವು.

ಇದುವರೆಗೆ ಈ ಸಮಿತಿಯು ಒಂಬತ್ತು ಬಾರಿ ಸಭೆ ಸೇರಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಿದೆ. ಸಮಿತಿಯ ಮೊದಲ ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಉದ್ದಿಮೆಗಳು ಸ್ವಯಂಪ್ರೇರಿತವಾಗಿ ಕೌಶಲ ತರಬೇತಿ ನೀಡಬೇಕು ಎಂದು ತೀರ್ಮಾನಿಸಲಾಯಿತು. ಈ ಬಗ್ಗೆ ಶಿಕ್ಷಣ, ಉದ್ಯೋಗ ಪಡೆಯುವ ಕೌಶಲ, ಉದ್ಯಮಶೀಲತೆಗಳನ್ನು ರೂಢಿಸುವುದು ಒಳಗೊಂಡಂತೆ ಉದ್ದಿಮೆಗಳಿಗೆ ಸ್ವಯಂಪ್ರೇರಿತ ನೀತಿ ಸಂಹಿತೆಯನ್ನು (ವಿಸಿಸಿ) ರೂಪಿಸಲಾಯಿತು. ಸಮಾಜದ ಎಲ್ಲ ಜನರನ್ನೂ ಒಳಗೊಳ್ಳುವ ಸಲುವಾಗಿ ಶಿಷ್ಯವೇತನ, ಕೋಚಿಂಗ್, ಉದ್ಯಮಶೀಲತಾ ತರಬೇತಿ, ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ನಡೆಸುವಂತೆ ಐಸಿಸಿ, ಎಫ್‌ಐಸಿಸಿಐ, ಅಸೋಚಾಂ ಮುಂತಾದ ಸಂಸ್ಥೆಗಳು ತಮ್ಮ ಸದಸ್ಯ ಕಂಪನಿಗಳಿಗೆ ಸೂಚಿಸಿದವು. ಆದರೆ, ಅವುಗಳ ಪೈಕಿ ಯಾವುದು ಕಾರ್ಯರೂಪಕ್ಕೆ ಬಂತು ಮತ್ತು ಎಷ್ಟು ಜನ ಅವುಗಳ ಪ್ರಯೋಜನ ಪಡೆದರು ಎನ್ನುವ ಮಾಹಿತಿಯೇ ಲಭ್ಯವಿಲ್ಲ.

ಅನುಷ್ಠಾನಕ್ಕೆ ಬಾರದ ನಿಯಮ, ಕಾನೂನು

ಖಾಸಗಿ ವಲಯದಲ್ಲಿ ಸ್ಥಳೀಯರಿಗೆ ಉದ್ಯೋಗ ಕೊಡಲು ಆದ್ಯತೆ ನೀಡಬೇಕು ಎಂಬ ನೀತಿಯನ್ನು ಜಾರಿಗೆ ತರಲು ಕರ್ನಾಟಕ, ಮಹಾರಾಷ್ಟ್ರ, ಗುಜರಾತ್‌ನಂತಹ ಕೆಲವು ರಾಜ್ಯಗಳು ಈಗಾಗಲೇ ಹಲವು ಬಾರಿ ಪ್ರಯತ್ನ ನಡೆಸಿವೆ.

ಕರ್ನಾಟಕದಲ್ಲಿ 1984ರಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾದ ಸರೋಜಿನಿ ಮಹಿಷಿ ವರದಿಯು ಖಾಸಗಿ ಕ್ಷೇತ್ರದಲ್ಲಿ ಶೇ 100ರಷ್ಟು 'ಸಿ' ಮತ್ತು 'ಡಿ' ಶ್ರೇಣಿಯ ಉದ್ಯೋಗಗಳನ್ನು ಸ್ಥಳೀಯರಿಗೇ ನೀಡಬೇಕು ಎಂದು ಶಿಫಾರಸು ಮಾಡಿತ್ತು. ರಾಜ್ಯ ಸರ್ಕಾರವೂ ಶೇ 80ರಷ್ಟು ಉದ್ಯೋಗಗಳನ್ನು ಸ್ಥಳೀಯರಿಗೆ ನೀಡಬೇಕು ಎಂದು ಪ್ರತಿಪಾದಿಸುತ್ತಲೇ ಬಂದಿದೆ. ಆದರೆ, ಇದುವರೆಗೂ ಜಾರಿಗೆ ಬಂದಿಲ್ಲ.

ಮಹಾರಾಷ್ಟ್ರದಲ್ಲಿ ಖಾಸಗಿ ಕ್ಷೇತ್ರದಲ್ಲಿ ಶೇ 80ರಷ್ಟು ಉದ್ಯೋಗಗಳನ್ನು ಸ್ಥಳೀಯರಿಗೆ ನೀಡಬೇಕು ಎಂಬ ನೀತಿ ಜಾರಿಯಲ್ಲಿದೆ. ಗುಜರಾತ್‌ನಲ್ಲಿ 1995ರಲ್ಲೇ ಇಂತಹ ನೀತಿ ರೂಪಿಸಲಾಗಿದೆ. ಗುಜರಾತ್‌ನಲ್ಲಿ 15 ವರ್ಷಕ್ಕಿಂತ ಹೆಚ್ಚು ಸಮಯದಿಂದ ನೆಲೆಸಿರುವವರನ್ನು ರಾಜ್ಯದವರು ಎಂದು ಪರಿಗಣಿಸಬಹುದು ಎಂದು ಅಲ್ಲಿನ ನೀತಿ ಹೇಳುತ್ತದೆ.

ರಾಜಸ್ಥಾನ ಸರ್ಕಾರವು ಖಾಸಗಿ ಉದ್ಯೋಗಗಳಲ್ಲಿ ಸ್ಥಳೀಯರಿಗೆ ಶೇ 75ರಷ್ಟು ಮೀಸಲಾತಿ ಮತ್ತು ಮಧ್ಯಪ್ರದೇಶ ಸರ್ಕಾರವು ಸ್ಥಳೀಯರಿಗೆ ಶೇ 70ರಷ್ಟು ಮೀಸಲಾತಿ ಕಲ್ಪಿಸುವ ಕಾನೂನು ಜಾರಿಗೆ ಚಿಂತನೆ ನಡೆಸುತ್ತಿವೆ. ಅದಿನ್ನೂ ಕಾರ್ಯರೂಪಕ್ಕೆ ಬಂದಿಲ್ಲ.

ಆದರೆ, ಖಾಸಗಿ ವಲಯದಲ್ಲಿ ಸ್ಥಳೀಯರಿಗೆ ಮೀಸಲಾತಿ ನೀಡುವ ಸಂಬಂಧ, ಆಂಧ್ರಪ್ರದೇಶ ಮತ್ತು ಹರಿಯಾಣ ರಾಜ್ಯಗಳು ಕಾನೂನು ರೂಪಿಸುವ ಪ್ರಯತ್ನ ನಡೆಸಿವೆ. ಜಾರ್ಖಂಡ್‌ನಲ್ಲೂ ಈ ಪ್ರಯತ್ನ ಮಸೂದೆಯ ಹಂತದಲ್ಲಿದೆ.

2019ರಲ್ಲಿ ಆಂಧ್ರಪ್ರದೇಶ (ಆಂಧ್ರಪ್ರದೇಶದ ಕೈಗಾರಿಕೆಗಳು/ಕಾರ್ಖಾನೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಉದ್ಯೋಗ ಕಾಯ್ದೆ–2019) ಕಾಯ್ದೆ ರೂಪಿಸಿತ್ತು. ಈ ಕುರಿತ ಅರ್ಜಿಯ ವಿಚಾರಣೆ ಆಂಧ್ರ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಹೈಕೋರ್ಟ್ 'ಈ ಕಾಯ್ದೆ ಅಸಾಂವಿಧಾನಿಕವಾಗಿರಬಹುದು' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಇದೇ ರೀತಿ, ಹರಿಯಾಣ ಸರ್ಕಾರ (ಹರಿಯಾಣ ರಾಜ್ಯ ಸ್ಥಳೀಯ ಅಭ್ಯರ್ಥಿಗಳ ಉದ್ಯೋಗ ಕಾಯ್ದೆ–2020) ಜಾರಿ ಮಾಡಿತ್ತು. ₹30 ಸಾವಿರಕ್ಕಿಂತ ಕಡಿಮೆ ವೇತನ ಇರುವ (ಆರಂಭದಲ್ಲಿ ಇದು ₹50 ಸಾವಿರ ಇತ್ತು) ಹುದ್ದೆಗಳಿಗೆ ಶೇ 75ರಷ್ಟು ಸ್ಥಳೀಯ ಅಭ್ಯರ್ಥಿಗಳನ್ನೇ ಪರಿಗಣಿಸಬೇಕು ಎಂದಿತ್ತು. ಪಂಜಾಬ್–ಹರಿಯಾಣ ಹೈಕೋರ್ಟ್ ಈ ಕಾಯ್ದೆಯನ್ನು 2023ರ ನವೆಂಬರ್ 17ರಂದು ರದ್ದುಪಡಿಸಿತ್ತು. ಹರಿಯಾಣ ಸರ್ಕಾರ ಈ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ವಿಚಾರಣೆ ನಡೆಯುತ್ತಿದೆ.

ಪಂಜಾಬ್- ಹರಿಯಾಣ ಹೈಕೋರ್ಟ್ ಹೇಳಿದ್ದೇನು?

- ಕಾಯ್ದೆ 'ಅಸಾಂವಿಧಾನಿಕ'
- ಕಾಯ್ದೆಯು ಭಾರತದ ಸಂವಿಧಾನದ 3ನೇ ಭಾಗವನ್ನು (ಮೂಲಭೂತ ಹಕ್ಕುಗಳನ್ನು ಪ್ರತಿಪಾದಿಸುವ 12ರಿಂದ 35ರವರೆಗಿನ ಸಂವಿಧಾನದ ವಿಧಿಗಳು ಈ ಭಾಗದಲ್ಲಿವೆ) ಉಲ್ಲಂಘಿಸುತ್ತಿದೆ
- ಅಭ್ಯರ್ಥಿಗಳು ನಿರ್ದಿಷ್ಟ ರಾಜ್ಯಕ್ಕೆ ಸೇರಿಲ್ಲ ಎಂಬ ಕಾರಣದಿಂದ ರಾಜ್ಯವೊಂದು ಜನರ ನಡುವೆ ತಾರತಮ್ಯ ಮಾಡಲು ಸಾಧ್ಯವಿಲ್ಲ. ಸಂವಿಧಾನದ 16ನೇ ವಿಧಿಯು ಸಾರ್ವಜನಿಕ ಉದ್ಯೋಗದ ವಿಚಾರದಲ್ಲಿ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುತ್ತದೆ



ಸಮನ್ವಯ ಸಮಿತಿಯ ಕೊನೆಯ–ಅಂದರೆ 9ನೇ ಸಭೆಯಲ್ಲಿಯೂ ಮೀಸಲಾತಿ ನೀಡುವ ದಿಸೆಯಲ್ಲಿ ಒಂದು ಖಚಿತ ರೂಪುರೇಷೆ ತಯಾರಿಸಲು ಸಾಧ್ಯವಾಗಲಿಲ್ಲ. ಉದ್ದಿಮೆಗಳು ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಿಕೊಳ್ಳುವಾಗ ಕನಿಷ್ಠ ಶೇ 25ರಷ್ಟು ಎಸ್‌ಸಿ, ಎಸ್‌ಟಿಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಈ ಸಭೆಯಲ್ಲಿ ಕೋರಲಾಯಿತು. ಜತೆಗೆ ಹಳ್ಳಿಗಳಿಂದ ಬಂದವರಿಗೆ ಆದ್ಯತೆ ನೀಡುವುದು, ಎಸ್‌ಸಿ, ಎಸ್‌ಟಿ ಉದ್ದಿಮೆದಾರರಿಗೆ ಪ್ರೋತ್ಸಾಹ ನೀಡುವುದು, ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಬುಡಕಟ್ಟು ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ನೀಡುವ ಕ್ರಮಗಳಿಗೆ ಮುಂದಾಗಬೇಕು ಎಂದು ವಾಣಿಜ್ಯೋದ್ಯಮಗಳಿಗೆ ಮನವಿ ಮಾಡಲಾಯಿತು.

ಆದರೆ, ಇಷ್ಟೆಲ್ಲ ಆದ ನಂತರವೂ, ಖಾಸಗಿ ಕಂಪನಿಗಳ ಉನ್ನತ ಹುದ್ದೆಗಳಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿಯ ಎಷ್ಟು ಮಂದಿ ಇದ್ದಾರೆ ಎನ್ನುವ ಬಗ್ಗೆ ಸರ್ಕಾರದ ಬಳಿ ಯಾವ ಮಾಹಿತಿಯೂ ಇಲ್ಲ. ಇದನ್ನು ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ರಾಜ್ಯ ಸಚಿವರಾಗಿದ್ದ ಎ.ನಾರಾಯಣಸ್ವಾಮಿ ಅವರೇ 2023ರ ಮಾರ್ಚ್ 22ರಂದು ರಾಜ್ಯಸಭೆಯಲ್ಲಿ ಹಂಚಿಕೊಂಡಿದ್ದಾರೆ.

ದಶಕಗಳ ಹಿಂದಿನ ಬೇಡಿಕೆ

ಬಹುರಾಷ್ಟ್ರೀಯ ಕಂಪನಿಗಳ ಉದ್ಯೋಗ ಮಾರುಕಟ್ಟೆಯು ಈ ದೇಶದ ದಲಿತರು, ಎಸ್‌ಟಿ, ಒಬಿಸಿ, ಮಹಿಳೆಯರನ್ನು ದೊಡ್ಡ ಮಟ್ಟದಲ್ಲಿ ಒಳಗೊಂಡಿಲ್ಲ. ಹೀಗಾಗಿ ಈ ಸಮುದಾಯಗಳಲ್ಲಿ ನಿರುದ್ಯೋಗ ಹೆಚ್ಚಾಗಿದೆ. ಖಾಸಗಿ ಕಂಪನಿಗಳು ಈ ದೇಶದ ನೆಲ, ಜಲದಂತಹ ಸಂಪನ್ಮೂಲಗಳ ಬಳಕೆಯ ಜೊತೆಗೆ ಸರ್ಕಾರದಿಂದಲೂ ಹಲವು ಸವಲತ್ತು ಪಡೆಯುತ್ತವೆ. ಹೀಗಾಗಿ ಸಾಮಾಜಿಕ ಅಸಮಾನತೆ ಮತ್ತು ಆರ್ಥಿಕ ಅಸಮಾನತೆ ಹೋಗಲಾಡಿಸಲು ಖಾಸಗಿ ವಲಯದಲ್ಲಿಯೂ ಮೀಸಲಾತಿ ನೀಡಬೇಕು ಎನ್ನುವ ಒತ್ತಾಯ ಹಿಂದಿನಿಂದಲೂ ಕೇಳಿಬರುತ್ತಿದೆ.

ಆದರೆ, ಖಾಸಗಿ ವಲಯದಲ್ಲಿ ಮೀಸಲಾತಿ ನೀಡುವ ಯಾವುದೇ ಕ್ರಮವು ದೇಶದಲ್ಲಿನ ಬಂಡವಾಳ ಹೂಡಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಅಸೋಚಾಂನಂಥ ಉದ್ಯಮ ಸಂಸ್ಥೆಗಳು ಮೊದಲಿನಿಂದಲೂ ಪ್ರತಿಪಾದಿಸುತ್ತಿವೆ.

ಕ್ಷೀಣಿಸುತ್ತಿರುವ ಅವಕಾಶಗಳು

ಆರ್ಥಿಕ ಉದಾರೀಕರಣ ನೀತಿ ಅಳವಡಿಸಿಕೊಂಡ ನಂತರ ಅನೇಕ ಬಹುರಾಷ್ಟ್ರೀಯ ಕಂಪನಿಗಳು ಭಾರತ ಪ್ರವೇಶಿಸಿದವು. ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡಲಾಯಿತು. ಅವುಗಳ ಜತೆಯಲ್ಲೇ ಸಾರ್ವಜನಿಕ ವಲಯದ ಅನೇಕ ಉದ್ದಿಮೆಗಳನ್ನು ಭಾಗಶಃ ಇಲ್ಲವೇ ಸಂಪೂರ್ಣವಾಗಿ ಖಾಸಗೀಕರಣ ಮಾಡಲಾಯಿತು. ಇವುಗಳಿಂದ ಸರ್ಕಾರಿ ಕೆಲಸಗಳು ಕಡಿಮೆಯಾಗಿ, ಖಾಸಗಿ ವಲಯದಲ್ಲಿ ಅಪಾರ ಪ್ರಮಾಣದ ಉದ್ಯೋಗಾವಕಾಶಗಳು ಸೃಷ್ಟಿಯಾದವು.

ಭಾರತದ ಸಂವಿಧಾನವು ಸರ್ಕಾರಿ ನೌಕರಿಗಳಲ್ಲಿ ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಹಿಂದುಳಿದ ಜನರಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಸಾಮಾಜಿಕ ಹಿಂದುಳಿದಿರುವಿಕೆಯ ಆಧಾರದಲ್ಲಿ ಮೀಸಲಾತಿ ನೀಡುತ್ತಿದೆ. ಆದರೆ, ಖಾಸಗಿ ಕ್ಷೇತ್ರದಲ್ಲಿ ಇಂಥ ಯಾವ ಉಪಕ್ರಮವೂ ಇಲ್ಲ. ಖಾಸಗಿ ಉದ್ಯಮಗಳ ಬೆಳವಣಿಗೆ, ಖಾಸಗೀಕರಣ ನೀತಿಗಳು ಎಸ್‌ಸಿ, ಎಸ್‌ಟಿ, ಒಬಿಸಿ ಜನರ ಮೇಲೆ ತೀವ್ರವಾದ ಪರಿಣಾಮ ಬೀರುತ್ತಿವೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ 2021ರ ವರದಿಯ ಪ್ರಕಾರ, 1991 ಮತ್ತು 2012ರ ನಡುವೆ ಆದಂಥ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದಿಂದ 20 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ನಷ್ಟವಾಗಿವೆ. ಇವುಗಳಲ್ಲಿ ಶೇ 50ರ ಮೀಸಲಾತಿ ಎಂದರೆ, ಸಾಮಾಜಿಕವಾಗಿ ಹಿಂದುಳಿದ ಜಾತಿಗಳಿಗೆ 10 ಲಕ್ಷ ಉದ್ಯೋಗಾವಕಾಶಗಳು ನಷ್ಟವಾದವು ಎಂದು ಅರ್ಥ.

ಆಧಾರ: ಪ್ರೆಸ್ ಇನ್‌ಫರ್ಮೇಷನ್ ಬ್ಯೂರೋ, ಪಿಟಿಐ, ಹರಿಯಾಣ ಮತ್ತು ಆಂಧ್ರದ ಕಾಯ್ದೆಗಳು, ಪಂಜಾಬ್–ಹರಿಯಾಣ ಹೈಕೋರ್ಟ್ ತೀರ್ಪು

ಸಿನಿ ಬಿಟ್ಸ್

ಹೊರಬಂತು 'ರೂಪಾಂತರ' ಟ್ರೇಲರ್



ರಾಜ್ ಬಿ ಶೆಟ್ಟಿ

ರಾಜ್ ಬಿ ಶೆಟ್ಟಿ ಪ್ರಮುಖಪಾತ್ರದಲ್ಲಿ ನಟಿಸಿರುವ 'ರೂಪಾಂತರ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ.


ಹಲವು ಬಗೆಯ ವ್ಯಕ್ತಿಗಳು ರೂಪಾಂತರಗೊಳ್ಳುವ ಕಥೆಯನ್ನು ಹೊಂದಿರುವ ಈ ಚಿತ್ರ ಜುಲೈ 26 ರಂದು ಬಿಡುಗಡೆಯಾಗುತ್ತಿದೆ.

'ನಾವು ಮಂಗಳೂರಿನಲ್ಲಿ ಸಿನಿಮಾ ಮಾಡಬೇಕಾದರೆ ಮಾರ್ಕೆಟ್ ಬೇಡಿಕೆಗೂ ಹೊರತಾದ ಒಳ್ಳೆಯ ಸಿನಿಮಾಗಳನ್ನು ಮಾಡಬೇಕು. ಆಗ ಜನರು ಸಿನಿಮಾಗಳನ್ನು ನೋಡುತ್ತಾರೆ ಎಂಬ ಉದ್ದೇಶದಿಂದ ಸಿನಿಮಾ ಮಾಡಲು ಆರಂಭಿಸಿದ್ದೆವು. ಅದೇ ಉದ್ದೇಶದಿಂದ ಈ ಸಿನಿಮಾವನ್ನು ಮಾಡಿದ್ದೇವೆ. 'ರೂಪಾಂತರ' ನನಗೆ ಬಹಳ ಇಷ್ಟವಾದ ಸಿನಿಮಾ. ಏಕೆಂದರೆ ಈ ಚಿತ್ರದಲ್ಲಿ ನಾನು ನಟ ಮಾತ್ರ. ಸಂಭಾಷಣೆಗೆ ಸ್ವಲ್ಪ ಸಹಾಯ ಮಾಡಿದ್ದೇನೆ. ಮಿಕ್ಕಿದೆಲ್ಲಾ ಈ ತಂಡದ ಕನಸು. ನನ್ನ ಬಿಟ್ಟು ಬೇರೆ ಮುಖ್ಯಪಾತ್ರಗಳು ಈ ಚಿತ್ರದಲ್ಲಿದೆ. 'ಒಂದು ಮೊಟ್ಟೆಯ ಕಥೆ' ಚಿತ್ರ ಮಾಡಿದ ತಂಡದೊಂದಿಗೆ ಈ ಚಿತ್ರ ಮಾಡಿರುವುದು ಖುಷಿಯಾಗಿದೆ' ಎಂದರು ರಾಜ್ ಬಿ ಶೆಟ್ಟಿ.

ಮಿಥಿಲೇಶ್ ಎಡವಲತ್ ಚಿತ್ರದ ನಿರ್ದೇಶಕ. 'ಮಂಗಳೂರಿನವರು ಮಂಗಳೂರಿಗರಿಗೆ ಸಿನಿಮಾ ಮಾಡುತ್ತಾರೆ ಎಂಬ ಮಾತಿದೆ. ಆದರೆ ಈ ಚಿತ್ರವನ್ನು ನಾವು ಬೆಂಗಳೂರಿನಲ್ಲಿ ಮಾಡಿದ್ದೇವೆ. ರಾಜ್ ಬಿ ಶೆಟ್ಟಿ ಅವರನ್ನು ಹೊರತುಪಡಿಸಿ ಮಿಕ್ಕೆಲ್ಲ ನಟರು ಬೇರೆ ಬೇರೆ ಪ್ರಾಂತ್ಯದವರು' ಎಂದರು ನಿರ್ಮಾಪಕ ಸುಹಾನ್ ಪ್ರಸಾದ್.

ಸೋಮಶೇಖರ್ ಬೋಲೇಗಾಂವ್, ಲೇಖಾ ನಾಯ್ಡು, ಹನುಮಕ್ಕ, ಭರತ್ ಜಿ.ಬಿ, ಅಂಜನ್ ಭಾರಧ್ವಾಜ್ ಮತ್ತಿತರರ ತಾರಗಣ ಈ ಚಿತ್ರಕ್ಕಿದೆ. ಮಿದುನ್ ಮುಕುಂದನ್ ಸಂಗೀತ, ಪ್ರವೀಣ್ ಶ್ರೀಯಾನ್ ಛಾಯಾಚಿತ್ರಗ್ರಹಣ, ಭುವನೇಶ್ ಮಣಿವಣ್ಣನ್ ಸಂಕಲನ ಚಿತ್ರಕ್ಕಿದೆ.

'ಹಿರಣ್ಯ'ನ ಜೊತೆ ಹೆಜ್ಜೆ ಹಾಕಿದ ದಿವ್ಯಾ ಸುರೇಶ್



ದಿವ್ಯಾ ಸುರೇಶ್

'ಬಿಚ್ಚುಗತ್ತಿ' ಸಿನಿಮಾ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸಿದ್ದ ನಟ ರಾಜವರ್ಧನ್ ಇದೀಗ 'ಹಿರಣ್ಯ'ನಾಗಿ ತೆರೆ ಮೇಲೆ ಬರುತ್ತಿದ್ದಾರೆ. ಜುಲೈ 19ರಂದು ಈ ಸಿನಿಮಾ ಬಿಡುಗಡೆಯಾಗುತ್ತಿದ್ದು, ಚಿತ್ರದ ಹಾಡೊಂದಕ್ಕೆ 'ಬಿಗ್‌ಬಾಸ್' ಖ್ಯಾತಿಯ ದಿವ್ಯಾ ಸುರೇಶ್ ಹೆಜ್ಜೆ ಹಾಕಿದ್ದಾರೆ.


'ಬೈಲಾ ಬೈಲಾ' ಎಂಬ ಹಾಡಿಗೆ ದಿವ್ಯಾ ಸುರೇಶ್ ಹೆಜ್ಜೆ ಹಾಕಿದ್ದು, ಈ ಹಾಡನ್ನು ನಿರ್ದೇಶಕ ಪ್ರವೀಣ್ ಅವ್ಯುಕ್ತ್ ಬರೆದಿದ್ದಾರೆ. ಹಾಡಿಗೆ ಶಮಿತಾ ಮಲ್ನಾಡ್ ಧ್ವನಿಯಾಗಿದ್ದು, ಜೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ. ಕಿರುಚಿತ್ರಗಳನ್ನು ನಿರ್ದೇಶಿಸಿದ್ದ ಪ್ರವೀಣ್ ಈ ಸಿನಿಮಾ ಮೂಲಕ ನಿರ್ದೇಶಕನಾಗಿ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಸಿನಿಮಾದಲ್ಲಿ ರಾಜವರ್ಧನ್‌ಗೆ ನಾಯಕಿಯಾಗಿ ರಿಹಾನಾ ಜೋಡಿಯಾಗಿದ್ದು, ಈ ಸಿನಿಮಾದ ಮೂಲಕ ರಿಹಾನಾ ಚಂದನವನಕ್ಕೆ ಪರಿಚಯವಾಗುತ್ತಿದ್ದಾರೆ.

ಆ್ಯಕ್ಷನ್-ಥ್ರಿಲ್ಲರ್ ಜೊತೆಗೆ ಭಾವನಾತ್ಮಕ ಕಥಾಹಂದರ ಹೊಂದಿರುವ 'ಹಿರಣ್ಯ' ಸಿನಿಮಾದಲ್ಲಿ ದಿವ್ಯಾ ಸುರೇಶ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಹುಲಿ ಕಾರ್ತಿಕ್, ಅರವಿಂದ ರಾವ್, ದಿಲೀಪ್ ಶೆಟ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ. 'ವೇದಾಸ್ ಇನ್ಫಿನಿಟಿ ಪಿಕ್ಚರ್' ಬ್ಯಾನರ್‌ನಲ್ಲಿ ವಿಘ್ನೇಶ್ವರ ಯು. ಹಾಗೂ ವಿಜಯ್ ಕುಮಾರ್ ಬಿ. ವಿ. ಜಂಟಿಯಾಗಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಿಳೆಯೊಬ್ಬರು ಹಿಂದಿ ಚಿತ್ರಗೀತೆಗೆ ನರ್ತಿಸುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ನರ್ತಿಸುತ್ತಿರುವವರು ಕೀರ್ತಿ ಚಕ್ರ ಪುರಸ್ಕೃತರಾದ ಹುತಾತ್ಮ ಕ್ಯಾಪ್ಟನ್ ಅನ್ಶುಮಾನ್ ಸಿಂಗ್ ಅವರ ಪತ್ನಿ ಸ್ಮೃತಿ ಸಿಂಗ್ ಎಂದು ಅನೇಕ ಸಾಮಾಜಿಕ ಜಾಲತಾಣ ಬಳಕೆದಾರರು ಆರೋಪಿಸಿದ್ದಾರೆ. 'ಶೌರ್ಯ ಚಕ್ರ ಪದಕ ಹಾಗೂ ₹1 ಕೋಟಿಯೊಂದಿಗೆ ಮನೆ ಬಿಟ್ಟು ಹೋಗಿರುವ ಈ ಮಹಿಳೆಯನ್ನು ನೋಡಿ..' ಎಂಬ ಅಡಿಬರಹದೊಂದಿಗೆ ಅನೇಕರು ಈ ವಿಡಿಯೊ ಅನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ವಿಡಿಯೊದಲ್ಲಿ ಇರುವುದು ಸ್ಮೃತಿ ಸಿಂಗ್ ಅಲ್ಲ.



ವಿಡಿಯೊ ಅನ್ನು ಇನ್‌ವಿಡ್ ಟೂಲ್ ಸರ್ಚ್‌ಗೆ ಒಳಪಡಿಸಿ, ಅದರ ಕೀಫ್ರೇಮ್‌ಗಳನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಬಹುತೇಕರು ಹಂಚಿಕೊಂಡಿರುವುದು ಒಂದೇ ವಿಡಿಯೊ ಎನ್ನುವುದು ಕಂಡುಬಂತು. ಈ ಬಗ್ಗೆ ಮತ್ತಷ್ಟು ಪರಿಶೀಲಿಸಿದಾಗ, ರೇಷ್ಮಾ ಸೆಬಾಸ್ಟಿಯನ್ ಎನ್ನುವ ನಟಿ ಮತ್ತು ರೂಪದರ್ಶಿಯ ಇನ್‌ಸ್ಟಾಗ್ರಾಂ ಖಾತೆಯ ಸಂಪರ್ಕ ಸಿಕ್ಕಿತು. ಸ್ಮೃತಿ ಸಿಂಗ್ ಅವರದ್ದು ಎಂದು ಪ್ರತಿಪಾದನೆ ಮಾಡುತ್ತಿರುವ ವಿಡಿಯೊ ವಾಸ್ತವವಾಗಿ ರೇಷ್ಮಾ ಅವರದ್ದು. ರೇಷ್ಮಾ ಅವರು ಕೂಡ ಇದನ್ನು ದೃಢಪಡಿಸಿದ್ದಾರೆ. ಸುಳ್ಳು ಸುದ್ದಿ ಹರಡುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ತಿಳಿಸಿದ್ದಾರೆ. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ಮಾಡಿದೆ.

ಗುಂಡಣ್ಣ



ನುಡಿ ಬೆಳಗು

ಸಂತೃಪ್ತಿಯ ಗುಟ್ಟು



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಬಹಳ ಹಿಂದೆ ವಾಹನಗಳ ವ್ಯವಸ್ಥೆಯಿಲ್ಲದ ಕಾಲ. ಮೂವರು ಯುವಕರು ಕಾಡುಹಾದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆಕಸ್ಮಿಕವಾಗಿ ಭೇಟಿಯಾದರು. ಕಾಡು ಪ್ರಾಣಿಗಳ ಭಯದಿಂದ ಒಟ್ಟಿಗೇ ಪಯಣಿಸಲು ತೀರ್ಮಾನಿಸಿದರು. ಮೂವರೂ ತರುಣರೇ ಆದರೂ ಅವರ ಮುಖಭಾವದಲ್ಲಿ ವ್ಯತ್ಯಾಸವಿತ್ತು. ಮೊದಲನೆಯವನು ಬಹಳ ನಿರಾಶಾವಾದಿಯಂತೆ ಕಾಣುತ್ತಿದ್ದ, ಸುಸ್ತಾಗಿದ್ದ. ಎರಡನೆಯವನು ಬಳಲಿದ್ದರೂ ನಿರಾಶನಾಗಿರಲಿಲ್ಲ. ಮೂರನೆಯವನು ಮಾತ್ರ ಬಹಳ ಪ್ರಸನ್ನಚಿತ್ತನಾಗಿದ್ದ, ಸಣ್ಣ ಕಿರುನಗುವೊಂದು ಅವನ ತುಟಿಯಂಚಿನಲ್ಲಿ ಇತ್ತು. ಮೂವರ ಕೈಲೂ ಎರಡೆರಡು ಚೀಲಗಳಿದ್ದವು. ಭಾರವಾಗಬಾರದೆಂದು ಅವರು ಒಂದೊಂದು ಬೆತ್ತದ ಎರಡೂ ತುದಿಗಳಿಗೆ ಒಂದೊಂದು ಚೀಲವನ್ನು ಕಟ್ಟಿ ಭುಜದ ಮೇಲೆ ಹೊತ್ತುಕೊಂಡಿದ್ದರು.

ಮೂವರೂ ಹೋಗುತ್ತಿರುವಾಗ ರಸ್ತೆಯ ಬದಿಯ ಮರವೊಂದರ ಕೆಳಗೆ ವಯಸ್ಸಾದವರೊಬ್ಬರು ಈ ಮೂವರನ್ನು ನೋಡಿ ಮುಗುಳ್ನಕ್ಕರು. 'ನಮ್ಮನ್ನು ನೋಡಿ ಏಕೆ ನಕ್ಕಿರಿ' ಎಂದು ಕೇಳಿದರು ಈ ಯುವಕರು. ಆಗ ಆತ 'ನಿಮ್ಮ ಪ್ರಶ್ನೆಗೆ ಉತ್ತರ ಕೊಡುತ್ತೇನೆ, ಅದಕ್ಕೂ ಮುನ್ನ ನನ್ನ ಪ್ರಶ್ನೆಗೆ ನೀವು ಮೂವರೂ ಉತ್ತರ ಕೊಡಬೇಕು' ಎಂದರು. ಅವರ ಪ್ರಶ್ನೆ ಹೀಗಿತ್ತು: 'ನಿಮ್ಮ ಮೂವರ ಹತ್ತಿರವೂ ಎರಡೆರಡು ಚೀಲಗಳಿವೆ, ಜನರ ಒಳ್ಳೆಯತನವನ್ನು ಒಂದು ಚೀಲದಲ್ಲಿ, ಕೆಟ್ಟತನವನ್ನು ಒಂದು ಚೀಲದಲ್ಲಿ ಇಡುವುದಾದರೆ ಯಾವ ಚೀಲದಲ್ಲಿ ಇಡುತ್ತೀರಿ?'

ಮೊದಲನೆಯವನು ಕೆಟ್ಟವರಿಂದ ದೂರವಿರಲು ಕೆಟ್ಟತನವನ್ನು ಮುಂದಿನ ಚೀಲದಲ್ಲಿಡುತ್ತೇನೆ ಎಂದ. ಎರಡನೆಯವನು ಹೇಳಿದ 'ಒಳ್ಳೆಯತನವನ್ನು ಮುಂದಿನ ಚೀಲದಲ್ಲಿಡುತ್ತೇನೆ, ಕಾರಣ ನನಗೂ ಒಳ್ಳೆಯ ಜನರಂತೆಯೇ ಆಗಬೇಕು, ಕೆಟ್ಟತನವನ್ನು ಹಿಂದಿನ ಚೀಲದಲ್ಲಿಡುತ್ತೇನೆ ಕಾರಣ ಕೆಟ್ಟವರಿಗಿಂತ ಉತ್ತಮವಾಗಬೇಕು'. ಮೂರನೆಯವನು ಹೇಳಿದ, 'ಒಳ್ಳೆಯತನವನ್ನು ಮುಂದಿನ ಚೀಲದಲ್ಲಿಡುತ್ತೇನೆ, ಕಾರಣ ಜಗತ್ತು ಎಷ್ಟು ಸುಂದರವಾಗಿದೆ ಎಂಬುದು ಸದಾ ನನಗೆ ಗೊತ್ತಾಗುತ್ತಿರಬೇಕು. ಕೆಟ್ಟತನವನ್ನು ಹಿಂದಿನ ಚೀಲದಲ್ಲಿಡುತ್ತೇನೆ ಮತ್ತು ಆ ಚೀಲಕ್ಕೆ ಒಂದು ತೂತು ಮಾಡುತ್ತೇನೆ, ನಾನು ಮುಂದೆ ನಡೆದಂತೆಲ್ಲ ಕೆಟ್ಟತನವೆಲ್ಲ ಉದುರಿ ಹೋಗಿ ಆ ಚೀಲ ಖಾಲಿಯಾಗಬೇಕು' ಎಂದ.

ಆಗ ವೃದ್ಧರು 'ನಿನ್ನ ಮುಖದ ಮೇಲಿನ ಮುಗುಳ್ನಗೆ ನೋಡಿಯೇ ನಾನು ಮುಗುಳ್ನಕ್ಕಿದ್ದು. ನೀನು ಕೊಟ್ಟ ಉತ್ತರ ನಿನ್ನ ಪಯಣದ್ದಷ್ಟೇ ಅಲ್ಲ ಬದುಕಿನ ಸಾರವೂ ಹೌದು. ಮೊದಲನೆಯವನು ನಕಾರಾತ್ಮಕತೆಯನ್ನೇ ನೋಡುವುದರಿಂದ ದಣಿದಿದ್ದಾನೆ, ನಿರಾಶನೂ ಆಗಿದ್ದಾನೆ. ಎರಡನೆಯವನು ಒಳ್ಳೆಯದನ್ನೇ ನೋಡಿದರೂ ಬೇರೆಯವರಿಗಿಂತ ಒಳ್ಳೆಯವನಾಗುವ ಒತ್ತಡದಿಂದ ಬಳಲಿದ್ದಾನೆ. ಆದರೆ ನೀನು ಬೇರೆಯವರ ಅವಗುಣಗಳನ್ನು ಮರೆಯುತ್ತ ಒಳ್ಳೆಯದನ್ನು ಮಾತ್ರ ನೋಡುತ್ತಿದ್ದೀ' ಎಂದರು.

ನಿಜ, ಬೇರೆಯವರಲ್ಲಿ ಹುಳುಕು ಹುಡುಕುವ ಬದಲು ಆತ್ಮಾವಲೋಕನ ಮಾಡಿಕೊಳ್ಳುತ್ತ, ಬೇರೆಯವರ ಒಳ್ಳೆಯತನವನ್ನು ಗುರುತಿಸುತ್ತ, ಕೆಟ್ಟದನ್ನು ಕ್ಷಮಿಸುತ್ತ ಮುನ್ನಡೆವ ಗುಣ ಬೆಳೆಸಿಕೊಳ್ಳಬೇಕು. ಈ ಸಕಾರಾತ್ಮಕತೆಯಿಂದ ಮಾತ್ರ ಬದುಕು ಸರಳವೂ ಸುಂದರವೂ ಆಗಲು ಸಾಧ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಗುರುವಾರ ಜುಲೈ 18, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ದ್ವಾದಶಿ ಗಂ. 20-45 ನಕ್ಷತ್ರ: ಜ್ಯೇಷ್ಠ ಗಂ. 27-25 ಯೋಗ: ಶುಕ್ಲ (ಶುಕ್ರ) ಗಂ. 6-13 ನಂತರ ಬ್ರಹ್ಮ ಗಂ. 28-44, ಕರ್ಕಾಟಕ ಮಾಸದ 02 ನೇ ದಿನ, ಮಳೆನಕ್ಷತ್ರ: ಪುನರ್ವಸು 4.

ರಾಹುಕಾಲ: ಮಧ್ಯಾಹ್ನ 01-30 – 03-00

ಸೂರ್ಯೋದಯ: 06-16 **ಸೂರ್ಯಾಸ್ತ :** 06-58

ಮುಸ್ಲಿಂ ದಿನಾಂಕ: 11 ಮೊಹರಮ್

ಅದೃಷ್ಟ ಸಂಖ್ಯೆ: 8, 5

ಮೇಷ: ಏಕಾಗ್ರತೆ ಕೊರತೆಯಿಂದಾಗಿ ಕೆಲಸ ಕಾರ್ಯಗಳಲ್ಲಿ ತಪ್ಪುಗಳು ಉಂಟಾಗುತ್ತವೆ. ಆತ್ಮೀಯನಿಗೆ ಸಾಂತ್ವನ ಹೇಳಬೇಕಾದ ಸಂದರ್ಭ ಬರಲಿದೆ. ಉದ್ಯೋಗದ ವಿಷಯದಲ್ಲಿದ್ದ ಚಿಂತೆ ದೂರಾಗಲಿದೆ.

ವೃಷಭ: ಧನಾಗಮನ ಹೆಚ್ಚಿದ್ದರೂ ಬಹುಪಾಲು ಅನಾವಶ್ಯಕವಾಗಿ ಖರ್ಚಾಗಲಿದೆ. ಸಿವಿಲ್ ಎಂಜಿನಿಯರುಗಳಿಗೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ಸಿಗಲಿದೆ. ಷೇರು ವ್ಯಾಪಾರವು ಅದೃಷ್ಟದಾಯಕವಾಗಿರುತ್ತದೆ.

ಮಿಥುನ: ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯದ ಸಾಧ್ಯತೆ ಇದೆ. ಮೊಂಡುತನ ಬಿಟ್ಟು ಪೋಷಕರ ಮಾತುಗಳನ್ನು ಕೇಳುವುದು ಉತ್ತಮ. ನಾಯಕತ್ವದ ಗುಣಗಳನ್ನು ಪ್ರದರ್ಶಿಸುವುದರಿಂದ ಲಾಭವಿದೆ.

ಕರ್ಕಾಟಕ: ಗೃಹ ನಿರ್ಮಾಣದ ಬಗ್ಗೆ ಹಿರಿಯರ ಹಾಗೂ ಮನೆಯವರ ಅಭಿಪ್ರಾಯ ಸಂಗ್ರಹಿಸಿ. ಇತರರಿಗೆ ಕಹಿಯಾಗುವ ಕೆಲವು ನಿರ್ಧಾರಗಳನ್ನು ನೀವು ತೆಗೆದುಕೊಳ್ಳುತ್ತೀರಿ. ಸಾಂಕ್ರಾಮಿಕ ರೋಗಗಳು ಬಾಧಿಸಬಹುದು.

ಸಿಂಹ: ಹಿರಿಯರ ಮುಂದೆ ಕೌಟುಂಬಿಕ ಪರಂಪರೆ ಹಾಗೂ ನೀತಿ ನಿಯಮಗಳನ್ನು ಮೀರಿ ನಡೆದು ಅವರ ಅಸಮಾಧಾನಕ್ಕೆ ಕಾರಣವಾಗುವಿರಿ. ಸಾಹಿತ್ಯ ವಲಯದಲ್ಲಿರುವವರಿಗೆ ಹೆಚ್ಚಿನ ಮನ್ನಣೆ ಸಿಗಲಿದೆ.

ಕನ್ಯಾ: ವೈಯಕ್ತಿಕ ಜೀವನದಲ್ಲಿ ಕೆಲವೊಂದು ಬದಲಾವಣೆಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ. ನಿರುದ್ಯೋಗಿಗಳು ಬಂದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಿ.

ತುಲಾ: ಕೆಲಸ ಕಾರ್ಯಗಳಿಗೆ ಅಡ್ಡಿಯಾಗುತ್ತಿದ್ದವರು ದೂರ ಸರಿಯಲಿದ್ದಾರೆ. ಪ್ರಾಣಿ ಚರ್ಮದಿಂದ ವಸ್ತುಗಳನ್ನು ತಯಾರಿಸುವವರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಸಹೋದ್ಯೋಗಿಗಳೊಡನೆ ಸಹನೆಯಿಂದ ನಡೆದುಕೊಳ್ಳಿ.

ವೃಶ್ಚಿಕ: ಆತ್ಮಗೌರವದ ರಕ್ಷಣೆಯ ದೃಷ್ಟಿಯಿಂದ ಸಂದರ್ಭಗಳೊಡನೆ ರಾಜಿ ಮಾಡಿಕೊಳ್ಳುವುದು ಸರಿ ಎನಿಸಲಿದೆ. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು. ನೀರಾವರಿ ಬೆಳೆಗಳು ಲಾಭ ತರಲಿದೆ.

ಧನು: ನಿಮ್ಮ ನಡೆ ಮೇಲಧಿಕಾರಿ ಅಥವಾ ಪಾಲುದಾರರಿಗೆ ಇಷ್ಟವಾಗುವ ರೀತಿಯಲ್ಲಿ ಇರುವುದು ಉತ್ತಮ. ಹಲವು ದಿನಗಳ ನಂತರ ನಿಮ್ಮಿಷ್ಟದ ಕೆಲಸವನ್ನು ಸಂತಸದಿಂದ ಮಾಡುವಿರಿ. ಆರೋಗ್ಯದ ಬಗ್ಗೆ ಜಾಗ್ರತೆವಹಿಸಿ.

ಮಕರ: ಕೌಟುಂಬಿಕವಾಗಿ ಖರ್ಚುಗಳು ಅಧಿಕವೆನಿಸಿದರೂ ಆರ್ಥಿಕವಾಗಿ ನಿಮ್ಮ ಆದಾಯ ಯಾವುದೇ ರೀತಿಯ ಏರಿಳಿತಗಳಿಲ್ಲದೆ ಸಮನಾಗಿರುವುದು. ನಿಮ್ಮ ವಾಹನಕ್ಕೆ ಸಣ್ಣ ಪ್ರಮಾಣದಲ್ಲಿ ಅವಘಡಗಳಾಗುವ ಸಾಧ್ಯತೆ ಇದೆ.

ಕುಂಭ: ನ್ಯಾಯಾಲಯದಲ್ಲಿ ನಡೆಯುತ್ತಿರುವ ವ್ಯಾಜ್ಯಗಳ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲು ವಕೀಲರ ಬಳಿ ವೈಯಕ್ತಿಕವಾಗಿ ಮಾತನಾಡುವುದು ಉತ್ತಮ. ಆಗು ಹೋಗುಗಳ ಮೇಲೆ ಹೆಚ್ಚು ಚಿಂತೆಗೊಳಗಾಗದಿರಿ.

ಮೀನ: ಧನಾಗಮನದಲ್ಲಿ ವ್ಯತ್ಯಯ ಅಥವಾ ವಿಳಂಬ ತೋರಿಬರಲಿದೆ. ಸಂಘ ಸಂಸ್ಥೆಗಳ ಹುದ್ದೆಯನ್ನು ಅಲಂಕರಿಸುವ ಅವಕಾಶ ಇದೆ. ರಾಸಾಯನಿಕ ವಸ್ತುಗಳ ಮಾರಾಟದಿಂದ ಹೆಚ್ಚಿನ ಲಾಭ ಕಾಣುವಿರಿ.

ಪದಬಂಧ 5745


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೋಲಿಕೆಗೆ ಮೀರಿದುದು (4)
3.ಸುರನ ಹತ್ತಿರ ರಾಕ್ಷಸನಿದ್ದಾನಲ್ಲಾ! (3)
4.ದೊಡ್ಡ ನಗಾರಿ ಇಲ್ಲಿದೆ (4)
6.ಸರಕ್ಕನೆ ಧರಿಸಿದ ಮಾಲೆ (2)
8.ಮಂಕ ಹಿಡಿದಿರುವ ಕಪ್ಪೆ (3)
9.ಅರಣ್ಯ ರಕ್ಷಕನಿವನು (5)
11.ದನಕ್ಕಾಗಿ ನಡೆದ ಕಾಳಗ (3)
13.ನೆನಪಲ್ಲೇ ಇರುವ ಕಾರಣ (2)
15.ತಪ್ಪನ್ನು ಮನ್ನಿಸುವಿಕೆ (4)
17.ಒಂದು ಬಗೆಯ ಸಿಡುಬು ರೋಗ (3)
18.ಬೊಂಬೆ ಮೊದಲಾದ ಕೆತ್ತನೆ ಕೆಲಸ ಮಾಡುವವನು (4)

ಮೇಲಿಂದ ಕೆಳಕ್ಕೆ

1.ಅರಸುವಾಗ ರಾಜ ಕಾಣಿಸಿದನಲ್ಲಾ! (3)
2.ಮಧುರ ಫಲ ನೀಡುವ ವೃಕ್ಷ (2)
3.ಸ್ವಲ್ಪಮಾತ್ರ ತಿಳಿದಿರುವವನು (3)
5.ಗುಣಲಬ್ಧ ಗೊತ್ತಿರದ ಜಿಪುಣ! (3)
7.ರಸ ಒಸರುವ ಜಿಹ್ವೆ (3)
8.ಮಂಕರಿ ಹೊತ್ತಿರುವ ದಡ್ಡ ಇಲ್ಲಿದ್ದಾನೆ (2)
9.ಯೌವ್ವನದಲ್ಲಿ ನೋಡಿರುವ ಕಾಡು (2)
10.ಈಕೆ ಸ್ತ್ರೀ (3)
11.ಕಕ್ಷದಲ್ಲಿ ದೊರೆತಿರುವ ಅನುಗ್ರಹ (3)
12.ಈತ ಕಬ್ಬಿಣದ ಕೆಲಸಗಾರ (3)
14.ಕೊನೆಗೆ ಬೆಲೆಯಿದ್ದಾಗ ಮಡಿಕೆ ಕಾಣುವುದೇ? (3)
16.ನಡುಗುವವನ ನೋಡಿಯೇ ಈ ಮಂದಹಾಸ! (2)



5744ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿಪ್ರಲಾಪ 3.ಹಲುಬೆ 5.ಗಣಪ 7.ಗಲಾಟೆ 8.ವಿಮಾನಯಾನ 11.ಗುಲಾಬಿ 12.ಕಲಭ 15.ಕಲ್ಯಾಣಿ 16.ವಿಚ್ಛೇದನ

ಮೇಲಿಂದ ಕೆಳಕ್ಕೆ: 1.ವಿಯೋಗ 2.ಪಕ್ಷ 3.ಹರಟೆ 4.ಬೆಸುಗೆ 6.ಪಲ್ಲವಿ 7.ಗಗನಚುಂಬಿ 9.ನಡುಕ 10.ದೈಹಿಕ 11.ಗುರಾಣಿ 13.ಭವನ 14.ಭವಿ

ಸುಡೊಕು 6130

	9	4	1				8	
						5		9
8		3			9		1	
3		9	5		1			
	6						4	
5		1	6		8			2
	7			3		2		4
4		5					6	
	8		4	6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6129 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ಬ್ರಿಟನ್ ವಿಪಕ್ಷದ ನಾಯಕತ್ವ: ಪ್ರೀತಿ ಪಟೇಲ್ ಸ್ಪರ್ಧೆ ಸಾಧ್ಯತೆ


ಪ್ರೀತಿ ಪಟೇಲ್

ಲಂಡನ್ (ಪಿಟಿಐ): ಬ್ರಿಟನ್‌ನ ಮಾಜಿ ಗೃಹ ಕಾರ್ಯದರ್ಶಿ ಪ್ರೀತಿ ಪಟೇಲ್ ಅವರು ಹೌಸ್ ಆಫ್ ಕಾಮನ್ಸ್‌ನಲ್ಲಿ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಸ್ಪರ್ಧಿಸುವ ಸಾಧ್ಯತೆಯಿದೆ. ಈ ಮೂಲಕ ಅವರು ಕನ್ಸರ್ವೇಟಿವ್ ಪಕ್ಷದಲ್ಲಿ ರಿಷಿ ಸುನಕ್ ಅವರ ಉತ್ತರಾಧಿಕಾರಿಯಾಗಲು ಯತ್ನಿಸುತ್ತಿದ್ದಾರೆ.

ಎಸೆಕ್ಸ್‌ನ ವಿಥಮ್ ಕ್ಷೇತ್ರದಲ್ಲಿ ಜಯ ಸಾಧಿಸಿ ಸಂಸತ್ತಿನ ಸದಸ್ಯರಾಗಿರುವ 52 ವರ್ಷದ ಪ್ರೀತಿ ಪಟೇಲ್ ಭಾರತದ ಮೂಲದವರು.

ಪ್ರೀತಿ ಅವರ ಪೋಷಕರು ಗುಜರಾತಿ ಮತ್ತು ಉಗಾಂಡಾ ಮೂಲದವರು. ಅವರು ಥೆರೆಸಾ ಮೇ ಮತ್ತು ಬೋರಿಸ್ ಜಾನ್ಸನ್ ಅವರ ಸಂಪುಟದಲ್ಲಿ ಅಂತರರಾಷ್ಟ್ರೀಯ ಅಭಿವೃದ್ಧಿ ಕಾರ್ಯದರ್ಶಿ ಮತ್ತು ಗೃಹ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಅವರು ರಿಷಿ ಸುನಕ್ ಅವರ ಸರ್ಕಾರದ ತೆರಿಗೆ ನೀತಿಗಳ ವಿರುದ್ಧ ಆಗಾಗ್ಗೆ ಟೀಕೆಗಳನ್ನು ಮಾಡುತ್ತಿದ್ದರು.

ಪ್ರೀತಿ ಅವರು ಈ ಸ್ಥಾನಕ್ಕೆ ಸ್ಪರ್ಧಿಸಿದರೆ, ಅವರು ಭಾರತೀಯ ಮೂಲದ ಸುಯೆಲ್ಲಾ ಬ್ರೇವರ್‌ಮನ್ ಮತ್ತು ರಾಬರ್ಟ್ ಜೆನ್ರಿಕ್ ಸೇರಿದಂತೆ ಇತರ ನಾಯಕರಿಂದ ಸ್ಪರ್ಧೆ ಎದುರಿಸಬೇಕಾಗುವ ಸಾಧ್ಯತೆಗಳಿವೆ.

ಉಗ್ರರ ದಾಳಿ: 6 ಮಂದಿ ಸಾವು

ದುಬೈ/ ಮಸ್ಕತ್ (ಪಿಟಿಐ): ಒಮಾನ್ ರಾಜಧಾನಿ ಮಸ್ಕತ್‌ನಲ್ಲಿರುವ ಶಿಯಾ ಮುಸ್ಲಿಂ ಮಸೀದಿ ಬಳಿ ಸೋಮವಾರ ರಾತ್ರಿ ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಒಬ್ಬ ಭಾರತೀಯ ಸೇರಿ ಆರು ಮಂದಿ ಮೃತಪಟ್ಟಿದ್ದಾರೆ.

ಈ ಘಟನೆಯಲ್ಲಿ ಒಬ್ಬ ಪೊಲೀಸ್ ಹಾಗೂ ಪಾಕಿಸ್ತಾನದ ನಾಲ್ವರು ಮೃತಪಟ್ಟಿದ್ದು, 28 ಮಂದಿ ಗಾಯಗೊಂಡಿದ್ದಾರೆ. ಈ ವೇಳೆ ಪ್ರತಿದಾಳಿ ನಡೆಸಿದ ಭದ್ರತಾ ಪಡೆಗಳು ಮೂವರು ಉಗ್ರರನ್ನು ಸದೆಬಡೆದಿವೆ ಎಂದು ತಿಳಿದುಬಂದಿದೆ.

ಮೂಲ ಸೌಕರ್ಯ ವಲಯದಲ್ಲಿ ಹೂಡಿಕೆ ವರದಾನ

ಎಲ್‌ಐಸಿ ಶೇ 79ರಷ್ಟು ಗಳಿಕೆ

ಮುಂಬೈ (ಪಿಟಿಐ): ದೇಶದ ಮೂಲ ಸೌಕರ್ಯ ವಲಯದ ಷೇರುಗಳಲ್ಲಿನ ಹೂಡಿಕೆಯು ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಪಾಲಿಗೆ ವರದಾನವಾಗಿದೆ. ಒಂದು ವರ್ಷದ ಅವಧಿಯಲ್ಲಿ ನಿಗಮದ ಷೇರಿನ ಮೌಲ್ಯದಲ್ಲಿ ಶೇ 79ರಷ್ಟು ಏರಿಕೆಯಾಗಿರುವುದೇ ಇದಕ್ಕೆ ಸಾಕ್ಷಿ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಎಸ್‌ಬಿಐ ಲೈಫ್ ಮತ್ತು ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಕಂಪನಿಯು ಮಾಹಿತಿ ತಂತ್ರಜ್ಞಾನ, ಗ್ರಾಹಕ, ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ವಿಮೆ (ಬಿಎಫ್‌ಎಸ್‌ಐ) ವಲಯಗಳಲ್ಲಿ ಹೆಚ್ಚು ಹೂಡಿಕೆ ಮಾಡಿವೆ. ಆದರೆ, ಎಲ್‌ಐಸಿ ದೇಶದ ಅಭಿವೃದ್ಧಿಗೆ ಪೂರಕವಾದ ಮೂಲ ಸೌಕರ್ಯ ವಲಯದಲ್ಲಿ ಹೆಚ್ಚಿನ ಬಂಡವಾಳ ತೊಡಗಿಸಿದೆ ಎಂದು ಹೇಳಿದ್ದಾರೆ.

ಕಳೆದ ವರ್ಷದ ಜೂನ್ 18ರಂದು



ಎಲ್‌ಐಸಿಯ ಪ್ರತಿ ಷೇರಿನ ಬೆಲೆಯು ₹620 ಇತ್ತು. ಮಂಗಳವಾರದ ವಹಿವಾಟಿನ ಅಂತ್ಯಕ್ಕೆ ₹1,109ಕ್ಕೆ ತಲುಪಿದೆ ಎಂದು ಷೇರುಪೇಟೆಯ ಅಂಕಿಅಂಶ ತಿಳಿಸಿದೆ.

ಎಚ್‌ಡಿಎಫ್‌ಸಿ ಲೈಫ್ ಕಂಪನಿಯ ಷೇರಿನ ಮೌಲ್ಯ ಇಳಿಕೆಯಾಗಿದೆ. ವರ್ಷದ ಹಿಂದೆ ಪ್ರತಿ ಷೇರಿಗೆ ₹666 ಇತ್ತು. ಈಗ ₹646ಕ್ಕೆ ಕುಸಿದಿದೆ. ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶುರೆನ್ಸ್ ಕಂಪನಿಯ ಷೇರಿನ ಮೌಲ್ಯವು ಶೇ 12ರಷ್ಟು ಏರಿಕೆಯಾಗಿದೆ. ಕಳೆದ ವರ್ಷದ ಪ್ರತಿ ಷೇರಿನ ಬೆಲೆ ₹582 ಇತ್ತು. ಸದ್ಯ ₹654ಕ್ಕೆ ತಲುಪಿದೆ.

ಮುಖ್ಯಾಂಶಗಳು
- ಎಲ್‌ಐಸಿ ಪ್ರತಿ ಷೇರಿನ ಬೆಲೆ ₹1,109ಕ್ಕೆ ಏರಿಕೆ
- ಎಸ್‌ಬಿಐ ಲೈಫ್ ಇನ್ಶುರೆನ್ಸ್ ಷೇರಿನ ಮೌಲ್ಯವು ಶೇ 23ರಷ್ಟು ಹೆಚ್ಚಳ
- ಕೇಂದ್ರ ಸರ್ಕಾರದಿಂದ ಮೂಲ ಸೌಕರ್ಯ ವಲಯದ ಅಭಿವೃದ್ಧಿಗೆ ಒತ್ತು

ಎಸ್‌ಬಿಐ ಲೈಫ್ ಇನ್ಶುರೆನ್ಸ್ ಷೇರಿನ ಮೌಲ್ಯವು ಒಂದು ವರ್ಷದಲ್ಲಿ ಶೇ 23ರಷ್ಟು ಏರಿಕೆಯಾಗಿದೆ. ₹1,314 ಇದ್ದ ಪ್ರತಿ ಷೇರಿನ ಬೆಲೆಯು, ಈಗ ₹1,621ಕ್ಕೆ ತಲುಪಿದೆ.

ಭಾರತದ ಬಹುತೇಕ ವಿಮಾ ಕಂಪನಿಗಳು ಬಿಎಫ್‌ಎಸ್‌ಐ, ಐಟಿ ಮತ್ತು ಗ್ರಾಹಕರ ವಲಯದಲ್ಲಿ ಹೂಡಿಕೆ ಮಾಡುತ್ತವೆ. ಮೂಲ ಸೌಕರ್ಯ ವಲಯದಲ್ಲಿ ಶೇ 8ರಿಂದ 10ರಷ್ಟು ಹೂಡಿಕೆ ಮಾಡುತ್ತವೆ. ಜಾಗತಿಕ ಮಟ್ಟದ ಕಂಪನಿಗಳಿಗೆ ಹೋಲಿಸಿದರೆ ಈ ಮೊತ್ತ ತೀರಾ ಕಡಿಮೆ ಇದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಜಾಗತಿಕ ಮಟ್ಟದ ಅಲಿಯನ್ಸ್, ನಿಪ್ಪನ್ ಲೈಫ್ ಇನ್ಶುರೆನ್ಸ್, ಮೆಟ್‌ಲೈಫ್, ಬರ್ಕ್‌ಷೈರ್ ಹ್ಯಾಥ್‌ವೆ ಸೇರಿ ಹಲವು ವಿಮಾ ಕಂಪನಿಗಳು ಮೂಲ ಸೌಕರ್ಯ ವಲಯದ ಷೇರುಗಳಲ್ಲಿ ಶೇ 15ರಿಂದ 30 ರಷ್ಟು ಹೂಡಿಕೆ ಮಾಡುತ್ತವೆ ಎಂದಿದ್ದಾರೆ.

ಕೇಂದ್ರ ಸರ್ಕಾರವು ದೇಶದ ಮೂಲ ಸೌಕರ್ಯ ವಲಯದ ಅಭಿವೃದ್ಧಿಗೆ ಹೆಚ್ಚು ಬಂಡವಾಳವನ್ನು ವಿನಿಯೋಗಿಸುತ್ತಿದೆ. ಇದರ ಬೆಳವಣಿಗೆಗೆ ಪೂರಕವಾದ ನೀತಿಗಳನ್ನು ಅನುಷ್ಠಾನಗೊಳಿಸುತ್ತಿದೆ. ಇದು ಇತರ ವಲಯಗಳ ಅಭಿವೃದ್ಧಿಗೂ ಸಹಕಾರಿಯಾಗಲಿದೆ ಎಂದು ವಿವರಿಸಿದ್ದಾರೆ.

ಸುದ್ದಿ 2 ನಿಮಿಷ

ಜಿಡಿಪಿ ಶೇ 7ರಷ್ಟು ಪ್ರಗತಿ: ಎಡಿಬಿ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ದೇಶದ ಜಿಡಿಪಿ ಬೆಳವಣಿಗೆ ಕುರಿತ ಮುನ್ನೋಟದಲ್ಲಿ ಯಾವುದೇ ಪರಿಷ್ಕರಣೆ ಮಾಡದೆ ಯಥಾಸ್ಥಿತಿ ಕಾಯ್ದುಕೊಂಡಿದೆ.

ಬುಧವಾರ ಬಿಡುಗಡೆಯಾಗಿರುವ ಜುಲೈ ತಿಂಗಳ ಮುನ್ನೋಟ ವರದಿಯಲ್ಲಿ ಜಿಡಿಪಿಯು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿದೆ. ಏಪ್ರಿಲ್‌ನ ವರದಿಯಲ್ಲೂ ಇಷ್ಟೇ ಬೆಳವಣಿಗೆ ದಾಖಲಿಸಲಿದೆ ಎಂದು ಹೇಳಿತ್ತು.

ಮುಂಗಾರಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಸುರಿಯಲಿದ್ದು, ಕೃಷಿ ಚಟುವಟಿಕೆಗಳು ಚೇತರಿಕೆ ಕಾಣಲಿವೆ. 2025–26ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 7.2ರಷ್ಟು ಪ್ರಗತಿ ಕಾಣಲಿದೆ ಎಂದು ತಿಳಿಸಿದೆ.



2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಆರ್ಥಿಕತೆ ಬೆಳವಣಿಗೆಯು ಶೇ 8.2ರಷ್ಟು ದಾಖಲಾಗಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಸೇವಾ ಚಟುವಟಿಕೆಯ ವಿಸ್ತರಣೆಯು ಸದೃಢವಾಗಿದೆ. ಸೇವಾ ವಲಯದ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಉತ್ತಮವಾಗಿದೆ. ತಯಾರಿಕೆ ಮತ್ತು ಗೃಹ ನಿರ್ಮಾಣ ಚಟುವಟಿಕೆಗಳಿಗೆ ಬೇಡಿಕೆ ಹೆಚ್ಚಿದೆ. ಇದರಿಂದ ಕೈಗಾರಿಕೆಗಳ ಬೆಳವಣಿಗೆಯು ಸದೃಢವಾಗಿರುವ ನಿರೀಕ್ಷೆಯಿದೆ ಎಂದು ಹೇಳಿದೆ.

2024–25ರಲ್ಲಿ ಭಾರತದ ಜಿಡಿಪಿಯು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯು ಹೇಳಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಜಿಡಿಪಿಯು ಶೇ 7.2ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

₹1,120 ಕೋಟಿ ಜಿಎಸ್‌ಟಿ ಬಾಕಿ ನಜಾರಾ ಕಂಪನಿಗೆ ನೋಟಿಸ್

ನವದೆಹಲಿ (ಪಿಟಿಐ): ಗೇಮಿಂಗ್ ಕಂಪನಿ ನಜಾರಾ ಟೆಕ್ನಾಲಜೀಸ್‌ಗೆ ಒಟ್ಟು ₹1,120 ಕೋಟಿ ಜಿಎಸ್‌ಟಿ ಬಾಕಿ ಸಂಬಂಧಿಸಿದಂತೆ ಕೋಲ್ಕತ್ತದ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು ಶೋಕಾಸ್ ನೋಟಿಸ್ ನೀಡಿದೆ.

2017–18ರಿಂದ 2022–23ನೇ ಸಾಲಿನ ಮೌಲ್ಯಮಾಪನ ವರ್ಷಗಳಿಗೆ ಸಂಬಂಧಿಸಿದಂತೆ ಅದರ ಅಂಗಸಂಸ್ಥೆಗಳಾದ ಓಪನ್ ಪ್ಲೇ ಟೆಕ್ನಾಲಜೀಸ್‌ಗೆ ₹845 ಕೋಟಿ ಮತ್ತು ಹಾಲಾಪ್ಲೇ ಟೆಕ್ನಾಲಜೀಸ್‌ಗೆ ₹274 ಕೋಟಿ ತೆರಿಗೆ ಬಾಕಿ ಸಂಬಂಧ ನೋಟಿಸ್ ನೀಡಲಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಈ ನೋಟಿಸ್‌ಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ತೆರಿಗೆ ತಜ್ಞರೊಂದಿಗೆ ಚರ್ಚಿಸಿದ ಬಳಿಕ ಮುಂದಿನ ಕಾನೂನು ಹೋರಾಟ ಕುರಿತು ನಿರ್ಧರಿಸಲಾಗುವುದು ಎಂದು ತಿಳಿಸಿದೆ.

ಮಹಾರಾಷ್ಟ್ರದಲ್ಲಿ ನಿರಂತರ ಮಳೆ: ಮಾರುಕಟ್ಟೆಯಲ್ಲಿ ಕುಸಿದ ಆವಕ

ಶತಕ ಬಾರಿಸಿದ ಟೊಮೆಟೊ ದರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರದ ಚಿಲ್ಲರೆ ಮಾರುಕಟ್ಟೆಗಳಲ್ಲಿ ಟೊಮೆಟೊ ಧಾರಣೆಯು ಏಕಾಏಕಿ ಏರಿಕೆಯಾಗಿದೆ. ಪ್ರತಿ ಕೆ.ಜಿಗೆ ₹80ರಿಂದ ₹100ರ ವರೆಗೆ ಮಾರಾಟವಾಗುತ್ತಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಿದೆ.

‘ಎರಡು ವಾರಗಳ ಹಿಂದೆ 10 ಕೆ.ಜಿಯ ಒಂದು ಬುಟ್ಟಿಗೆ ಸಗಟು ದರ ₹600 ಇತ್ತು. ಬುಧವಾರ ಬೆಳಿಗ್ಗೆ ಒಂದು ಬುಟ್ಟಿಯ ಬೆಲೆ ₹1,000ಕ್ಕೆ ತಲುಪಿದೆ. ನಾವು ಕೆ.ಜಿ ಟೊಮೆಟೊವನ್ನು ₹100ಕ್ಕೆ ಮಾರಿದರೂ ನಷ್ಟವಾಗುತ್ತದೆ’ ಎಂದು ವ್ಯಾಪಾರಿಗಳು ಹೇಳುತ್ತಾರೆ.

‘ಸದ್ಯ ಹೋಟೆಲ್ ಮಾಲೀಕರನ್ನು ಹೊರತುಪಡಿಸಿದರೆ ಬೇರೆ ಗ್ರಾಹಕರು ಟೊಮೆಟೊ ಖರೀದಿಸಲು ಹೆಚ್ಚಾಗಿ ಮುಂದೆ ಬರುತ್ತಿಲ್ಲ. ಹಣ್ಣುಗಳು ಕೊಳೆತು ನಷ್ಟವಾಗುತ್ತದೆ’ ಎಂದು ವರ್ತಕ ಸುರೇಶ ಹೇಳಿದರು.

‘ಎರಡು ದಿನಗಳ ಹಿಂದೆ ಕೆ.ಜಿಗೆ ₹80ರಂತೆ ಮಾರಿದ್ದೇನೆ. ಬುಧವಾರ ದರವು ₹100ಕ್ಕೆ ಮುಟ್ಟಿದೆ. ಆದರೆ, ಮಹಿಳೆಯರು ಚೌಕಾಶಿ ಮಾಡಿ ₹80ಕ್ಕೆ ಖರೀದಿಸುತ್ತಾರೆ’ ಎಂದರು.

‘ಜಿಲ್ಲೆಯ ಹಿಡಕಲ್ ಜಲಾಶಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಹೆಚ್ಚಾಗಿ ಟೊಮೆಟೊ ಬೆಳೆಯಲಾಗುತ್ತದೆ. ರೈತರು ಟೊಮೆಟೊವನ್ನು ಗೋವಾಗೆ ಪೂರೈಸುತ್ತಾರೆ’ ಎಂದು ವರ್ತಕ ಇಬ್ರಾಹಿಂ ಹೇಳಿದರು.

‘ಮಹಾರಾಷ್ಟ್ರದ ಕರಾಡಾ, ನಾಸಿಕ್, ಸತಾರಾ, ಕೊಲ್ಹಾಪುರ ಮತ್ತಿತರ ಪ್ರದೇಶಗಳಿಂದ ಪೂರೈಕೆಯಾಗುವ ಟೊಮೆಟೊವನ್ನು ನಾವು ಖರೀದಿಸುತ್ತೇವೆ. ಮಹಾರಾಷ್ಟ್ರದಲ್ಲಿ ಅಧಿಕ ಮಳೆಯಿಂದಾಗಿ ಟೊಮೆಟೊ ಆವಕ ಕಡಿಮೆಯಾಗಿದೆ. ಇದರಿಂದ ದರ ಹೆಚ್ಚಾಗಿದೆ’ ಎಂದರು.

‘ಟೊಮೆಟೊ ಬದಲಾಗಿ ಹುಣಸೆಹಣ್ಣು, ನಿಂಬೆಹಣ್ಣು ಬಳಸಿ ಅಡುಗೆ ಮಾಡಬಹುದು. ಆದರೆ, ಸಾಂಬಾರು ತಯಾರಿಕೆಗೆ ಟೊಮೆಟೊ ಬೇಕೇ ಬೇಕು’ ಎಂದು ಗೃಹಿಣಿ ರೇಣುಕಾ ತೋಟಗಿ ಪ್ರತಿಕ್ರಿಯಿಸಿದರು.


ಬೆಳಗಾವಿ ಮಾರುಕಟ್ಟೆಯಲ್ಲಿ ಬುಧವಾರ ಟೊಮೆಟೊ ಖರೀದಿಸಿದ ಮಹಿಳೆಯರು
ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ₹400 ಕೋಟಿ ಬಳಕೆ

ಒಂದನೇ ಪುಟದಿಂದ...

ನವೀನ ಕಟ್ಟಡ ನಿರ್ಮಾಣ ಸಾಮಗ್ರಿಗಳು (ಇನ್ನೊವೇಟಿವ್ ಬಿಲ್ಡಿಂಗ್ ಮೆಟೀರಿಯಲ್ಸ್) ಹಾಗೂ ಅಚ್ಚುಹಾಕಿದ ತಂತ್ರಜ್ಞಾನಗಳನ್ನು (ಪ್ರೀಕಾಸ್ಟ್ ಟೆಕ್ನಾಲಜಿ) ಒಳಗೊಂಡ ಕಾಮಗಾರಿಗಳಿಗೆ ₹2 ಕೋಟಿ ಗರಿಷ್ಠ ಮಿತಿಯವರೆಗೆ ಕೆಟಿಪಿಪಿ ಕಾಯ್ದೆ ಅಡಿ 4(ಜಿ) ವಿನಾಯಿತಿ ಪಡೆಯಲು ಆರ್ಥಿಕ ಇಲಾಖೆ ಹ್ಯಾಬಿಟೇಟ್ ಕೇಂದ್ರಕ್ಕೆ ಅನುಮೋದನೆ ನೀಡಿದೆ. ಆದರೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ವಸತಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ಹಲವು ಇಲಾಖೆಗಳಿಂದ 2023–24ನೇ ಸಾಲಿನಲ್ಲಿ ₹400 ಕೋಟಿಗೂ ಅಧಿಕ ಮೊತ್ತ ಪಡೆದು, ಟೆಂಡರ್‌ಗಳನ್ನು ಕರೆಯದೆ ಕಾಮಗಾರಿಗಳನ್ನು ಅನುಷ್ಠಾನ ಮಾಡಿದೆ.

ವಿನಾಯಿತಿ ಎರಡಕ್ಕೆ, ಬಳಕೆ ಹತ್ತಾರು: ಆರ್ಥಿಕ ಇಲಾಖೆ ನವೀನ ಕಟ್ಟಡ ಸಾಮಗ್ರಿಗಳು ಹಾಗೂ ಅಚ್ಚುಹಾಕಿದ ತಂತ್ರಜ್ಞಾನಗಳನ್ನು ಒಳಗೊಂಡ ಕಾಮಗಾರಿಗಳನ್ನು ಕೈಗೊಳ್ಳಲು ಹ್ಯಾಬಿಟೇಟ್ ಕೇಂದ್ರಕ್ಕೆ ಅನುಮತಿ ನೀಡಿದೆ. ಆದರೆ, ಡಾಂಬರು ರಸ್ತೆ, ಕಾಂಕ್ರೀಟ್ ರಸ್ತೆಗಳ ನಿರ್ಮಾಣ, ಶಾಲಾ– ಕಾಲೇಜುಗಳಲ್ಲಿ ಸ್ಮಾರ್ಟ್ ತರಗತಿಗಳ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ಘಟಕಗಳ ಪೂರೈಕೆ ಸೇರಿದಂತೆ ಹತ್ತು ಹಲವು ಕಾಮಗಾರಿ, ಕಾರ್ಯಗಳನ್ನು ಕೈಗೊಂಡಿದೆ.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಸರ್ಕಾರ ಒದಗಿಸಿದ್ದ ₹3 ಸಾವಿರ ಕೋಟಿ ಅನುದಾನದಲ್ಲಿ ₹150 ಕೋಟಿ ವಿವೇಚನಾ ನಿಧಿಗೆ ಮೀಸಲಿಡಲಾಗಿತ್ತು. ಈ ಅನುದಾನದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಿಗೆ ಶುದ್ಧ ಕುಡಿಯುವ ನೀರಿನ ಯಂತ್ರಗಳನ್ನು ಪೂರೈಸಲು ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗದ ನಿರ್ದೇಶಕರು ಕಳೆದ ನವೆಂಬರ್‌ನಲ್ಲಿ ಕಾರ್ಯಾದೇಶ ನೀಡಿದ್ದಾರೆ.

₹2 ಕೋಟಿ ಗರಿಷ್ಠ ಮಿತಿಯ ಒಳಗಿನ 4(ಜಿ) ವಿನಾಯಿತಿ ಬಳಸಿಕೊಂಡಿರುವ ಹ್ಯಾಬಿಟೇಟ್ ಕೇಂದ್ರದ ಅಧಿಕಾರಿಗಳು ಪ್ರತಿ ₹1.99 ಕೋಟಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಿ, ಶಾಲೆಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪೂರೈಸಿದ್ದಾರೆ. ಉದಾ: ವಿಜಯನಗರ ಜಿಲ್ಲೆ ಕೂಡ್ಲಿಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 58 ಶಾಲೆಗಳಿಗೆ ₹1.99 ಕೋಟಿ ಮೊತ್ತದ ಒಂದು ಕ್ರಿಯಾ ಯೋಜನೆ ರೂಪಿಸಿ, ಒಟ್ಟು 260 ಶಾಲೆಗಳಿಗೆ ₹8.95 ಕೋಟಿ ಮೊತ್ತದ ಶುದ್ಧ ಕುಡಿಯುವ ನೀರಿನ ಯಂತ್ರಗಳನ್ನು ಪೂರೈಸಿದ್ದಾರೆ. ಹಾಗೆಯೇ, ಸಮಾಜ ಕಲ್ಯಾಣ ಇಲಾಖೆ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗಳ ₹250 ಕೋಟಿ ಅನುದಾನದಲ್ಲಿ ಕೈಗೊಡ ಸ್ಮಾರ್ಟ್ ತರಗತಿ ಸೇರಿದಂತೆ ಇತರೆ ಕಾಮಗಾರಿ ಅನುಷ್ಠಾನದಲ್ಲೂ ಇದೇ ಮಾದರಿ ಅನುಸರಿಸಲಾಗಿದೆ.

ಟ್ರಂಪ್‌ಗೆ ಇರಾನ್‌ನಿಂದ ಬೆದರಿಕೆ

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಕೊಲ್ಲಲು ಇರಾನ್ ಸಂಚು ಹೂಡಿರುವ ವಿಷಯ ತಿಳಿದ ಬೆನ್ನಲ್ಲೇ ಅಮೆರಿಕದ ‘ಸೀಕ್ರೆಟ್ ಸರ್ವೀಸ್’ ವಾರದ ಹಿಂದೆ ಟ್ರಂಪ್ ಅವರ ಭದ್ರತೆಯನ್ನು ಹೆಚ್ಚಿಸಿತ್ತು.

ಆದರೆ, ಪೆನ್ಸಿಲ್ವೇನಿಯಾದ ಬಟ್ಲರ್ ನಗರದಲ್ಲಿ ಟ್ರಂಪ್ ಅವರ ಹತ್ಯೆಗೆ ನಡೆದ ಯತ್ನಕ್ಕೂ ಇರಾನ್ ಮೂಲದ ಬೆದರಿಕೆಗೂ ಸಂಬಂಧ ಇಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ ಎಂದು ಅಮೆರಿಕ ಮಾಧ್ಯಮ ಮಂಗಳವಾರ ವರದಿ ಮಾಡಿದೆ.

ಟ್ರಂಪ್ ಅವರ ಹತ್ಯೆಗೆ ಇರಾನ್ ಯೋಜನೆ ರೂಪಿಸಿದೆ ಎಂಬ ಮಾಹಿತಿಯನ್ನು ಅಮೆರಿಕದ ಗುಪ್ತಚರ ಸಂಸ್ಥೆಗಳು ಪಡೆದಿವೆ. ಈ ಕಾರಣದಿಂದಲೇ ಟ್ರಂಪ್ ಅವರಿಗೆ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ.

2020ರಲ್ಲಿ ಇರಾನ್‌ನ ಇಸ್ಲಾಮಿಕ್ ರೆವೆಲ್ಯೂಷನರಿ ಗಾರ್ಡ್‌ನ ಕಮಾಂಡರ್ ಖಾಸಿಮ್ ಸುಲೈಮಾನಿ ಅವರ ಹತ್ಯೆಗೆ ಪ್ರತೀಕಾರವಾಗಿ ಟ್ರಂಪ್ ವಿರುದ್ಧ ಸೇಡು ತೀರಿಸಿಕೊಳ್ಳಲು ಇರಾನ್ ಬಯಸಿದೆ ಎಂಬ ಮಾಹಿತಿ ಗುಪ್ತಚರಕ್ಕೆ ದೊರೆತಿದ್ದು, ಆ ಬಗ್ಗೆ ನಿಗಾವಹಿಸಲಾ ಗಿದೆ ಎಂದು ಅಮೆರಿಕ ರಾಷ್ಟ್ರೀಯ ಭದ್ರತಾ ಮಂಡಳಿ ತಿಳಿಸಿದೆ.

ನಮ್ಮ ಪಾತ್ರವಿಲ್ಲ: ಇರಾನ್

ಟೆಹ್ರಾನ್ (ಎಪಿ): ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹತ್ಯೆಯ ಯತ್ನದಲ್ಲಿ ತನ್ನ ಯಾವುದೇ ಪಾತ್ರ ಇಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ.

ಟ್ರಂಪ್ ಅವರ ಮೇಲಿನ ದಾಳಿಗೆ ಸಂಬಂಧಿಸಿದಂತೆ ಇರಾನ್ ವಿರುದ್ಧ ಕೇಳಿಬಂದಿರುವ ಆರೋಪಗಳನ್ನು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ನಾಸೀರ್ ಕಣಾನಿ ತಳ್ಳಿಹಾಕಿದ್ದಾರೆ.

‘ಹುತಾತ್ಮ ಜನರಲ್ ಖಾಸಿಂ ಸೊಲೈಮಾನಿ ಅವರ ಹತ್ಯೆಯ ಅಪರಾಧಕ್ಕೆ ಸಂಬಂಧಿಸಿದಂತೆ ಟ್ರಂಪ್ ವಿರುದ್ಧ ಇರಾನ್ ಕಾನೂನು ಕ್ರಮ ಕೈಗೊಳ್ಳಲು ನಿರ್ಧರಿಸಿದೆ’ ಎಂದು ಕಣಾನಿ ಹೇಳಿದ್ದಾರೆ.

ಇರಾನ್ ವಿರುದ್ಧದ ಆರೋಪಗಳು ಆಧಾರರಹಿತ ಮತ್ತು ರಾಜಕೀಯ ಪ್ರೇರಿತ ಎಂದು ಅಮೆರಿಕದಲ್ಲಿರುವ ಇರಾನ್ ರಾಯಭಾರಿ ಅಮೀರ್ ಸಯೀದ್ ಇರಾವಾನಿ ಪ್ರತಿಕ್ರಿಯಿಸಿದ್ದಾರೆ.

ಟ್ರಂಪ್ ಸ್ಪರ್ಧೆಗೆ ನಿಕ್ಕಿ ಹ್ಯಾಲೆ ಬೆಂಬಲ


ಡೊನಾಲ್ಡ್ ಟ್ರಂಪ್

ಮಿಲ್ವಾಕೀ (ಪಿಟಿಐ): ಭಾರತ ಮೂಲದ ಅಮೆರಿಕನ್ ಮಹಿಳೆ, ರಿಪಬ್ಲಿಕನ್ ಪಕ್ಷದ ನಾಯಕಿ ನಿಕ್ಕಿ ಹ್ಯಾಲೆ ಅಧ್ಯಕ್ಷ ಸ್ಥಾನದ ಚುನಾವಣೆಗೆ ಡೊನಾಲ್ಡ್ ಟ್ರಂಪ್‌ರನ್ನು ಪಕ್ಷದ ಅಭ್ಯರ್ಥಿಯಾಗಿ ಅನುಮೋದಿಸಿದ್ದಾರೆ.

ಪ್ರಾಥಮಿಕ ಸುತ್ತಿನಲ್ಲಿ ಪ್ರಬಲ ವಿರೋಧಿಯಾಗಿದ್ದ ನಿಕ್ಕಿ ಹ್ಯಾಲೆ ಈಗ ಒಗ್ಗಟ್ಟಿನ ಸಂದೇಶ ರವಾನಿಸಿದ್ದಾರೆ. 52 ವರ್ಷದ ನಿಕ್ಕಿ ಅವರೂ ಅಧ್ಯಕ್ಷ ಸ್ಥಾನದ ಸ್ಪರ್ಧಾಕಾಂಕ್ಷಿಯಾಗಿದ್ದರು. ಆದರೆ, ಕಳೆದ ವಾರ ಒಗ್ಗಟ್ಟಿನ ಮಂತ್ರ ಜಪಿಸಿದ್ದ ಅವರು ತನ್ನ 97 ಬೆಂಬಲಿಗರಿಗೂ ಟ್ರಂಪ್ ಅವರನ್ನೇ ಬೆಂಬಲಿಸುವಂತೆ ಸಲಹೆ ಮಾಡಿದ್ದರು.

ಇನ್‌ಸ್ಟಾಗ್ರಾಂ ಮೂಲಕ ತಲಾಖ್ ನೀಡಿದ ದುಬೈ ರಾಜಕುಮಾರಿ

ದುಬೈ: ದುಬೈ ರಾಜಕುಮಾರಿ ಶೈಖಾ ಮಹ್ರಾ ಬಿನ್ ಮೊಹಮ್ಮದ್ ಬಿನ್ ರಶೀದ್ ಅಲ್ ಮುಕ್ತುಮ್ ಅವರು ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂ ಮೂಲಕವೇ ಪತಿ ಶೇಖ್ ಮನಾ ಬಿನ್ ಮೊಹಮ್ಮದ್ ಬಿನ್ ರಶೀದ್ ಬಿನ್ ಮನಾ ಅಲ್ ಮುಕ್ತುಮ್ ಅವರಿಗೆ ವಿಚ್ಛೇದನ ನೀಡಿದ್ದಾರೆ.

ದಂಪತಿಗೆ ಕಳೆದ ಎರಡು ತಿಂಗಳ ಹಿಂದೆಯಷ್ಟೇ ಮಗು ಜನಿಸಿತ್ತು.

ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಹಂಚಿಕೊಂಡಿರುವ ಶೈಖಾ, ‘ಪ್ರೀತಿಯ ಪತಿ, ನೀವು ಬೇರೊಬ್ಬ ಸಂಗಾತಿ ಜತೆ ಇರುವುದರಿಂದ ನಾನು ನಿಮಗೆ ವಿಚ್ಛೇದನ ನೀಡುವುದಾಗಿ ಘೋಷಿಸುತ್ತಿದ್ದೇನೆ’ ಎಂದು ಮೂರು ಬಾರಿ ಘೋಷಿಸಿ, ತಲಾಖ್ ನೀಡಿದ್ದಾರೆ.

ಕೊನೆಯಲ್ಲಿ ‘ಇಂತಿ ನಿಮ್ಮ ಮಾಜಿ ಪತ್ನಿ’ ಎಂದು ಬರೆದು ಶೇಖ್ ಅವರಿಗೆ ಶುಭ ಕೋರಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಶೇಖಾ ಮಹ್ರಾ ಮತ್ತು ಉದ್ಯಮಿ ಶೇಖ್ ಮಾನಾ ಅವರ ವಿವಾಹವು ಕಳೆದ ವರ್ಷ ಮೇ ತಿಂಗಳಲ್ಲಿ ನಡೆದಿತ್ತು.

ದಂಪತಿಯ ವಿಚ್ಛೇದನದ ಸುದ್ದಿಯು ಸಾಮಾಜಿಕ ಜಾಲತಾಣದಲ್ಲಿ ಮಿಂಚಿನಂತೆ ಹರಡಿದ ಬೆನ್ನಲ್ಲೇ ಇಬ್ಬರೂ ಸಾಮಾಜಿಕ ಜಾಲತಾಣದಲ್ಲಿ ಜೊತೆಯಾಗಿರುವ ಫೋಟೊಗಳನ್ನು ಡಿಲೀಟ್ ಮಾಡಿದ್ದಾರೆ ಎಂದು ವರದಿಯಾಗಿದೆ.

ದುಬೈ ಆಡಳಿತಗಾರ ಮತ್ತು ಯುಎಇ ಪ್ರಧಾನಿಯ ಪುತ್ರಿಯಾಗಿರುವ ಶೇಖ್ ಮಹ್ರಾ ಅವರು ಯುಎಇನಲ್ಲಿ ವಕೀಲರಾಗಿದ್ದಾರೆ.

ಮುಂಬೈ ಧಾರಣೆ

ಶೇಂಗಾ

17-07-2024

ಜಾವಾ 70/80(ಹೊಸ)	11700-11800
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	9500-9600
ದಪ್ಪ ಗುಜರಾತ್(ಹೊಸ)	10300-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1560)
ಒಂದು ವಾರದ ಡೆಲಿವರಿ	1575 (1555)
ಸೋಯಾ ಕಚ್ಚಾ	915 (915)
ಪಾಮ್ ವಾರದ ಡೆಲಿವರಿ	908 (910)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹74,000 (73,200)
ಬೆಳ್ಳಿ ಕೆ.ಜಿ ₹92,500 (92,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹204.50
ಆರ್‌ಎಸ್‌ಎಸ್-5 ₹199
ಗುಡ್ ಲಾಟ್ ₹186
(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹222-453
ದ್ವಿತಳಿ (ಬಿ.ವಿ) ₹305-566

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹570
12 ಕ್ಕೆ ₹75
ಮೈಸೂರು
100ಕ್ಕೆ ₹573

ಮುಳುಗಿದ ತೈಲ ಟ್ಯಾಂಕರ್: 9 ಮಂದಿ ರಕ್ಷಣೆ

ದುಬೈ,ಮಸ್ಕತ್, ನವದೆಹಲಿ (ಪಿಟಿಐ, ಎಎಫ್‌ಪಿ): ಒಮಾನ್‌ನ ಕರಾವಳಿ ಪ್ರದೇಶದಲ್ಲಿ ಮಗುಚಿಬಿದ್ದ ತೈಲ ಟ್ಯಾಂಕರ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದ ಒಂಬತ್ತು ಮಂದಿಯನ್ನು ರಕ್ಷಿಸಲಾಗಿದೆ ಎಂದು ಭಾರತೀಯ ನೌಕಾ ಪಡೆ ತಿಳಿಸಿದೆ.

ತೈಲ ಟ್ಯಾಂಕರ್‌ನಲ್ಲಿದ್ದ 13 ಭಾರತೀಯರು ಸೇರಿದಂತೆ ಒಟ್ಟಾರೆ 16 ಮಂದಿ ನಾಪತ್ತೆಯಾಗಿದ್ದರು. ನಂತರ, ನೌಕಾಪಡೆ ಕಾರ್ಯಾಚರಣೆ ನಡೆಸಿ ಎಂಟು ಭಾರತೀಯರು ಮತ್ತು ಒಬ್ಬ ಶ್ರೀಲಂಕಾದ ಸಿಬ್ಬಂದಿಯನ್ನು ರಕ್ಷಿಸಿದ್ದಾರೆ.

ಹವಾಮಾನ ವೈಪರೀತ್ಯದ ಸವಾಲುಗಳ ನಡುವೆಯೂ ರಕ್ಷಣಾ ಕಾರ್ಯಾಚರಣೆಯನ್ನು ಮುಂದುವರಿಸಲಾಗಿದೆ ಎಂದು ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ.

‘ಪ್ರೆಸ್ಟಿಜ್ ಫಾಲ್ಕೊನ್’ ತೈಲ ಟ್ಯಾಂಕರ್‌ನಲ್ಲಿ 13 ಭಾರತೀಯರು, ಮೂವರು ಶ್ರೀಲಂಕಾ ಮೂಲದ ಸಿಬ್ಬಂದಿ ಇದ್ದರು ಸರ್ಕಾರ ತಿಳಿಸಿದೆ.

ಈ ತೈಲ ತುಂಬಿದ ಟ್ಯಾಂಕರ್ ಹಡಗು ದುಬೈನ ಹಮ್ರಿಯಾ ಬಂದರು ಪ್ರದೇಶದಿಂದ ಏಡನ್‌ನ ಯೆಮೆನಿ ಬಂದರು ನಗರಕ್ಕೆ ತೆರಳುತ್ತಿತ್ತು ಎಂದು ತಿಳಿದುಬಂದಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೂಚನೆ

ಸಾರ್ವಜನಿಕ ಸ್ಥಳದಲ್ಲಿ ನಿತ್ಯ 5 ತಾಸು ಗಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಪೊಲೀಸರು ಜನರಿಗೆ ಕಾಣುತ್ತಿರುವುದು ತೀರಾ ಕಡಿಮೆ ಆಗಿದ್ದು, ಎಲ್ಲ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಪ್ರತಿ ಬೆಳಿಗ್ಗೆ 9ರಿಂದ 11ರವರೆಗೆ ಹಾಗೂ ಸಂಜೆ 6ರಿಂದ ರಾತ್ರಿ 9ರವರೆಗೆ ಪೊಲೀಸ್ ಸಮವಸ್ತ್ರದಲ್ಲಿ ನಾಗರಿಕರಿಗೆ ಕಾಣುವಂತೆ ಗಸ್ತು ನಡೆಸಬೇಕು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಆದೇಶಿಸಿದ್ದಾರೆ.

‘ಎಲ್ಲ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಬೆಂಗಳೂರು ಸೇರಿದಂತೆ ಇತರ ನಗರಗಳ ಪೊಲೀಸ್ ಕಮಿಷನರೇಟ್‌ಗಳ ವ್ಯಾಪ್ತಿಗೆ ಬರುವ ಡಿಸಿಪಿಗಳು ಪ್ರತಿದಿನ ಕನಿಷ್ಠ ಒಂದು ಪೊಲೀಸ್ ಠಾಣೆಗೆ ಭೇಟಿ ನೀಡಬೇಕು’ ಎಂದು ಸೂಚಿಸಿದ್ದಾರೆ.


ಅಲೋಕ್ ಮೋಹನ್

‘ಎಲ್ಲ ವಲಯದ ಐಜಿಪಿಗಳು, ಡಿಐಜಿಪಿಗಳು ಹಾಗೂ ಹೆಚ್ಚುವರಿ ಪೊಲೀಸ್ ಆಯುಕ್ತರೂ ತಮ್ಮ ವ್ಯಾಪ್ತಿಯ ಠಾಣೆಗಳಿಗೆ ಭೇಟಿ ನೀಡಬೇಕು. ಭೇಟಿ ಸಂದರ್ಭದಲ್ಲಿ ಕಾರ್ಯ ನಿರ್ವಹಣೆ ಪರಿಶೀಲಿಸಬೇಕು. ಅಲ್ಲದೇ ಪ್ರಮುಖ ಅಪರಾಧ ಪ್ರಕರಣಗಳು ನಡೆದಾಗ ಸ್ಥಳಕ್ಕೆ ಭೇಟಿ ನೀಡಬೇಕು’ ಎಂದು ಸೂಚಿಸಿದ್ದಾರೆ.

‘ಕ್ಲಬ್‌ಗಳು, ಜೂಜು, ಮಟ್ಕಾ ಸೇರಿದಂತೆ ಎಲ್ಲ ಸಂಘಟಿತ ಅಪರಾಧಗಳನ್ನು ತಕ್ಷಣವೇ ನಿಲ್ಲಿಸಬೇಕು. ಆರೋಪಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು’ ಎಂದು ಆದೇಶಿಸಿದ್ದಾರೆ.

‘ಡ್ರಗ್ಸ್ ಹಾಗೂ ಮಾದಕ ದ್ರವ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಶಾಲಾ-ಕಾಲೇಜುಗಳಿಗೆ ಭೇಟಿ ನಿಡಬೇಕು. ಎಲ್ಲ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ‘ಇ-ಬೀಟ್’ ಅಪ್ಲಿಕೇಶನ್ ಸಂಪೂರ್ಣ ನಿರ್ವಹಣೆ ಅರಿತಿರಬೇಕು. ಇ-ಬೀಟ್ ಸೇವೆ ಅನುಷ್ಠಾನಕ್ಕೆ ತರಬೇಕು’ ಎಂದು ಸೂಚಿಸಿದ್ದಾರೆ.

ಹೆದ್ದಾರಿಗಳಲ್ಲಿ ಗಸ್ತು ತಿರುಗುವ ವಾಹನಗಳ ಸಂಖ್ಯೆ ಹೆಚ್ಚಿಸಬೇಕು. ಸಾಮಾಜಿಕ ಮಾಧ್ಯಮದಲ್ಲಿ ನಕಲಿ ಸುದ್ದಿಗಳ ವಿರುದ್ಧ ಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಅಗತ್ಯವಿದ್ದರೆ ಸ್ವಯಂ ಪ್ರೇರಿತ ದೂರು ದಾಖಲಿಸಬೇಕು. ಜಿಲ್ಲಾ ಹಾಗೂ ನಗರಮಟ್ಟದ ಪೊಲೀಸ್ ಠಾಣೆಗಳಲ್ಲಿ ನಿಯಮಿತವಾಗಿ ಶಾಂತಿಸಭೆ ಹಾಗೂ ಜನಸ್ಪಂದನ ಸಭೆ ಆಯೋಜಿಸಬೇಕು. ಎಲ್ಲ ಸಮುದಾಯದ ಜತೆಗೆ ಉತ್ತಮ ಬಾಂಧವ್ಯ ಕಾಪಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

‘ಎಲ್ಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾಣೆಯಾದ ಹೆಣ್ಣುಮಕ್ಕಳ ಹಾಗೂ ಮಹಿಳೆಯರ ಪತ್ತೆ ಕಾರ್ಯಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆ ಕಾರ್ಯ ಚುರುಕುಗೊಳಿಸಬೇಕು. ಕಾರಾಗೃಹಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಬೇಕು’ ಎಂದು ಸೂಚಿಸಿದ್ದಾರೆ.

‘ದ್ವೇಷ ಭಾಷಣ ಹಾಗೂ ಪ್ರಚೋದನಕಾರಿ ಘೋಷಣೆ ಕೂಗುವವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಶಾಲಾ– ಕಾಲೇಜುಗಳ ಎದುರು ಭದ್ರತೆ ಹೆಚ್ಚಿಸಬೇಕು’ ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ.ಪರಮೇಶ್ವರ ಅವರು ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಅಲೋಕ್ ಮೋಹನ್ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಪ್ರಧಾನಿ ಪಡಸಾಲೆಗೆ ಬಿಜೆಪಿ ಬಿಕ್ಕಟ್ಟು

ಉತ್ತರ ಪ್ರದೇಶ: ನಡ್ಡಾ ಜತೆ ಪ್ರತ್ಯೇಕವಾಗಿ ಚರ್ಚೆ ನಡೆಸಿದ ಭೂಪೇಂದ್ರ, ಕೇಶವ ಪ್ರಸಾದ್ ಮೌರ್ಯ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು
- ಉಪ ಚುನಾವಣೆ ನಂತರ ಸಂಘಟನೆಯಲ್ಲಿ ಬದಲಾವಣೆ?
- ಆದಿತ್ಯನಾಥ ಕಾರ್ಯಶೈಲಿಗೆ ಕೆಲವು ಪ್ರಮುಖರ ಅಸಮಾಧಾನ
- ರಾಜೀನಾಮೆಗೆ ಮುಂದಾದ ಅಧ್ಯಕ್ಷ ಚೌಧರಿ

ನವದೆಹಲಿ/ಲಖನೌ: ಉತ್ತರ ಪ್ರದೇಶ ಬಿಜೆಪಿಯಲ್ಲಿ ಅಸಮಾಧಾನ ಭುಗಿಲೆದ್ದಿದ್ದು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಭೂಪೇಂದ್ರ ಸಿಂಗ್ ಚೌಧರಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಪಕ್ಷದ ಸಂಘಟನೆಯ ವಿಚಾರವಾಗಿ ಅವರು ಪ್ರಧಾನಿಯವರಿಗೆ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಚೌಧರಿ ಮತ್ತು ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಮಂಗಳವಾರ ಪ್ರತ್ಯೇಕವಾಗಿ ಭೇಟಿ ಮಾಡಿದ್ದರು. ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಹಿನ್ನಡೆ ಅನುಭವಿಸಿದ ನಂತರ, ಅಲ್ಲಿನ ಬಿಜೆಪಿ ಘಟಕದಲ್ಲಿ ಭಿನ್ನ ದನಿಗಳು ಕೇಳಿಬರುತ್ತಿರುವ ಹೊತ್ತಿನಲ್ಲಿ ಈ ಭೇಟಿ ನಡೆದಿದೆ.

ಮೌರ್ಯ ಅವರು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದಾರೆ ಎಂಬುದು ಪಕ್ಷದ ಬಹುತೇಕರಿಗೆ ಗೊತ್ತಿದೆ. 'ಸಂಘಟನೆಯು ಸರ್ಕಾರಕ್ಕಿಂತಲೂ ದೊಡ್ಡದು, ಸಂಘಟನೆಗಿಂತ ಯಾರೂ ದೊಡ್ಡವರಲ್ಲ' ಎಂದು ಮೌರ್ಯ ಅವರು ಈಚೆಗೆ ಪಕ್ಷದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದುದು ಆದಿತ್ಯನಾಥ ಅವರನ್ನು ಉದ್ದೇಶಿಸಿ ರವಾನಿಸಿದ ಸಂದೇಶ ಎಂದು ಹಲವರು ಅರ್ಥೈಸಿದ್ದರು.

ಆದಿತ್ಯನಾಥ ಹಾಗೂ ನಡ್ಡಾ ಅವರ ಸಮ್ಮುಖದಲ್ಲಿಯೇ ಮೌರ್ಯ ಅವರು ಈ ಮಾತು ಆಡಿದ್ದರು. ಈಗ ಪಕ್ಷದ ವರಿಷ್ಠರು ಮೌರ್ಯ ಹಾಗೂ ಚೌಧರಿ ಅವರ ಜೊತೆ ನೇರವಾಗಿ ಮಾತುಕತೆ ನಡೆಸಿರುವುದು, ಪಕ್ಷದಲ್ಲಿನ ಅಸಮಾಧಾನಗಳನ್ನು ಸರಿಪಡಿಸುವ ಕ್ರಮ ಎನ್ನಲಾಗಿದೆ.

ಆದಿತ್ಯನಾಥ ಅವರ ಕಾರ್ಯಶೈಲಿಯು ಪಕ್ಷವು ಉತ್ತರ ಪ್ರದೇಶದಲ್ಲಿ ಹಿನ್ನಡೆ ಅನುಭವಿಸಿರುವುದಕ್ಕೆ ಒಂದು ಕಾರಣ ಎಂದು ಬಿಜೆಪಿಯ ಹಲವು ಮಂದಿ ಪ್ರಮುಖರು ತಮ್ಮ ಖಾಸಗಿ ಮಾತುಕತೆಗಳಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಆದರೆ, ಆದಿತ್ಯನಾಥ ಅವರು ಜನಪ್ರಿಯ ಮುಖ್ಯಮಂತ್ರಿ, ಅವರು ಪಕ್ಷದ ಹಿಂದುತ್ವ ಕಾರ್ಯಸೂಚಿಯನ್ನು ಬಹಳ ಗಟ್ಟಿಯಾಗಿ ಮುಂದಕ್ಕೆ ಒಯ್ಯುತ್ತಿದ್ದಾರೆ, ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯ ಮೇಲೆ ಅವರಿಗೆ ಬಿಗಿಯಾದ ಹಿಡಿತವಿದೆ ಎಂದು ಅವರ ಬೆಂಬಲಿಗರು ಪ್ರತಿಪಾದಿಸುತ್ತಾರೆ.



ಉತ್ತರ ಪ್ರದೇಶ ಬಿಜೆಪಿ ಘಟಕದ ಅಧ್ಯಕ್ಷ ಭೂಪೇಂದ್ರ ಸಿಂಗ್ ಚೌಧರಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ —ಪಿಟಿಐ ಸಂಗ್ರಹ ಚಿತ್ರ

ರಾಜ್ಯದ 10 ವಿಧಾನಸಭಾ ಸ್ಥಾನಗಳಿಗೆ ನಡೆಯಲಿರುವ ಉಪ ಚುನಾವಣೆಯಲ್ಲಿ ಉತ್ತಮ ಸಾಧನೆ ತೋರುವುದು ಪಕ್ಷದ ಮುಂದೆ ಇರುವ ಆದ್ಯತೆಗಳಲ್ಲಿ ಒಂದು ಎಂದು ಮೂಲಗಳು ಹೇಳಿವೆ. ಈ ಉಪ ಚುನಾವಣೆಯ ದಿನಾಂಕವನ್ನು ಚುನಾವಣಾ ಆಯೋಗವು ಶೀಘ್ರದಲ್ಲಿಯೇ ಘೋಷಿಸುವ ನಿರೀಕ್ಷೆ ಇದೆ.

ಸಂಘಟನೆಯಲ್ಲಿ ಬದಲಾವಣೆ?: 10 ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಮುಗಿದ ನಂತರದಲ್ಲಿ, ಪಕ್ಷದ ರಾಜ್ಯ ಘಟಕದಲ್ಲಿ ಸಂಘಟನಾತ್ಮಕವಾಗಿ ಭಾರಿ ಪ್ರಮಾಣದ ಬದಲಾವಣೆಗಳನ್ನು ತರುವ ಸೂಚನೆಯನ್ನು ಪಕ್ಷದ ವರಿಷ್ಠರು ನೀಡಿದ್ದಾರೆ.

ಆದಿತ್ಯನಾಥ ಹಾಗೂ ಮೌರ್ಯ ಅವರ ಬಣಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಪಕ್ಕಕ್ಕೆ ಇರಿಸಬೇಕು, ಮುಂಬರುವ ಉಪ ಚುನಾವಣೆಯ ಮೇಲೆ ಗಮನ ನೀಡಬೇಕು ಎಂದು ವರಿಷ್ಠರು ತಾಕೀತು ಮಾಡಿದ್ದಾರೆ ಎಂದು ಗೊತ್ತಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಪಕ್ಷವು ಹಿನ್ನಡೆ ಅನುಭವಿಸಿದ ಕಾರಣ ತಾವು ನೈತಿಕ ಹೊಣೆ ಹೊತ್ತು ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧವಿರುವುದಾಗಿ ಚೌಧರಿ ಅವರು ಪ್ರಧಾನಿಯವರಲ್ಲಿ ಹಾಗೂ ನಡ್ಡಾ ಅವರಲ್ಲಿ ಹೇಳಿದರು ಎನ್ನಲಾಗಿದೆ.

'ಉಪ ಚುನಾವಣೆಯಲ್ಲಿ ನಾವು ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ. ಇದುವರೆಗೆ ನಾವು ಹೊಂದಿದ್ದ ಸ್ಥಾನಗಳನ್ನು ಉಳಿಸಿಕೊಳ್ಳುವ ಕೆಲಸವನ್ನಾದರೂ ಮಾಡಬೇಕು' ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರಕ್ಕಿಂತ ಪಕ್ಷ ದೊಡ್ಡದು'

ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರು 'ಪಕ್ಷವು ಸರ್ಕಾರಕ್ಕಿಂತಲೂ ದೊಡ್ಡದು' ಎಂದು ಬುಧವಾರ ಹೇಳಿದ್ದಾರೆ. ಅವರ ಈ ಮಾತು, ಬಿಜೆಪಿಯ ಉತ್ತರ ಪ್ರದೇಶದ ಘಟಕದಲ್ಲಿ ಊಹಾಪೋಹಗಳಿಗೆ ಕಾರಣವಾಗಿದೆ.

'ಸಂಘಟನೆಯು ಸರ್ಕಾರಕ್ಕಿಂತಲೂ ದೊಡ್ಡದು. ಕಾರ್ಯಕರ್ತರ ನೋವು ನನ್ನ ನೋವು. ಸಂಘಟನೆಗಿಂತ ಯಾರೂ ದೊಡ್ಡವರಲ್ಲ. ಕಾರ್ಯಕರ್ತರು ಪಕ್ಷದ ಹೆಮ್ಮೆ' ಎಂದು ಅವರು ಹೇಳಿರುವ ಪೋಸ್ಟ್‌ಅನ್ನು ಉಪ ಮುಖ್ಯಮಂತ್ರಿ ಕಚೇರಿಯ ಎಕ್ಸ್ ಖಾತೆಯ ಮೂಲಕ ಹಂಚಿಕೊಳ್ಳಲಾಗಿದೆ.

ಭಾನುವಾರ ನಡೆದ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿಯೂ ಮೌರ್ಯ ಅವರು ಇದೇ ಮಾತು ಹೇಳಿದ್ದರು. ಮೌರ್ಯ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಿದ ಮಾರನೆಯ ದಿನ ಈ ಪೋಸ್ಟ್ ಪ್ರಕಟಿಸಿದ್ದಾರೆ.

ಉತ್ತರ ಪ್ರದೇಶ ಬಿಜೆಪಿಯಲ್ಲಿ ಆಂತರಿಕ ಕಚ್ಚಾಟ ನಡೆಯುತ್ತಿದೆ. ಇದು ರಾಜ್ಯದ ಅಭಿವೃದ್ಧಿಗೆ ಕೆಡುಕನ್ನು ಉಂಟುಮಾಡುತ್ತಿದೆ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ.



ದೇವರಿಗೆ ಅಲಂಕಾರ

ಒಡಿಶಾ ರಾಜ್ಯದ ಪುರಿಯಲ್ಲಿ ಜಗನ್ನಾಥ, ಬಲಭದ್ರ ಮತ್ತು ಸುಭದ್ರೆಯರ 'ಸುನಾ ಬೇಷ' (ದೇವರ ಮೂರ್ತಿಗಳನ್ನು ಚಿನ್ನದ ಆಭರಣಗಳಿಂದ ಅಲಂಕರಿಸುವುದು) ವೀಕ್ಷಿಸಲು ಸೇರಿದ್ದ ಜನಸ್ತೋಮ –ಪಿಟಿಐ ಚಿತ್ರ

ಎನ್‌ಕೌಂಟರ್‌ನಲ್ಲಿ 12 ನಕ್ಸಲರ ಸಾವು

ಗಡಚಿರೋಲಿ (ಪಿಟಿಐ): ಛತ್ತೀಸಗಢ ಗಡಿ ಸಮೀಪದಲ್ಲಿರುವ ಮಹಾರಾಷ್ಟ್ರದ ಗಢಚಿರೋಲಿ ಜಿಲ್ಲೆಯಲ್ಲಿ ಬುಧವಾರ ಪೊಲೀಸರು ಮತ್ತು 'ಸಿ60' ಕಮಾಂಡೊಗಳು ನಡೆಸಿದ ಎನ್‌ಕೌಂಟರ್‌ನಲ್ಲಿ 12 ನಕ್ಸಲರು ಸಾವಿಗೀಡಾಗಿದ್ದಾರೆ. ಘಟನೆಯಲ್ಲಿ ಇಬ್ಬರು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಕಾರ್ಯಾಚರಣೆ ನಡೆಸಿದ 'ಸಿ60' ಕಮಾಂಡೊಗಳು ಹಾಗೂ ಗಢಚಿರೋಲಿ ಪೊಲೀಸರಿಗೆ ಮಹಾರಾಷ್ಟ್ರ ಗೃಹ ಸಚಿವ ದೇವೇಂದ್ರ ಫಡಣವೀಸ್ ಅವರು ₹51 ಲಕ್ಷ ಬಹುಮಾನ ಘೋಷಿಸಲಾಗಿದೆ.

'ವಾಂಡೋಲಿ ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ನಕ್ಸಲರು ಮತ್ತು ಸಿ60 ಕಮಾಂಡೊಗಳ ನಡುವೆ 6 ಗಂಟೆ ದೀರ್ಘ ಕಾಲದವರೆಗೆ ಭಾರಿ ಗುಂಡಿನ ಚಕಮಕಿ ನಡೆಯಿತು. ನಕ್ಸಲರ ಗುರುತು ಪತ್ತೆ ಮತ್ತು ಸ್ಥಳದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ. ಗಾಯಗೊಂಡ ಎಸ್‌ಪಿ ಹಾಗೂ 'ಸಿ60' ಪಡೆಯ ಸೈನಿಕರಿಬ್ಬರು ಅಪಾಯದಿಂದ ಪಾರಾಗಿದ್ದಾರೆ' ಎಂದು ಅವರು ಹೇಳಿದರು.

ಘಟನೆ ನಡೆದ ಸ್ಥಳದಲ್ಲಿ 12 ನಕ್ಸಲರ ಮೃತದೇಹಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಅಲ್ಲದೇ ಸ್ಥಳದಲ್ಲಿದ್ದ 3 ಎಕೆ- 47, 2 ಐಎನ್‌ಎಸ್‌ಎಎಸ್ ರೈಫಲ್‌ಗಳು, ಕಾರ್ಬೈನ್ ಮತ್ತು ಎಸ್‌ಎಲ್‌ಆರ್ ಸೇರಿದಂತೆ 7 ವಿವಿಧ ಶಸ್ತ್ರಾಸ್ತ್ರಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಗುಂಡಿನ ಚಕಮಕಿ (ಜಾರ್ಖಂಡ್ ವರದಿ): ಜಾರ್ಖಂಡ್‌ನ ಪಶ್ಚಿಮ ಸಿಂಗ್‌ಭುಮ್ ಜಿಲ್ಲೆಯಲ್ಲಿ ಬುಧವಾರ ಭದ್ರತಾ ಸಿಬ್ಬಂದಿ ಮತ್ತು ಕುಖ್ಯಾತ ನಕ್ಸಲ ಮಿಸಿರ್ ಬೆಸ್ರಾ ತಂಡದ ನಡುವೆ ಭಾರಿ ಗುಂಡಿನ ಚಕಮಕಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಬಿಜೆಪಿ ಹಿನ್ನಡೆಗೆ ಎನ್‌ಸಿಪಿ ಮೈತ್ರಿ ಕಾರಣ'

'ವಿವೇಕ' ವಾರಪತ್ರಿಕೆಯ ಸಮೀಕ್ಷಾ ವರದಿಯಲ್ಲಿ ವಿಶ್ಲೇಷಣೆ

ಮುಖ್ಯಾಂಶಗಳು
- ಮುಂಬೈ, ಕೊಂಕಣ, ಪಶ್ಚಿಮ ಮಹಾರಾಷ್ಟ್ರದಲ್ಲಿ ಸಮೀಕ್ಷೆ
- 200ಕ್ಕೂ ಅಧಿಕ ಜನರಿಂದ ಅಭಿಪ್ರಾಯ ಸಂಗ್ರಹ
- ಪಕ್ಷದ ಮುಖಂಡರ ಅವಗಣನೆ–ದಟ್ಟವಾದ ಭಾವನೆ

ಮುಂಬೈ (ಪಿಟಿಐ): 'ರಾಜ್ಯದಲ್ಲಿ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯ ಕಳಪೆ ಸಾಧನೆಗೆ, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಜೊತೆಗೆ ಕೈಜೋಡಿಸಿದ್ದೇ ಕಾರಣ' ಎಂದು ಆರ್‌ಎಸ್‌ಎಸ್ ಜೊತೆಗೆ ಗುರುತಿಸಿಕೊಂಡಿರುವ ಮರಾಠಿ ವಾರಪತ್ರಿಕೆ 'ವಿವೇಕ' ವಿಶ್ಲೇಷಿಸಿದೆ.

ಉತ್ತಮ ಹೊಂದಾಣಿಕೆ ಹಾಗೂ ನೀತಿ-ನಿರ್ಧಾರಗಳಲ್ಲಿ ಪಕ್ಷದ ಕಾರ್ಯಕರ್ತರ ಮಾತುಗಳಿಗೆ ಪ್ರಾಮುಖ್ಯ ನೀಡಿದ್ದರಿಂದ ಮಧ್ಯ ಪ್ರದೇಶದಲ್ಲಿ ಜಯಭೇರಿ ಬಾರಿಸುವುದು ಸಾಧ್ಯವಾಯಿತು. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಸದಸ್ಯ ಬಲ ರಾಜ್ಯದಲ್ಲಿ23 ರಿಂದ 9ಕ್ಕೆ ಕುಸಿದಿದ್ದರೆ; ಕಾಂಗ್ರೆಸ್, ಶಿವಸೇನೆ (ಯುಬಿಟಿ), ಎನ್‌ಸಿಪಿ (ಎಸ್‌ಪಿ) ಪಕ್ಷಗಳಿದ್ದ ಮಹಾವಿಕಾಸ ಅಘಾಡಿ (ಎಂವಿಎ) ಮೈತ್ರಿಕೂಟವು ಒಟ್ಟು 48 ಕ್ಷೇತ್ರಗಳಲ್ಲಿ 30ರಲ್ಲಿ ಜಯಗಳಿಸಿತು ಎಂದು ವಿವರಿಸಿದೆ.

'ವಿವೇಕ' ವಾರಪತ್ರಿಕೆಯ ಈಚಿನ ಸಂಚಿಕೆಯಲ್ಲಿ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಹಿನ್ನಡೆ ಕುರಿತು ಸಮೀಕ್ಷೆಯೊಂದನ್ನು ಪ್ರಕಟಿಸಿದೆ. ಸಮೀಕ್ಷೆಗಾಗಿ ಮುಂಬೈ, ಕೊಂಕಣ, ಪಶ್ಚಿಮ ಮಹಾರಾಷ್ಟ್ರದಲ್ಲಿ 200ಕ್ಕೂ ಅಧಿಕ ಜನರ ಅಭಿಪ್ರಾಯ ಸಂಗ್ರಹಿಸಿದ್ದಾಗಿ ಉಲ್ಲೇಖಿಸಿದೆ.

ಬಿಜೆಪಿ ಅಥವಾ ಸಂಘಟನೆಗಳ (ಸಂಘ ಪರಿವಾರ) ಜೊತೆಗೆ ಗುರುತಿಸಿಕೊಂಡಿರುವ ಪ್ರತಿಯೊಬ್ಬರೂ ಬಹುತೇಕ ಬಿಜೆಪಿ–ಎನ್‌ಸಿಪಿಯಿಂದ ಹಿನ್ನಡೆಯಾಯಿತು ಎಂದು ಅಭಿಪ್ರಾಯ ದಾಖಲಿಸಿದರು ಎಂದು ವಿಶ್ಲೇಷಣೆಯಲ್ಲಿ ತಿಳಿಸಲಾಗಿದೆ.

'ಉದ್ಯಮಿಗಳು, ವ್ಯಾಪಾರಿಗಳು, ವೈದ್ಯರು, ಪ್ರೊಫೆಸರ್‌ಗಳು, ಶಿಕ್ಷಕರ ಅಭಿಪ್ರಾಯ ಸಂಗ್ರಹಿಸಿದೆವು. ಬಿಜೆಪಿ ಮತ್ತು ಶಿವಸೇನಾ ನಡುವೆ ಹಿಂದುತ್ವದ ಕೊಂಡಿ ಇರುವ ಕಾರಣ, ಪರಸ್ಪರ ಸಣ್ಣ–ಪುಟ್ಟ ದೂರುಗಳಿದ್ದರೂ ಯಾವಾಗಲೂ ಉತ್ತಮ ಫಲಿತಾಂಶ ನೀಡಿದೆ. ಉದ್ಧವ್ ಠಾಕ್ರೆ ವಿರುದ್ಧದ ಏಕನಾಥ ಶಿಂದೆ ಬಂಡಾಯವನ್ನು ಜನರೂ ಸ್ವೀಕರಿಸಿದ್ದರು' ಎಂದು ತಿಳಿಸಿದೆ.

ಬಿಜೆಪಿಯು ಅಜಿತ್ ನೇತೃತ್ವದ ಎನ್‌ಸಿಪಿ ಜೊತೆಗೆ ಕೈಜೋಡಿಸಿದ್ದು, ಜನರ ಭಾವನೆಗೆ ವಿರುದ್ಧವಾಗಿತ್ತು. ಪಕ್ಷದ ಸಂಘಟನೆಯಲ್ಲಿ ತೊಡಗಿರುವ ಮುಖಂಡರನ್ನು ಕಡೆಗಣಿಸಿ ಇತರೆ ಪಕ್ಷಗಳ ಮುಖಂಡರಿಗೆ ಬಿಜೆಪಿ ಆದ್ಯತೆ ನೀಡುತ್ತಿದೆ ಎಂಬ ಭಾವನೆ ದಟ್ಟವಾಯಿತು. ಇದೂ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿತು ಎಂದು ಅಭಿಪ್ರಾಯಪಟ್ಟಿದೆ.

'ಮೈತ್ರಿ ತೊರೆಯಲು ಅಜಿತ್‌ಗೆ ಸೂಚನೆ'

ಮುಂಬೈ (ಪಿಟಿಐ): 'ವಿವೇಕ' ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಉಲ್ಲೇಖಿಸಿ ಎನ್‌ಸಿಪಿ (ಶರದ್‌ಚಂದ್ರ ಪವಾರ್) ಪಕ್ಷವು, 'ಮಹಾರಾಷ್ಟ್ರದ ಆಡಳಿತಾರೂಢ ಮಹಾಯುತಿ ಮೈತ್ರಿಕೂಟವನ್ನು ತೊರೆಯುವಂತೆ ಬಿಜೆಪಿಯು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಗೆ ಸೂಕ್ಷ್ಮವಾಗಿ ಹೇಳುತ್ತಿದೆ' ಎಂದು ಪ್ರತಿಕ್ರಿಯಿಸಿದೆ.

ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದ ಬಿಜೆಪಿಯು, ಇಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸುವ ಹವಣಿಕೆಯಲ್ಲಿದೆ. ಆದರೆ ಅಜಿತ್ ಪವಾರ್ ನೇತೃತ್ವದ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಂಡಿರುವುದು ತೊಂದರೆ ಉಂಟುಮಾಡುತ್ತದೆ ಎಂಬುದು ಬಿಜೆಪಿಗೆ ಗೊತ್ತಿದೆ ಎಂದು ಎನ್‌ಸಿಪಿ (ಎಸ್‌ಪಿ) ವಕ್ತಾರ ಕ್ಲೈಡ್ ಕ್ರಾಸ್ಟೊ ಹೇಳಿದರು.

'ಅಜಿತ್ ಪವಾರ್ ಅವರನ್ನು ಸರ್ಕಾರದಲ್ಲಿ ಸೇರಿಸಿಕೊಂಡಿರುವುದು ಬಿಜೆಪಿಗೆ ತೊಂದರೆ ತಂದಿತ್ತಿದೆ...' ಎಂದು ಕ್ರಾಸ್ಟೊ ಹೇಳಿದರು.

ಎನ್‌ಸಿಪಿಗೆ ಮೂವರ ರಾಜೀನಾಮೆ

ಪುಣೆ (ಪಿಟಿಐ): ಉಪ ಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯ ಪಿಂಪ್ರಿ ಚಿಂಚ್‌ವಾಡ್ ಘಟಕದ ಮುಖ್ಯಸ್ಥ ಅಜಿತ್ ಗವ್ಹಾಣೆ ಅವರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಇವರ ಜೊತೆಗೆ ಪಕ್ಷದ ಸ್ಥಳೀಯ ಮುಖಂಡರಾಗಿದ್ದ, ನಗರಪಾಲಿಕೆಯ ಇಬ್ಬರು ಮಾಜಿ ಸದಸ್ಯರೂ ರಾಜೀನಾಮೆ ಸಲ್ಲಿಸಿದ್ದಾರೆ.

ಇವರು ಪಕ್ಷದ ಅಧ್ಯಕ್ಷ ಸುನಿಲ್ ತಟ್ಕರೆ ಅವರಿಗೆ ರಾಜೀನಾಮೆ ಪತ್ರಗಳನ್ನು ಕಳುಹಿಸಿದ್ದಾರೆ. 'ನಾವು ಶರದ್ ಪವಾರ್ ಅವರ ಆಶೀರ್ವಾದ ಪಡೆಯುತ್ತೇವೆ' ಎಂದು ಗವ್ಹಾಣೆ ತಿಳಿಸಿದ್ದಾರೆ.

ಡೋಡಾ: ಉಗ್ರರೊಂದಿಗೆ ಮಂಗಳವಾರ ರಾತ್ರಿ ಎರಡು ಬಾರಿ ನಡೆದ ಗುಂಡಿನ ಚಕಮಕಿ

ಮುಂದುವರಿದ ಸೇನಾ ಕಾರ್ಯಾಚರಣೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಡೋಡಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ನಾಲ್ಕು ಗಂಟೆಗಳ ಅವಧಿಯಲ್ಲಿ ಎರಡು ಬಾರಿ ಗುಂಡಿನ ಚಕಮಕಿ ನಡೆದಿವೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ದೇಸಾ ಅರಣ್ಯ ಪ್ರದೇಶದಲ್ಲಿ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆ ಮುಂದುವರಿದಿದ್ದು, ಮಂಗಳವಾರ ರಾತ್ರಿ 10.45ಕ್ಕೆ ಕಲಾನ್ ಭಾಟಾ ಬಳಿ ಹಾಗೂ ನಸುಕಿನ 2 ಗಂಟೆಗೆ ಪಂಚನ್ ಭಾಟಾ ಬಳಿ ಗುಂಡಿನ ದಾಳಿ ನಡೆದಿವೆ ಎಂದು ಅವರು ಹೇಳಿದರು. ದೇಸಾ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಸೋಮವಾರ ಮಧ್ಯರಾತ್ರಿ ನಡೆದ ಗುಂಡಿನ ಚಕಮಕಿಯಲ್ಲಿ ನಾಲ್ವರು ಸೇನಾ ಸಿಬ್ಬಂದಿ ಹುತಾತ್ಮರಾಗಿದ್ದರು.

ಮಂಗಳವಾರ ರಾತ್ರಿ ನಡೆದ ದಾಳಿಯಲ್ಲಿ ಯಾವುದೇ ಸಾವು–ನೋವು ಸಂಭವಿಸಿದ ವರದಿಯಾಗಿಲ್ಲ. ಕತ್ತಲೆ, ಸವಾಲಿನ ಭೂಪ್ರದೇಶದ ಲಾಭ ಪಡೆದುಕೊಂಡ ಭಯೋತ್ಪಾದಕರು ಅಲ್ಲಿಂದ ಪಾರಾಗುವುದರಲ್ಲಿ ಯಶಸ್ವಿಯಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪಾಕಿಸ್ತಾನ ಮೂಲದ ನಿಷೇಧಿತ ಜೈಶ್–ಎ–ಮೊಹಮ್ಮದ್ (ಜೆಇಎಂ) ಉಗ್ರರ ಗುಂಪಿನ ಜತೆ ಸಂಪರ್ಕ ಹೊಂದಿರುವ ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆ ಸೋಮವಾರ ದಿಂದಲೂ ನಡೆಯುತ್ತಿದೆ. ರಾಷ್ಟ್ರೀಯ ರೈಫಲ್ಸ್, ಜಮ್ಮು ಮತ್ತು ಕಾಶ್ಮೀರದ ವಿಶೇಷ ಕಾರ್ಯಾಚರಣೆ ಪಡೆಗಳು ಈ ಭಾಗದಲ್ಲಿನ ಸವಾಲಿನ ಭೂ ಪ್ರದೇಶ ಮತ್ತು ಹವಾಮಾನದ ಅಡೆತಡೆ ನಡುವೆಯೂ ಜಂಟಿ ಕಾರ್ಯಾಚರಣೆ ಮುಂದುವರಿಸಿವೆ.

ಗಡಿಯಿಂದ ನುಸುಳಿರುವ ಭಯೋತ್ಪಾದಕರು ಅರಣ್ಯ ಪ್ರದೇಶದಲ್ಲಿ ಆಶ್ರಯ ಕಂಡುಕೊಂಡಿದ್ದಾರೆ. ಅವರನ್ನು ಮಟ್ಟಹಾಕಲು ಸೇನೆಯು ಪ್ಯಾರಾ ಕಮಾಂಡೊಗಳು, ಡ್ರೋನ್ ಮತ್ತು ಹೆಲಿಕಾಪ್ಟರ್‌ಗಳ ನೆರವು ಪಡೆದು ಶೋಧ ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಯ ಪಿಡುಗನ್ನು ತೊಡೆದುಹಾಕಲು ಉತ್ತರ ಕಮಾಂಡ್ ಬದ್ಧವಾಗಿದ್ದು, ಇದಕ್ಕಾಗಿ ನಿರಂತರ ಕಾರ್ಯಾಚರಣೆಗಳು ಮುಂದುವರಿಯಲಿವೆ ಎಂದು ಸೇನೆ ಹೇಳಿದೆ.

ಗ್ರಾಮ ರಕ್ಷಣಾ ಪಡೆಗಳಿಂದಲೂ ಕಾರ್ಯಾಚರಣೆ: ಜಮ್ಮು ಕಾಶ್ಮೀರದ ಡೋಡಾ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ನಾಲ್ವರು ಯೋಧರನ್ನು ಹತ್ಯೆಗೈದ ಉಗ್ರರಿಗಾಗಿ ಶೋಧ ಕಾರ್ಯಾಚರಣೆ ನಡೆಸುತ್ತಿರುವ ಭದ್ರತಾ ಸಿಬ್ಬಂದಿಗೆ ಸ್ಥಳೀಯರೂ ಸಹಾಯ ಮಾಡುತ್ತಿದ್ದಾರೆ. ಪಾಯಿಂಟ್ 303 ರೈಫಲ್‌ಗಳೊಂದಿಗೆ ಶಸ್ತ್ರಸಜ್ಜಿತವಾದ ಹತ್ತಾರು ಗ್ರಾಮ ರಕ್ಷಣಾ ಪಡೆಗಳು (ವಿಡಿಜಿಎಸ್) ಭದ್ರತಾ ಸಿಬ್ಬಂದಿಯೊಂದಿಗೆ ಕೈಜೋಡಿಸಿವೆ.

ಉಗ್ರರು ಈ ಪ್ರದೇಶದಿಂದ ತಪ್ಪಿಸಿಕೊಂಡು ಹೋಗಲು ಬಿಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿರುವ ಗ್ರಾಮ ರಕ್ಷಣಾ ಪಡೆ ಸದಸ್ಯರು 'ನಮಗೆ ಕಾರ್ಯಾಚರಣೆಗಾಗಿ ಉನ್ನತ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಅಗತ್ಯವಿದೆ' ಎಂದು ಹೇಳಿದ್ದಾರೆ.



ಹುತಾತ್ಮರಾದ ಅಜಯ್ ಸಿಂಗ್ ಮತ್ತು ಬಿಜೇಂದ್ರ ಅವರ ಪಾರ್ಥಿವ ಶರೀರಗಳಿಗೆ ಜೈಪುರದಲ್ಲಿ ಸೇನೆ ಬುಧವಾರ ಪುಷ್ಪ ನಮನ ಸಲ್ಲಿಸಿತು –ಪಿಟಿಐ

ಜೈಪುರ: ಇಬ್ಬರು ಹುತಾತ್ಮರಿಗೆ ನಮನ

ಜೈಪುರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಹುತಾತ್ಮರಾದ ಅಜಯ್ ಸಿಂಗ್ ಮತ್ತು ಬಿಜೇಂದ್ರ ಅವರ ಪಾರ್ಥಿವ ಶರೀರವನ್ನು ಬುಧವಾರ ಇಲ್ಲಿಗೆ ವಿಶೇಷ ವಿಮಾನದ ಮೂಲಕ ತರಲಾಯಿತು.

ರಾಜಸ್ಥಾನದ ಕೆಲ ಸಚಿವರು, ರಾಜಕಾರಣಿಗಳು ಮತ್ತು ಸೇನಾ ಅಧಿಕಾರಿಗಳು ಜೈಪುರ ವಿಮಾನ ನಿಲ್ದಾಣದಲ್ಲಿ ಹುತಾತ್ಮ ಯೋಧರಿಗೆ ಪುಷ್ಪ ನಮನ ಸಲ್ಲಿಸಿದರು. ಬಳಿಕ ಅವರ ಮೃತದೇಹಗಳನ್ನು ಅಂತ್ಯಕ್ರಿಯೆಗಾಗಿ ಜುಂಜುನುಗೆ ತರಲಾಯಿತು.

ಅಜಯ್ ಸಿಂಗ್ ಅವರು ಭೈಸಾವತ ಕಲನ್ ಗ್ರಾಮದವರಾಗಿದ್ದರೆ, ಬಿಜೇಂದ್ರ ಅವರು ದುಮೋಲಿ ಕಲಾನ್ ಗ್ರಾಮದವರು.

2 ದಿನದಲ್ಲಿ ಇಬ್ಬರು ಯೋಧರ ಸಾವು

ಶ್ರೀಕಾಕುಳಂ: ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕರ ವಿರುದ್ಧ ಹೋರಾಡಿ ಹುತಾತ್ಮರಾದ ಮತ್ತೊಬ್ಬ ಯೋಧ ಡಿ. ರಾಜೇಶ್ (25) ಆಂಧ್ರಪ್ರದೇಶದ ಶ್ರೀಕಾಕುಳಂನವರು. ಇದೇ ಜಿಲ್ಲೆಗೆ ಸೇರಿದ ಯೋಧ ಎಸ್. ಜಗದೇಶ್ವರ ರಾವ್ ಅವರು ಎರಡು ದಿನಗಳ ಹಿಂದೆಯಷ್ಟೇ ಹುತಾತ್ಮರಾಗಿದ್ದರು.

'ಕಾರ್ಯಾಚರಣೆ ವೇಳೆ ಉಗ್ರರ ಗುಂಡು ಅಣ್ಣನ ಎದೆಗೆ ತಗುಲಿತು ಎಂಬ ಮಾಹಿತಿ ದೊರೆತಿದೆ. ಈ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಕಾಯುತ್ತಿದ್ದೇವೆ' ಎಂದು ರಾಜೇಶ್ ಅವರ ತಮ್ಮ ಡಿ. ಮಧುಸೂದನ್ ರಾವ್ ಪ್ರತಿಕ್ರಿಯಿಸಿದ್ದಾರೆ.

ರಾಜೇಶ್ ಅವರು ಸೇನೆ ಸೇರಿ ಆರು ವರ್ಷಗಳಾಗಿತ್ತು. 3 ತಿಂಗಳ ಹಿಂದೆಯಷ್ಟೇ ಮನೆಗೆ ಬಂದಿದ್ದ ಅವರು ಅವಿವಾಹಿತರಾಗಿದ್ದರು.


ಡಿ.ಸಿ ಕಚೇರಿ ಸುತ್ತ ಉರುಳಿ ಪ್ರತಿಭಟಿಸಿದ ರೈತ

ಮಂದಸೌರ್ (ಪಿಟಿಐ): ಮಧ್ಯಪ್ರದೇಶದ ಮಂದಸೌರ್ ಜಿಲ್ಲೆಯಲ್ಲಿ ತನ್ನ ಜಮೀನು ಕಬಳಿಕೆಗೆ ಸಂಬಂಧಿಸಿದಂತೆ ನೀಡಲಾದ ದೂರನ್ನು ಪರಿಹರಿಸಲಿಲ್ಲ ಎಂದು ಬೇಸತ್ತ ರೈತರೊಬ್ಬರು ಜಿಲ್ಲಾಧಿಕಾರಿ ಕಚೇರಿಯ ಆವರಣದ ಸುತ್ತ 'ಉರುಳು ಸೇವೆ' ಮಾಡಿ, ಅಸಮಾಧಾನ ಹೊರಹಾಕಿದ್ದಾರೆ.

ವೃದ್ಧ ರೈತರೊಬ್ಬರು ತಮ್ಮ ದೂರನ್ನು ಯಾರೂ ಕೇಳುತ್ತಿಲ್ಲ ಎಂದು ಅಲವತ್ತಿಕೊಂಡು 'ಉರುಳು ಸೇವೆ' ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ.

'ಭೂ ಮಾಫಿಯಾದವರು ಅಧಿಕಾರಿಗಳ ಜತೆ ಸೇರಿ ನನ್ನ ಭೂಮಿಯನ್ನು ಕಿತ್ತುಕೊಂಡಿದ್ದಾರೆ. ಮಂಗಳವಾರ ನಡೆದ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ನನ್ನ ದೂರನ್ನು ಯಾರೂ ಆಲಿಸಲಿಲ್ಲ. ಹೀಗಾಗಿ ಬೇಸತ್ತು, ಪ್ರತಿಭಟನಾ ಸೂಚಕವಾಗಿ ಜಿಲ್ಲಾಧಿಕಾರಿ ಕಚೇರಿ ಸುತ್ತ ಉರುಳುತ್ತಿದ್ದೇನೆ' ಎಂದು ರೈತ ಶಂಕರ್‌ಲಾಲ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆದರೆ, ಮಂದಸೌರ್ ಜಿಲ್ಲಾಧಿಕಾರಿ ದಿಲೀಪ್ ಯಾದವ್ ಅವರು ಈ ಆರೋಪಗಳನ್ನು ಬುಧವಾರ ಅಲ್ಲಗಳೆದಿದ್ದಾರೆ. 'ಶಂಕರ್‌ಲಾಲ್ ಅವರ ಜಮೀನನ್ನು ಯಾವುದೇ ವ್ಯಕ್ತಿ ಅಥವಾ ಭೂ ಮಾಫಿಯಾ ಅತಿಕ್ರಮಿಸಿಲ್ಲ. ಕುಂದುಕೊರತೆ ಸಭೆಯಲ್ಲಿ ಅವರು ನೀಡಿದ ದೂರಿನ ಮೇರೆಗೆ, ಉಪವಿಭಾಗೀಯ ಅಧಿಕಾರಿ ಮತ್ತು ತಹಶೀಲ್ದಾರ್ ಅವರಿಂದ ವರದಿ ಕೇಳಲಾಗಿದೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜಿಲ್ಲಾಧಿಕಾರಿ ಕಚೇರಿಯ ಆವರಣದ ಸುತ್ತ ಉರುಳಿ ಪ್ರತಿಭಟಿಸಿದ ರೈತ – ಪಿಟಿಐ ಚಿತ್ರ

ಅಸ್ಸಾಂ: ಮೂವರು ಉಗ್ರರ ಹತ್ಯೆ

ಸಿಲಚರ್ (ಅಸ್ಸಾಂ) (ಪಿಟಿಐ): ಅಸ್ಸಾಂ ರಾಜ್ಯದ ಕಛಾಡ್ ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿ ಮತ್ತು ಉಗ್ರಗಾಮಿಗಳ ನಡುವೆ ನಡೆದ ಭಾರಿ ಗುಂಡಿನ ಚಕಮಕಿಯಲ್ಲಿ ಮೂವರು ಹಮಾರ್ ಉಗ್ರಗಾಮಿಗಳು ಮೃತಪಟ್ಟಿದ್ದಾರೆ ಹಾಗೂ ಹಲವು ಮಂದಿ ಪೊಲೀಸರಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ನಸುಕಿನಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಕಛಾಡ್ ಪೊಲೀಸರು ಅಸ್ಸಾಂ ಹಾಗೂ ನೆರೆಯ ಮಣಿಪುರದ ಮೂವರು ಹಮಾರ್ ಉಗ್ರಗಾಮಿಗಳನ್ನು ಹತ್ಯೆ ಮಾಡಿದ್ದಾರೆ. ಅಲ್ಲದೆ, ಪೊಲೀಸರು ಎರಡು ಎ.ಕೆ. ಬಂದೂಕುಗಳನ್ನು, ಇನ್ನೊಂದು ಬಂದೂಕು ಹಾಗೂ ಪಿಸ್ತೂಲನ್ನು ವಶಪಡಿಸಿಕೊಂಡಿದ್ದಾರೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ.

ಪೊಲೀಸ್ ಸಿಬ್ಬಂದಿಗೂ ಗಾಯಗಳಾಗಿವೆ ಎಂದು ಗುವಾಹತಿಯಲ್ಲಿ ಇರುವ ಅಸ್ಸಾಂ ಪೊಲೀಸ್ ಮುಖ್ಯ ಕಚೇರಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಆದರೆ, ಈ ಬಗ್ಗೆ ಕಛಾಡ್ ಜಿಲ್ಲಾ ಪೊಲೀಸರಿಂದ ವರದಿ ಇನ್ನಷ್ಟೇ ಬರಬೇಕಿದೆ' ಎಂದು ಅವರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ನೀಟ್: ಆರೋಪಿ ವಶಕ್ಕೆ

ನವದೆಹಲಿ (ಪಿಟಿಐ): ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ಪಂಕಜ್ ಕುಮಾರ್ ಅಲಿಯಾಸ್ ಆದಿತ್ಯ ಅವರನ್ನು ಪಟ್ನಾದ ವಿಶೇಷ ನ್ಯಾಯಾಲಯವೊಂದು 14 ದಿನಗಳವರೆಗೆ ಸಿಬಿಐ ವಶಕ್ಕೆ ಒಪ್ಪಿಸಿದೆ.

ಕುಮಾರ್ ಅವರು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯಿಂದ ಪ್ರಶ್ನೆಪತ್ರಿಕೆಗಳನ್ನು ಕದ್ದಿದ್ದರು ಎಂದು ಆರೋಪಿಸಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಇವರು ವಹಿಸಿದ್ದ ಪಾತ್ರ, ಪಡೆದ ಹಣದ ಕುರಿತ ವಿವರ, ಕಳ್ಳತನದಲ್ಲಿ ಭಾಗಿಯಾಗಿದ್ದ ಇತರರ ಕುರಿತು ಸಿಬಿಐ ಅಧಿಕಾರಿಗಳು ಪ್ರಶ್ನಿಸುವ ಸಾಧ್ಯತೆ ಇದೆ.

ಪ್ರತ್ಯೇಕ ಅವಘಡ; ಬಾಲಕ ಸಾವು, 19 ಮಂದಿಗೆ ಗಾಯ

ಗೊಂಡಾ(ಪಿಟಿಐ): ಗೊಂಡಾದಲ್ಲಿ ತಾಜಿಯಾ ಮೆರವಣಿಗೆಯ ವೇಳೆ ವಿದ್ಯುತ್ ಸ್ಪರ್ಶದಿಂದ 12 ವರ್ಷದ ಮಗು ಬುಧವಾರ ಮೃತಪಟ್ಟಿದ್ದು, ಪ್ರತ್ಯೇಕ ವಿದ್ಯುತ್ ಅವಘಡಗಳಲ್ಲಿ 19 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತಾರಾಬ್‌ಗಂಜ್ ಪ್ರದೇಶದಲ್ಲಿ ಮಧ್ಯಾಹ್ನ 1 ಗಂಟೆ ಸುಮಾರಿಗೆ ತಾಜಿಯಾ ಮೆರವಣಿಗೆ ಹೊರಟಿತು. ಹೈ–ಟೆನ್ಷನ್ ತಂತಿಗೆ ತಾಜಿಯಾ ತಗುಲಿದ್ದರಿಂದ ಅಶ್ರಫ್ (12) ಮತ್ತು ರಿಯಾಸತ್ ಅವರಿಗೆ ಸುಟ್ಟ ಗಾಯಗಳಾಗಿವೆ.

ಅವರನ್ನು ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೆ ಅಶ್ರಫ್ ಮೃತಪಟ್ಟಿದ್ದಾರೆ ಮತ್ತು ರಿಯಾಸತ್ ಸ್ಥಿತಿ ಸ್ಥಿರವಾಗಿದೆ ಎಂದು ಹೇಳಲಾಗಿದೆ.

ಹರಿಯಾಣ: ಅಗ್ನಿವೀರರಿಗೆ 10 ಶೇ ಮೀಸಲಾತಿ ಘೋಷಣೆ

ಚಂಡಿಗಢ (ಪಿಟಿಐ): ಅಗ್ನಿವೀರರಾಗಿ ಸೇನೆಯಲ್ಲಿ ಸೇವೆ ಪೂರೈಸುವವರಿಗೆ ಪೊಲೀಸ್ ಕಾನ್‌ಸ್ಟೇಬಲ್, ಅರಣ್ಯ ರಕ್ಷಕ ಮತ್ತು ಜೈಲು ವಾರ್ಡನ್ ಹುದ್ದೆಗಳ ನೇಮಕಾತಿಯಲ್ಲಿ 10 ಶೇಕಡಾ ಮೀಸಲಾತಿಯನ್ನು ನೀಡುವುದಾಗಿ ಹರಿಯಾಣ ಸರ್ಕಾರವು ಬುಧವಾರ ಘೋಷಿಸಿದೆ.

ಸ್ವ ಉದ್ಯಮವನ್ನು ಆರಂಭಿಸಲು ಬಯಸುವ ಅಗ್ನಿವೀರರಿಗೆ ₹5 ಲಕ್ಷದವರೆಗೆ ಬಡ್ಡಿರಹಿತ ಸಾಲ ಸೌಲಭ್ಯವನ್ನು ನೀಡುವುದಾಗಿ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರು ತಿಳಿಸಿದ್ದಾರೆ.



ನಯಾಬ್ ಸಿಂಗ್ ಸೈನಿ

'ಸಿ ಮತ್ತು 'ಡಿ' ವೃಂದದ ಹುದ್ದೆಗಳಲ್ಲಿ 3 ವರ್ಷ ವಯೋಮಿತಿ ಸಡಿಲಿಕೆಯನ್ನು ನೀಡಲಾಗುತ್ತಿದ್ದು, ಪ್ರಥಮ ಹಂತದ ಅಗ್ನಿವೀರರಿಗೆ 5 ವರ್ಷ ವಯೋಮಿತಿ ಸಡಿಲಿಕೆಯನ್ನು ನೀಡಲಾಗುತ್ತದೆ. 'ಸಿ' ವೃಂದದ ಹುದ್ದೆಗಳ ನೇರ ನೇಮಕಾತಿಯಲ್ಲಿ 5 ಶೇಕಡಾ ಮೀಸಲಾತಿ ನೀಡುತ್ತೇವೆ' ಎಂದು ತಿಳಿಸಿದ್ದಾರೆ.

ನವದೀಪ್ ಬಿಡುಗಡೆ

ಅಂಬಾಲ(ಪಿಟಿಐ): ಕಳೆದ ಫೆಬ್ರುವರಿಯಲ್ಲಿ ನಡೆದ 'ದೆಹಲಿ ಚಲೋ' ಪ್ರತಿಭಟನೆ ಸಂಬಂಧ ಜೈಲು ಸೇರಿದ್ದ ರೈತ ಹೋರಾಟಗಾರ ನವದೀಪ್ ಸಿಂಗ್ ಮಂಗಳವಾರ ಬಿಡುಗಡೆಯಾಗಿದ್ದಾರೆ.

ಇದಕ್ಕೂ ಮೊದಲು, ನವದೀಪ್ ಅವರ ಬಂಧನ ವಿರೋಧಿಸಿ ರೈತರು ಅಂಬಾಲದ ಎಸ್ಪಿ ಕಚೇರಿಗೆ ಬುಧವಾರ ಹಾಗೂ ಗುರುವಾರ ಮುತ್ತಿಗೆ ಹಾಕಲು ಮುಂದಾಗಿದ್ದರು. ಏತನ್ಮಧ್ಯೆ, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದ ಹಿನ್ನೆಲೆಯಲ್ಲಿ, ರೈತರು ಮುತ್ತಿಗೆ ಯೋಜನೆಯನ್ನು ಹಿಂತೆಗೆದುಕೊಂಡಿರುವುದಾಗಿ ಘೋಷಿಸಿದ್ದಾರೆ.

ಚಂಡೀಪುರ ವೈರಾಣು ಬಾಲಕಿ ಸಾವು

ಅಹಮದಾಬಾದ್: ಗುಜರಾತ್‌ನಲ್ಲಿ ಚಂಡೀಪುರ ವೈರಾಣುವಿನ ಕಾರಣದಿಂದಾಗಿ ಐದು ವರ್ಷ ವಯಸ್ಸಿನ ಬಾಲಕಿಯೊಬ್ಬಳು ಮೃತಪಟ್ಟಿದ್ದಾಳೆ ಎಂದು ರಾಷ್ಟ್ರೀಯ ವೈರಾಣುವಿಜ್ಞಾನ ಸಂಸ್ಥೆ (ಎನ್‌ಐವಿ) ಬುಧವಾರ ಖಚಿತಪಡಿಸಿದೆ. ಚಂಡೀಪುರ ವೈರಾಣುವಿನಿಂದಾಗಿ ಗುಜರಾತ್‌ನಲ್ಲಿ ಆಗಿರುವ ಮೊದಲ ಸಾವು ಇದು.

ಐದು ಮಾದರಿಗಳನ್ನು ಪುಣೆಯ ಎನ್‌ಐವಿಗೆ ರವಾನಿಸಲಾಗಿತ್ತು. ಆ ಪೈಕಿ ಬಾಲಕಿಯ ಸಾವು ಆಗಿರುವುದು ಚಂಡೀಪುರ ವೈರಸ್‌ನಿಂದ ಎಂಬುದು ಖಚಿತವಾಗಿದೆ.

ದೆಹಲಿ ಹೈಕೋರ್ಟ್ ಎದುರು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್

'ಬಿಡುಗಡೆ ತಪ್ಪಿಸಲು ಇನ್ಶೂರೆನ್ಸ್ ಅರೆಸ್ಟ್'



ನವದೆಹಲಿ (ಪಿಟಿಐ): ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ತಮ್ಮ ಬಂಧನ ಪ್ರಶ್ನಿಸಿ ಮತ್ತು ಮಧ್ಯಂತರ ಜಾಮೀನು ಕೋರಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಲ್ಲಿಸಿದ ಅರ್ಜಿಗಳ ಕುರಿತ ಆದೇಶವನ್ನು ದೆಹಲಿ ಹೈಕೋರ್ಟ್ ಬುಧವಾರ ಕಾಯ್ದಿರಿಸಿದೆ.

ಮೊಹರಂ ಕಾರಣಕ್ಕೆ ರಜೆಯ ಹೊರತಾಗಿಯೂ, ಕೇಜ್ರಿವಾಲ್ ಮತ್ತು ಸಿಬಿಐ ಪರ ವಕೀಲರ ವಾದಗಳನ್ನು ಆಲಿಸಿದ ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರು, ಕೇಜ್ರಿವಾಲ್ ಅವರ ಅರ್ಜಿಗಳ ಕುರಿತ ಆದೇಶವನ್ನು ಕಾಯ್ದಿರಿಸಿದರು.

ಕೇಜ್ರಿವಾಲ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ, 'ಕೇಜ್ರಿವಾಲ್ ಅವರು ಜೈಲಿನಿಂದ ಹೊರಹೋಗುವುದನ್ನು ತಡೆಯಲು ಸಿಬಿಐ ಅವರನ್ನು 'ಇನ್ಶೂರೆನ್ಸ್ ಅರೆಸ್ಟ್' (ಬಂಧನದಿಂದ ಮುಕ್ತನಾಗದಂತೆ ಒಂದಲ್ಲಾ ಮತ್ತೊಂದು ಪ್ರಕರಣದಲ್ಲಿ ತನಿಖೆಗೆ ಅಗತ್ಯವಾಗುವ ಆರೋಪಿ ಎಂದು ಪರಿಗಣಿಸಿ, ಆತನನ್ನು ಹಿಡಿದಿಟ್ಟುಕೊಂಡಿರುವುದು) ಮಾಡಿದೆ' ಎಂದು ಹೇಳಿದರು.

'ಇನ್ಶೂರೆನ್ಸ್ ಅರೆಸ್ಟ್ ದುರದೃಷ್ಟಕರ. ಕೇಜ್ರಿವಾಲ್ ವಿರುದ್ಧ ಕಠಿಣ ಕಾನೂನುಗಳಡಿ ಜಾರಿ ನಿರ್ದೇಶನಾಲಯ ದಾಖಲಿಸಿರುವ ಪ್ರಕರಣದಲ್ಲಿ ಅವರ ಬಿಡುಗಡೆಗೆ ಮೂರು ಆದೇಶಗಳಿವೆ. ಈ ಪ್ರಕಾರ ಅವರನ್ನು ಜೈಲಿನಿಂದ ಬಿಡುಗಡೆ ಮಾಡಬಹುದು. ಆದರೆ, ಅದನ್ನು ತಡೆಯಲು ಅವರನ್ನು ಸಿಬಿಐ ಬಂಧಿಸಿದೆ' ಎಂದು ವಿವರಿಸಿದರು.

'ಕೇಜ್ರಿವಾಲ್ ಅವರೇನೂ ಭಯೋತ್ಪಾದಕರಲ್ಲ. ಅವರು ದೆಹಲಿಯ ಮುಖ್ಯಮಂತ್ರಿ' ಎಂದ ಸಿಂಘ್ವಿ ಅವರು, 'ಕಾನೂನು ಪ್ರಕಾರ ಕೇಜ್ರಿವಾಲ್ ಅವರ ಬಂಧನವು ಕಡ್ಡಾಯವಲ್ಲ. ಅವರು ಜಾಮೀನಿನ ಮೇರೆಗೆ ಬಿಡುಗಡೆಗೆ ಅರ್ಹರಾಗಿದ್ದಾರೆ' ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತಿವಾದ ಮಂಡಿಸಿದ ಸಿಬಿಐ ಪರ ವಕೀಲ ಡಿ.ಪಿ. ಸಿಂಗ್, ಕೇಜ್ರಿವಾಲ್ ಅವರು ತಮ್ಮ ಬಂಧನ ವಿರೋಧಿಸಿ ಹಾಗೂ ತಮಗೆ ಜಾಮೀನು ನೀಡಬೇಕೆಂಬ ಎರಡು ಅರ್ಜಿಗಳನ್ನು ಬಲವಾಗಿ ವಿರೋಧಿಸಿದರು. ಅಲ್ಲದೆ, ಕೇಜ್ರಿವಾಲ್ ಅವರ ಬಂಧನವು 'ಇನ್ಶೂರೆನ್ಸ್ ಅರೆಸ್ಟ್' ಎಂಬುದನ್ನು ಸಮರ್ಥಿಸಲಾಗದು ಎಂದು ಹೇಳಿದರು.

ಜೂನ್ 26ರಂದು ಸಿಬಿಐನಿಂದ ಬಂಧನವಾಗಿರುವ ಕೇಜ್ರಿವಾಲ್ ಅವರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದು, ಅವರನ್ನು ತಿಹಾರ್ ಕಾರಾಗೃಹದಲ್ಲಿ ಇಡಲಾಗಿದೆ.

ಮತ್ತೊಂದೆಡೆ, ಕೇಜ್ರಿವಾಲ್ ಅವರು ಜಾಮೀನು ಕೋರಿ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಜುಲೈ 29ಕ್ಕೆ ನಿಗದಿಪಡಿಸಿದೆ.

ಸಿಕ್ಕಿಂ ಸಚಿವರ ಮೃತದೇಹ ಪತ್ತೆ

ಗಂಗ್‌ಟೊಕ್ (ಪಿಟಿಐ): 9 ದಿನಗಳ ಹಿಂದೆ ಕಾಣೆಯಾಗಿದ್ದ ಸಿಕ್ಕಿಂನ ಸಚಿವ ಆರ್.ಸಿ. ಪೌಡ್ಯಾಲ್ ಅವರ ಮೃತದೇಹವು ಮಂಗಳವಾರ ಪಶ್ಚಿಮ ಬಂಗಾಳದ ಕಾಲುವೆಯೊಂದರಲ್ಲಿ ಪತ್ತೆಯಾಗಿದೆ.

'ಪೌಡ್ಯಾಲ್ ಅವರ ಮೃತದೇಹವು ತೀಸ್ತಾ ಕಾಲುವೆಯಲ್ಲಿ ಮಂಗಳವಾರ ತೇಲುತ್ತಿತ್ತು' ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

'ಪ್ರಾಥಮಿಕ ತನಿಖೆ ಆಧಾರದಲ್ಲಿ, ಶವವನ್ನು ತೀಸ್ತಾ ನದಿಯ ಮೇಲ್ದಂಡೆಯಿಂದ ಎಸೆದಿರುವ ಶಂಕೆ ವ್ಯಕ್ತವಾಗಿದೆ. ಕೈಗಡಿಯಾರ ಮತ್ತು ಶವದ ಮೇಲಿದ್ದ ವಸ್ತ್ರದ ಮೂಲಕ ಗುರುತು ಪತ್ತೆಹಚ್ಚಲಾಯಿತು' ಎಂದು ಹೇಳಿದ್ದಾರೆ.

ಪೌಡ್ಯಾಲ್ ಸಾವಿನ ಬಗ್ಗೆ ತನಿಖೆ ಮುಂದುವರಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕೇರಳದಲ್ಲಿ ಭಾರಿ ಮಳೆ: ನಾಲ್ವರು ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರಂ: ಕೇರಳದಲ್ಲಿ ಭಾರಿ ಮಳೆ ಮುಂದುವರಿದಿದ್ದು, ಭಿನ್ನ ಪರಿಣಾಮಗಳಿಂದಾಗಿ ಬುಧವಾರ ನಾಲ್ವರು ಮೃತಪಟ್ಟಿದ್ದಾರೆ.

ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಬುಧವಾರ ರಾಜ್ಯದ ಎಂಟು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಿದೆ. ತಿರುವನಂತಪುರ, ಪಾಲಕ್ಕಾಡ್, ಇಡುಕ್ಕಿ, ಆಲಪ್ಪುಳದಲ್ಲಿ ಒಬ್ಬರು ಮೀನುಗಾರರು ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರಿ ಮಳೆಯಿಂದ ಭೂಕುಸಿತ, ಆಸ್ತಿಪಾಸ್ತಿ ಹಾನಿ ಮತ್ತು ಎಕರೆಗಟ್ಟಲೆ ಕೃಷಿ ಭೂಮಿ ಜಲಾವೃತವಾಗಿದ್ದು, ಹಲವು ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿರುವ ಬಗ್ಗೆ ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಎಚ್ಚರಿಕೆ ನೀಡಿದೆ.

ಕೊಟ್ಟಾಯಂ, ಎರ್ನಾಕುಲಂ, ಇಡುಕ್ಕಿ, ಮಲಪ್ಪುರಂ, ಕೋಯಿಕ್ಕೋಡ್, ವಯನಾಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಐಎಂಡಿ ಆರೆಂಜ್ ಅಲರ್ಟ್ ಘೋಷಿಸಿದೆ. ಅಲ್ಲದೆ ರಾಜ್ಯದ ಉಳಿದ ಆರು ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಿದೆ.

ನದಿಗಳ ತೀರಪ್ರದೇಶದಲ್ಲಿ ವಾಸಿಸುತ್ತಿರುವ ಜನರಿಗೆ ಎಚ್ಚರಿಕೆ ನೀಡಲಾಗಿದೆ. ಎರ್ನಾಕುಲಂನಲ್ಲಿ, ಭೂಕುಸಿತವಾಗಿದ್ದು, ಮನೆಗೆ ಹಾನಿಯಾಗಿದೆ. ಅಲ್ಲಿ ವಾಸಿಸುತ್ತಿದ್ದ ಕುಟುಂಬದವರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಮಂಗಳವಾರ ರಾತ್ರಿಯಿಡೀ ಸುರಿದ ಮಳೆಯಿಂದಾಗಿ 45 ಜನರನ್ನು ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಕೊಟ್ಟಾಯಂ ಜಿಲ್ಲಾಡಳಿತ ತಿಳಿಸಿದೆ.



ಕೋಯಿಕ್ಕೋಡ್‌ನಲ್ಲಿ ಮಳೆಯಿಂದ ಜಲಾವೃತಗೊಂಡ ರಸ್ತೆ —ಪಿಟಿಐ ಚಿತ್ರ

140 ನೆರವು ಸಿಬ್ಬಂದಿ • ಕ್ರೀಡಾಗ್ರಾಮದ ಹೊರಗೆ ಹೆಚ್ಚುವರಿ ಅಧಿಕಾರಿಗಳಿಗೆ ವಸತಿ ವ್ಯವಸ್ಥೆ

ಭಾರತ ಬಳಗದಲ್ಲಿ 117 ಕ್ರೀಡಾಪಟುಗಳು

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ 117 ಕ್ರೀಡಾಪಟುಗಳು ವಿವಿಧ ಕ್ರೀಡೆಗಳಲ್ಲಿ ಸ್ಪರ್ಧಿಸಲಿದ್ದಾರೆ.

ಬುಧವಾರ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಕ್ರೀಡಾಪಟುಗಳೊಂದಿಗೆ 140 ಮಂದಿ ನೆರವು ಸಿಬ್ಬಂದಿ ಹಾಗೂ ಅಧಿಕಾರಿಗಳು ಇದ್ದಾರೆ. ಅವರಲ್ಲಿ ಆಟಗಾರರ 'ಅವಶ್ಯಕತೆ'ಗಳನ್ನು ಪೂರೈಸಲಿರುವ 72 ಮಂದಿಗೆ 'ಸರ್ಕಾರಿ ವೆಚ್ಚ'ದಲ್ಲಿ ತೆರಳುವ ಅವಕಾಶ ಲಭಿಸಿದೆ.

'ಕ್ರೀಡಾಗ್ರಾಮದಲ್ಲಿ ತಂಗಲು ತಂಡವೊಂದರ 67 ಮಂದಿ ನೆರವು ಸಿಬ್ಬಂದಿಗೆ ಅವಕಾಶ ಇದೆ. ಅದರಲ್ಲಿ 11 ಜನ ಐಒಎ ಪ್ರತಿನಿಧಿಸುವ ಅಧಿಕಾರಿಗಳೂ ಸೇರಿದ್ದಾರೆ. ಅದರ ಲ್ಲಿಯೇ ಐವರು ವೈದ್ಯಕೀಯ ತಂಡದ ಸದಸ್ಯರೂ ಸೇರಿರಬೇಕು ಎಂಬ ನಿಯಮವಿದೆ' ಎಂದು ಈಚೆಗೆ ಐಒಎ ಅಧ್ಯಕ್ಷೆ ಪಿ.ಟಿ. ಉಷಾ ಅವರು ಬರೆದ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಅದರಲ್ಲಿ ಅವರು ಕ್ರೀಡಾಪಟುಗಳು ಮತ್ತು ಸಿಬ್ಬಂದಿ ಪ್ರಮಾಣದ ಕುರಿತು ವಿವರಿಸಿದ್ದಾರೆ.

'ಅಥ್ಲೀಟ್‌ಗಳ ಅವಶ್ಯಕತೆಗಳನ್ನು ಪೂರೈಸಲು ಹೆಚ್ಚುವರಿಯಾಗಿ 72 ತರಬೇತುದಾರರು ಮತ್ತು ಇನ್ನಿತರ ನೆರವು ಸಿಬ್ಬಂದಿಗಳಿಗೆ ಅವಕಾಶ ನೀಡ ಲಾಗಿದೆ. ಅವರ ವೆಚ್ಚವನ್ನು ಸರ್ಕಾರವು ಭರಿಸಲಿದೆ. ಅವರಿಗೆ ಕ್ರೀಡಾಗ್ರಾಮದ ಹೊರಗೆ ಇರುವ ಹೋಟೆಲ್ ಮತ್ತಿತರ ತಾಣಗಳಲ್ಲಿ ವಸತಿ ವ್ಯವಸ್ಥೆ ಮಾಡಿಕೊಡಲಾಗುವುದು' ಎಂದು ಸ್ಪಷ್ಟಪಡಿಸಿದ್ದಾರೆ.

ಸದ್ಯ ಹೊರಟಿರುವ ಬಳಗದಲ್ಲಿ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್‌ಗಳದ್ದೇ ದೊಡ್ಡ ದಂಡು ಇದೆ. ಒಟ್ಟು 29 (11 ಮಹಿಳೆಯರು ಮತ್ತು 18 ಪುರುಷರು) ಇದರಲ್ಲಿದ್ದಾರೆ. ನಂತರದ ಸ್ಥಾನಗಳಲ್ಲಿ ಶೂಟಿಂಗ್ (21) ಮತ್ತು ಹಾಕಿ (19) ತಂಡಗಳಿವೆ. ಶೂಟಿಂಗ್ ತಂಡದಲ್ಲಿ 11 ಮಹಿಳೆಯರು ಮತ್ತು 10 ಪುರುಷರು ಇದ್ದಾರೆ.

ಇನ್ನುಳಿದಂತೆ; ಟೇಬಲ್ ಟೆನಿಸ್ (8), ಬ್ಯಾಡ್ಮಿಂಟನ್ (7), ಕುಸ್ತಿ (6), ಆರ್ಚರಿ (6), ಬಾಕ್ಸಿಂಗ್ (6), ಗಾಲ್ಫ್ (4), ಟೆನಿಸ್ (3), ಈಜು (2) ಸೇಲಿಂಗ್ (2) ಹಾಗೂ ಈಕ್ವೆಸ್ಟ್ರಿಯನ್, ಜೂಡೊ, ರೋಯಿಂಗ್ ಮತ್ತು ವೇಟ್‌ಲಿಫ್ಟಿಂಗ್ ಕ್ರೀಡೆಗಳಲ್ಲಿ ತಲಾ ಒಬ್ಬರು ಸ್ಪರ್ಧಿ ಇದ್ದಾರೆ.

ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ, ಎರಡು ಒಲಿಂಪಿಕ್ಸ್ ಪದಕ ವಿಜೇತರಾದ ಪಿ.ವಿ. ಸಿಂಧು, ಬೆಳ್ಳಿ ಪದಕವಿಜೇತ ವೇಟ್‌ಲಿಫ್ಟರ್ ಮೀರಾಬಾಯಿ ಚಾನು, ಬಾಕ್ಸಿಂಗ್ ತಾರೆ ಲವ್ಲೀನಾ ಬೋರ್ಗೊಹೈನ್ ಅವರು ಪ್ರಮುಖ ಆಕರ್ಷಣೆಯಾಗಿದ್ದಾರೆ.

ಅಥ್ಲೆಟಿಕ್ಸ್ ತಂಡಕ್ಕೆ 17 ನೆರವು ಸಿಬ್ಬಂದಿ ಇದ್ದಾರೆ. ಉಳಿದಂತೆ ಕುಸ್ತಿ (12), ಬಾಕ್ಸಿಂಗ್ (11), ಹಾಕಿ (10), ಟೇಬಲ್ ಟೆನಿಸ್ (9), ಬ್ಯಾಡ್ಮಿಂಟನ್ (9), ಗಾಲ್ಫ್ (7), ಈಕ್ವೆಸ್ಟ್ರಿಯನ್ (5), ಆರ್ಚರಿ (4), ಸೇಲಿಂಗ್ (4), ವೇಟ್‌ಲಿಫ್ಟಿಂಗ್ (4), ಟೆನಿಸ್ (3), ಈಜು (2) ಮತ್ತು ಜುಡೊ (1) ಸಿಬ್ಬಂದಿ ಇದ್ದಾರೆ.

ಇದಲ್ಲದೇ ಒಟ್ಟು 21 ಅಧಿಕಾರಿಗಳ ನಿಯೋಗವೂ ಇದ್ದು ಈ ಪೈಕಿ 11 ಜನ ಕ್ರೀಡಾಗ್ರಾಮದೊಳಗಿನ ವಸತಿ ಸೌಕರ್ಯ ಪಡೆಯಲಿದ್ದಾರೆ. ಅದರಲ್ಲಿ ಚೆಫ್ ಡಿ ಮಿಷನ್ ಗಗನ್ ನಾರಂಗ್, ಇಬ್ಬರು ಡೆಪ್ಯೂಟಿ ಚೆಫ್ ಡಿ ಮಿಷನ್, ಒಬ್ಬರು ಮಾಧ್ಯಮ ಸಂಯೋಜಕ, ಇಬ್ಬರು ಕೇಂದ್ರಕಚೇರಿ ಅಧಿಕಾರಿಗಳು ಮತ್ತು ಐವರು ವೈದ್ಯಕೀಯ ತಂಡದ ಸದಸ್ಯರು ಇರುವರು.

ಫ್ರಾನ್ಸ್‌ನಲ್ಲಿರುವ ಭಾರತ ರಾಯಭಾರ ಕಚೇರಿಯ ಅಧಿಕಾರಿ ಏರ್ ಕಮಾಂಡರ್ ಪ್ರಶಾಂತ್ ಆರ್ಯ ಅವರು ಒಲಿಂಪಿಕ್ ಮಾನ್ಯತಾಪತ್ರ ಪಡೆದಿದ್ದಾರೆ. ಅವರು ಕ್ರೀಡಾಗ್ರಾಮಕ್ಕೆ ಭೇಟಿ ನೀಡಿ ಭಾರತ ತಂಡದವರಿಗೆ ಅಗತ್ಯವಿರುವ ಸಹಕಾರ ನೀಡಲಿರುವರು ಎಂದು ಕೇಂದ್ರ ಕ್ರೀಡಾ ಇಲಾಖೆ ಪತ್ರದಲ್ಲಿ ತಿಳಿಸಿದೆ.

2020ರ ಟೋಕಿಯೊ ಒಲಿಂಪಿಕ್ಸ್‌ಗೆ ತೆರಳಿದ್ದ ತಂಡದಲ್ಲಿ ಭಾರತದ 119 ಕ್ರೀಡಾಪಟುಗಳು ಇದ್ದರು. ಆಗ ಭಾರತವು ಒಟ್ಟು 7 ಪದಕ ಗೆದ್ದು ಇತಿಹಾಸ ರಚಿಸಿತ್ತು.



ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭದ್ರತಾ ಕಾರ್ಯ ನಿರ್ವಹಿಸಲು ಭಾರತದಿಂದ ತೆರಳಿರುವ ಸಿಆರ್‌ಪಿಎಫ್‌ನ ಶ್ವಾನಗಳಾದ ವಾಸ್ಟ್ ಮತ್ತು ಡೆನ್ನಿಯೊಂದಿಗೆ ಯೋಧರು –ಪಿಟಿಐ ಚಿತ್ರ

ಪ್ಯಾರಿಸ್ ಒಲಿಂಪಿಕ್ಸ್ ಭದ್ರತೆಗೆ ಭಾರತದ ಶ್ವಾನದಳ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಯೋತ್ಪಾದನಾ ದಾಳಿ ತಡೆ ಭದ್ರತಾ ಕಾರ್ಯಕ್ಕಾಗಿ ಭಾರತೀಯ ಸೇನೆಯಲ್ಲಿ ತರಬೇತುಗೊಂಡ ಶ್ವಾನದಳವನ್ನು ನಿಯೋಜಿಸಲಾಗಿದೆ.

ಕೇಂದ್ರ ಸಶಸ್ತ್ರ ಪೊಲೀಸ್ ಪಡೆ (ಸಿಎಪಿಎಫ್) ಮತ್ತು ವಿಶೇಷ ಕಮಾಂಡೊ ಪಡೆಯ ಭಾರತೀಯ ಕೆ9 (ಕೆನೈನ್) ಹತ್ತು ಶ್ವಾನಗಳ ಪಡೆಯನ್ನು ಪ್ಯಾರಿಸ್‌ಗೆ ಕಳುಹಿಸಲಾಗಿದೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿರುವ ಭದ್ರತಾ ಪಡೆಗಳೊಂದಿಗೆ ಈ ಶ್ವಾನಪಡೆಯು ಕಾರ್ಯನಿರ್ವಹಿಸಲಿದೆ.

'ಈ ಶ್ವಾನಗಳಿಗೆ ಹತ್ತು ವಾರಗಳಿಂದ ವಿಶೇಷ ತರಬೇತಿ ನೀಡಲಾಗಿದೆ. ಭಾರತ ಮತ್ತು ಫ್ರೆಂಚ್ ಸರ್ಕಾರದ ಮನವಿಯ ಮೇರೆಗೆ ಶ್ವಾನಪಡೆ ಮತ್ತು ಅವುಗಳ ನಿರ್ವಾಹಕ ಸಿಬ್ಬಂದಿಯನ್ನು ಕಳುಹಿಸಿಕೊಡಲಾಗಿದೆ' ಎಂದು ಭದ್ರತಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಿಎಪಿಎಫ್, ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್), ಸಶಸ್ತ್ರ ಸೀಮಾ ಬಲ (ಎಸ್‌ಎಸ್‌ಬಿ), ಇಂಡೋ ಟಿಬೆಟಿಯನ್ ಗಡಿ ಪೊಲೀಸ್ (ಐಟಿಬಿಪಿ) ಪಡೆಗಳಿಂದ ಈ ಶ್ವಾನ ಮತ್ತು ನಿರ್ವಾಹಕರನ್ನು ಆಯ್ಕೆ ಮಾಡಲಾಗಿದೆ. ಸಿಆರ್‌ಪಿಎಫ್‌ನ ಶ್ವಾನ ವಾಸ್ಟ್ (5 ವರ್ಷ) ಮತ್ತು ಡೆನ್ನಿ (3 ವರ್ಷ) ಈ ಪಡೆಯಲ್ಲಿವೆ.

ಬೆಂಗಳೂರು ಸಮೀಪದ ತರಳುವಿನಲ್ಲಿರುವ ಸಿಆರ್‌ಪಿಎಫ್ ಶ್ವಾನ ತಳಿ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರದಲ್ಲಿ ಈ ಶ್ವಾನಪಡೆಯ ಸಾಮರ್ಥ್ಯ ಪರೀಕ್ಷೆ ನಡೆಸಿದ ನಂತರ ಪ್ಯಾರಿಸ್‌ಗೆ ಕಳುಹಿಸಲಾಗಿದೆ.

ಅಭಾ ಕಟುವಾ ಹೆಸರು ನಾಪತ್ತೆ!

ಒಲಿಂಪಿಕ್ಸ್‌ಗೆ ಈ ಹಿಂದೆ ಅರ್ಹತೆ ಗಿಟ್ಟಿಸಿದ್ದ ಮಹಿಳಾ ಶಾಟ್‌ಪಟ್ ಅಥ್ಲೀಟ್ ಅಭಾ ಕಟುವಾ ಅವರ ಹೆಸರು ಈ ಪಟ್ಟಿಯಿಂದ ನಾಪತ್ತೆಯಾಗಿದೆ!

ಅಭಾ ಅವರು ವಿಶ್ವ ರ‍್ಯಾಂಕಿಂಗ್ ಆಧಾರದಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಆದರೆ ಕೆಲವು ದಿನಗಳ ಹಿಂದೆ ಅವರ ಹೆಸರು ವಿಶ್ವ ಅಥ್ಲೆಟಿಕ್ಸ್ (ಡಬ್ಲ್ಯುಎ) ಬಿಡುಗಡೆ ಮಾಡಿದ್ದ ಪಟ್ಟಿಯಲ್ಲಿ ಇರಲಿಲ್ಲ. ಅವರಿಗೆ ಯಾವುದೇ ಮಾಹಿತಿ ನೀಡದೇ ಹೆಸರನ್ನು ಕೈಬಿಡಲಾಗಿದೆ.

ಗಾಯ ಅಥವಾ ಉದ್ದೀಪನ ಮದ್ದು ತಡೆ ನಿಯಮ ಉಲ್ಲಂಘನೆಗಾಗಿ ಕೈಬಿಡಲಾಗಿದೆಯೇ ಎಂಬ ಯಾವುದೇ ಕಾರಣಗಳನ್ನೂ ಐಒಎ ಇದುವರೆಗೆ ನೀಡಿಲ್ಲ.

ಡೋಪಿಂಗ್ ತಡೆಗೆ ಸೂಚನೆ

ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವನೆ ಮಾಡಿ ಸಿಕ್ಕಿಬಿದ್ದರೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಅವಮಾನವಾಗುತ್ತದೆ. ಆದ್ದರಿಂದ ಯಾವುದೇ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರವು ಭಾರತ ಒಲಿಂಪಿಕ್ ಸಂಸ್ಥೆ, ಭಾರತೀಯ ಕ್ರೀಡಾ ಪ್ರಾಧಿಕಾರ, ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ) ಹಾಗೂ ಕ್ರೀಡಾ ಫೆಡರೇಷನ್‌ಗಳಿಗೆ ಸೂಚಿಸಿದೆ.

ಗಾಲ್ಫ್ ತಂಡಕ್ಕೆ ಹೋಟೆಲ್ ವಸತಿ

ಪ್ಯಾರಿಸ್ ನಗರದಿಂದ 42 ಕಿ.ಮೀ ದೂರದಲ್ಲಿರುವ ಕ್ವಿಂಟಿನ್ ಎನ್ ವೆಲಿನೆಸ್‌ನಲ್ಲಿ ಗಾಲ್ಫ್ ಸ್ಪರ್ಧೆಗಳು ನಡೆಯಲಿವೆ. ಆದ್ದರಿಂದ ಸ್ಪರ್ಧಾತಾಣಕ್ಕೆ ಸಮೀಪದಲ್ಲಿರುವ ಹೋಟೆಲ್‌ನಲ್ಲಿ ಭಾರತ ಗಾಲ್ಫ್ ತಂಡ, ಕೋಚ್‌ಗಳು, ಫಿಸಿಯೊ ಮತ್ತು ಕ್ಯಾಡಿಗಳಿಗೆ ವಸತಿ ವ್ಯವಸ್ಥೆ ಮಾಡಲಾಗಿದೆ.

'ಗಾಲ್ಫ್ ಆಟಗಾರರು ಮತ್ತು ಭಾರತ ಗಾಲ್ಫ್ ಯೂನಿಯನ್ ಮನವಿಯ ಮೇರೆಗೆ ಸ್ಪರ್ಧಾ ತಾಣಕ್ಕೆ ಹತ್ತಿರವಿರುವ ಹೋಟೆಲ್‌ನಲ್ಲಿ ವಸತಿ ವ್ಯವಸ್ಥೆ ಮಾಡಲಾಗಿದೆ' ಎಂದು ಕೇಂದ್ರ ಕ್ರೀಡಾ ಸಚಿವಾಲಯದ ಪತ್ರದಲ್ಲಿ ಉಲ್ಲೇಖವಾಗಿದೆ.

ಪ್ಯಾರಿಸ್ ಆಯೋಜನೆ ಸಂಘಟನೆಯು ಭಾರತ ತಂಡಕ್ಕೆ ಸ್ಥಳೀಯ ಬಳಕೆಗಾಗಿ ಮೂರು ಕಾರುಗಳನ್ನು ನೀಡಲಿದೆ. ಆದರೆ ಅವುಗಳಿಗೆ ಚಾಲಕರನ್ನು ನೀಡಿಲ್ಲ.

'ತಾತ್ಕಾಲಿಕ ನೇಮಕಾತಿಯ ಮೂಲಕ ಚಾಲಕರನ್ನು ನೇಮಕ ಮಾಡಿಕೊಡುವಂತೆ ರಾಯಭಾರ ಕಚೇರಿಯು ಆಯೋಜಕರಿಗೆ ಮನವಿ ಮಾಡಿದೆ' ಎಂದು ಸಚಿವಾಲಯ ತಿಳಿಸಿದೆ.

ಡಬಲ್ಸ್‌ನಲ್ಲಿ ನಗಾಲ್‌ಗೆ ನಿರಾಸೆ


ಸುಮಿತ್ ನಗಾಲ್

ಬೊಸ್ಟಾಡ್, ಸ್ವೀಡನ್ (ಪಿಟಿಐ): ಭಾರತದ ಸುಮಿತ್ ನಗಾಲ್ ಮತ್ತು ಅವರ ಪೋಲೆಂಡ್‌ನ ಜೊತೆಗಾರ ಕರೋಲ್ ಡ್ರೆಜೆವಿಕಿ ಅವರು ನಾರ್ಡಿಯಾ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ಮಂಗಳವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಭಾರತ– ಪೋಲೆಂಡ್ ಜೋಡಿಯು 3–6, 4–6 ಸೆಟ್‌ಗಳಿಂದ ಫ್ರಾನ್ಸ್‌ನ ಅಲೆಕ್ಸಾಂಡ್ರೆ ಮುಲ್ಲರ್ ಮತ್ತು ಲುಕಾ ವ್ಯಾನ್ ಅಶ್ ಅವರಿಗೆ ಮಣಿಯಿತು.

26 ವರ್ಷದ ನಗಾಲ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದ್ದು, ಗುರುವಾರ ಅರ್ಜೆಂಟೀನಾದ ಮರಿಯಾನೊ ನವೋನ್ ಅವರನ್ನು ಎದುರಿಸುವರು.

ಈ ಮಧ್ಯೆ ಭಾರತದ ಅನುಭವಿ ಆಟಗಾರ ರೋಹನ್ ಬೋಪಣ್ಣ ಮತ್ತು ಎನ್.ಶ್ರೀರಾಮ್ ಬಾಲಾಜಿ ಅವರು ಜರ್ಮನಿಯ ಹ್ಯಾಂಬರ್ಗ್‌ನಲ್ಲಿ ನಡೆಯುತ್ತಿರುವ ಹ್ಯಾಂಬರ್ಗ್ ಓಪನ್‌ನಲ್ಲಿ ಕಣಕ್ಕೆ ಇಳಿಯಲಿದ್ದಾರೆ.

ಗುರುವಾರ ನಡೆಯುವ ಮೊದಲ ಸುತ್ತಿನಲ್ಲಿ ಜರ್ಮನಿಯ ಜೇಕಬ್ ಶ್ನೈಟರ್ ಮತ್ತು ಮಾರ್ಕ್ ವಾಲ್ನರ್ ಅವರ ವಿರುದ್ಧ ಅಭಿಯಾನ ಆರಂಭಿಸುವರು.

ಜುಲೈ 26ರಿಂದ ಆರಂಭವಾಗುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೋಪಣ್ಣ ಮತ್ತು ಬಾಲಾಜಿ ಅವರು ಪುರುಷರ ಡಬಲ್ಸ್‌ನಲ್ಲಿ ಕಣಕ್ಕೆ ಇಳಿಯುವರು.

ಟಿ20 ತಂಡಕ್ಕೆ ಸೂರ್ಯಕುಮಾರ್ ಯಾದವ್ ನಾಯಕ ?

ನವದೆಹಲಿ (ಪಿಟಿಐ): ಸ್ಫೋಟಕ ಶೈಲಿಯ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರು ಭಾರತ ಟಿ20 ತಂಡದ ನಾಯಕರಾಗಿ ಹೊರಹೊಮ್ಮಿದ್ದಾರೆ.

ನೂತನ ಕೋಚ್ ಗೌತಮ್ ಗಂಭೀರ್ ಮತ್ತು ಆಯ್ಕೆ ಸಮಿತಿಯ ಮುಖ್ಯಸ್ಥ ಅಜಿತ್ ಅಗರಕರ್ ಅವರು ಸೂರ್ಯಕುಮಾರ್ ಅವರಿಗೆ ಅವಕಾಶ ನೀಡಲು ಚಿತ್ತ ಹರಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಇದರಿಂದಾಗಿ ಹಾರ್ದಿಕ್ ಪಾಂಡ್ಯ ಅವರು ಉಪನಾಯಕನಾಗಿ ಮುಂದುವರಿಸುವ ಸಾಧ್ಯತೆ ಹೆಚ್ಚಿದೆ.

ಮಂಗಳವಾರದ ವರದಿಗಳ ಪ್ರಕಾರ; ಮುಂಬರುವ ಶ್ರೀಲಂಕಾ ಪ್ರವಾಸದ ಟಿ20 ಸರಣಿಯಲ್ಲಿ ಹಾರ್ದಿಕ್ ನಾಯಕತ್ವ ವಹಿಸಲಿದ್ದಾರೆ ಎಂದಿತ್ತು. ಆದರೆ ಸೂರ್ಯಕುಮಾರ್ ಯಾದವ್ ಅವರು ಈ ಪ್ರವಾಸಕ್ಕೆ ಲಭ್ಯವಿರುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಅವರಿಗೆ ನಾಯಕತ್ವದ ಹೊಣೆ ನೀಡುವುದು ಬಹುತೇಕ ಖಚಿತವಾಗಿದೆ ಎಂದು ಮೂಲಗಳು ತಿಳಿಸಿವೆ.ಟಿ20 ವಿಶ್ವಕಪ್ ಗೆಲುವಿನ ನಂತರ ರೋಹಿತ್ ಶರ್ಮಾ ಅವರು ಚುಟುಕು ಮಾದರಿ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ. ಸೂರ್ಯಕುಮಾರ್ ಅವರು ಹೋದ ವರ್ಷ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಎದುರಿನ ಸರಣಿಗಳ ಎಂಟು ಪಂದ್ಯಗಳಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದರು.

ರ‍್ಯಾಂಕಿಂಗ್: 6ನೇ ಸ್ಥಾನಕ್ಕೆ ಜೈಸ್ವಾಲ್

ದುಬೈ (ಪಿಟಿಐ): ಭಾರತ ತಂಡದ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಅವರು ಬುಧವಾರ ಬಿಡುಗಡೆಯಾದ ಐಸಿಸಿ ಟಿ20 ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲಿ 6ನೇ ಸ್ಥಾನಕ್ಕೆ ಏರಿದ್ದಾರೆ.

ಜಿಂಬಾಬ್ವೆ ವಿರುದ್ಧದ ಸರಣಿಯಲ್ಲಿ ಒಟ್ಟು 141 ರನ್ ಗಳಿಸಿ ಮಿಂಚಿದ್ದ ಜೈಸ್ವಾಲ್ (743 ಅಂಕ) ಅವರಿಗೆ ನಾಲ್ಕು ಸ್ಥಾನಗಳ ಬಡ್ತಿ ದೊರಕಿದೆ.

ಸೂರ್ಯಕುಮಾರ್ ಯಾದವ್ (797 ಅಂಕ) ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ (844) ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. ಜಿಂಬಾಬ್ವೆ ವಿರುದ್ಧದ ಸರಣಿಯನ್ನು ಭಾರತ 4–1ರಿಂದ ಗೆದ್ದುಕೊಂಡಿತ್ತು. ಈ ಸರಣಿಯ ಬಳಿಕ ರ‍್ಯಾಂಕಿಂಗ್ ಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ಪಂಘಲ್ ನೆರವು ಸಿಬ್ಬಂದಿಗೆ ವೀಸಾ ವಿಳಂಬ: ಅಡ್‌ಹಾಕ್ ಸಮಿತಿ ವಿರುದ್ಧ ಉಷಾ ಆಕ್ರೋಶ



ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಸಂಘಟಕರಿಗೆ ಕಳುಹಿಸಲಾದ ಪಟ್ಟಿಯಲ್ಲಿ ಕುಸ್ತಿಪಟು ಅಂತಿಮ ಪಂಘಲ್ ಅವರ ತರಬೇತುದಾರರ ಹೆಸರನ್ನು ಕೈಬಿಟ್ಟಿರುವುದಕ್ಕೆ ಭಾರತ ಕುಸ್ತಿ ಫೆಡರೇಷನ್‌ನ ಅಡ್‌ಹಾಕ್ ಸಮಿತಿ ವಿರುದ್ಧ ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಪಿ.ಟಿ. ಉಷಾ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ ಅಮಾನತಿನಲ್ಲಿದ್ದಾಗ ಅಡ್‌ಹಾಕ್ ಸಮಿತಿಯು ಸಂಘಟಕರಿಗೆ ಹೆಸರುಗಳ ಪಟ್ಟಿಯನ್ನು ಕಳುಹಿಸಿತ್ತು. ಈ ವೇಳೆ ಸಮಿತಿಯು ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲ ಎಂದು ಅವರು ಆಕ್ಷೇಪಿಸಿದ್ದಾರೆ.

ಪ್ಯಾರಿಸ್‌ಗೆ ಪಂಘಲ್ ಅವರ ಆದ್ಯತೆಯ ತರಬೇತುದಾರರಿಗೆ ವೀಸಾ ಮಂಜೂರು ವಿಳಂಬವಾದ ಹಿನ್ನೆಲೆಯಲ್ಲಿ ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಹಿಸಾರ್‌ನಲ್ಲಿ ತರಬೇತಿ ಪಡೆಯುತ್ತಿರುವ 19 ವರ್ಷದ ಪಂಘಲ್, 2023ರಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆಲ್ಲುವ ಮೂಲಕ ಪ್ಯಾರಿಸ್ ಕ್ರೀಡಾಕೂಟಕ್ಕೆ ಅರ್ಹತೆ ಗಳಿಸಿದ ಭಾರತದ ಮೊದಲ ಕುಸ್ತಿಪಟುವಾಗಿದ್ದಾರೆ.

ಪಂಘಲ್ ಅವರು ತನ್ನ ಕೋಚ್‌ಗಳಾದ ಭಗತ್ ಸಿಂಗ್, ವಿಕಾಸ್ ಮತ್ತು ಫಿಸಿಯೋಥೆರಪಿಸ್ಟ್ ಹೀರಾ ಅವರೊಂದಿಗೆ ಪ್ಯಾರಿಸ್‌ಗೆ ತೆರಳಲು ಬಯಸಿದ್ದು, ಈ ಎಲ್ಲರ ಹೆಸರುಗಳಿಗೆ ಐಒಸಿ ಹಸಿರುನಿಶಾನೆ ನೀಡಿತ್ತು. ಆದರೆ, ನೆರವು ಸಿಬ್ಬಂದಿಯು ಇನ್ನೂ ವೀಸಾ ಮಂಜೂರಾತಿಗಾಗಿ ಕಾಯುತ್ತಿದ್ದಾರೆ.

ಭೂಪೇಂದ್ರ ಸಿಂಗ್ ಬಾಜ್ವಾ ಮುಖ್ಯಸ್ಥರಾಗಿದ್ದ ಅಡ್‌ಹಾಕ್ ಸಮಿತಿಯಲ್ಲಿ ಎಂ.ಎಂ. ಸೋಮಯ್ಯ ಮತ್ತು ಮಂಜುಷಾ ಕನ್ವರ್ ಸದಸ್ಯರಾಗಿದ್ದರು.

ಆರು ಪೈಲ್ವಾನರ ಮೇಲೆ ಪದಕ ನಿರೀಕ್ಷೆಯ ಭಾರ

ನವದೆಹಲಿ (ಪಿಟಿಐ): ಭಾರತದ ಕುಸ್ತಿಪಟುಗಳು 2008ರಿಂದ ಇಲ್ಲಿಯವರೆಗೂ ನಡೆದ ಒಲಿಂಪಿಕ್ ಕೂಟಗಳಲ್ಲಿ ಪದಕಗಳ ಕೊಡುಗೆ ನೀಡಿದ್ದಾರೆ. ಇದೇ 26ರಂದು ಆರಂಭವಾಗುವ ಪ್ಯಾರಿಸ್ ಕೂಟದಲ್ಲೂ ಭಾರತದ ಪೈಲ್ವಾನರ ಮೇಲೆ ನಿರೀಕ್ಷೆಯ ಭಾರ ಹೆಚ್ಚಿದೆ.

ಸತತ ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಯಶಸ್ಸು ಪಡೆದ ನಂತರ ಭಾರತದಲ್ಲಿ ಕುಸ್ತಿ ಕ್ರೀಡೆಗೆ ವಿಶೇಷ ಉತ್ತೇಜನ ನೀಡಲಾಗುತ್ತಿದೆ. ಜೂನಿಯರ್ ವಿಭಾಗದಲ್ಲೂ ಭಾರತದ ಕುಸ್ತಿಪಟುಗಳು ಮಿಂಚುತ್ತಿರು ವುದರಿಂದ ಪ್ಯಾರಿಸ್‌ನಲ್ಲಿ ದೊಡ್ಡ ಯಶಸ್ಸಿನ ಭರವಸೆಯನ್ನು ಮೂಡಿಸಿದೆ.

2008ರಲ್ಲಿ ಚೀನಾದ ಬೀಜಿಂಗ್‌ನಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಸುಶೀಲ್ ಕುಮಾರ್ ಅವರು ಕುಸ್ತಿಯಲ್ಲಿ ಭಾರತಕ್ಕೆ ಮೊದಲ ಪದಕವನ್ನು (ಕಂಚು) ತಂದುಕೊಟ್ಟರು. ಅದಾದ ನಾಲ್ಕು ವರ್ಷಗಳ ಬಳಿಕ ಲಂಡನ್‌ನಲ್ಲಿ ನಡೆದ ಕೂಟದಲ್ಲಿ ಯೋಗೇಶ್ವರ್ ದತ್ ಅವರು ಬೆಳ್ಳಿ ಪದಕವನ್ನು ಜಯಿಸಿದರು.

ಸಾಕ್ಷಿ ಮಲಿಕ್ ಅವರು 2016ರಲ್ಲಿ ರಿಯೊದಲ್ಲಿ ಕಂಚಿನ ಪದಕವನ್ನು ಜಯಿಸುವ ಮೂಲಕ ಅದೇ 'ಟ್ರೆಂಡ್' ಮುಂದುವರೆಸಿದರು. 2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಇಬ್ಬರು ಕುಸ್ತಿಪಟುಗಳು ಪದಕಗಳನ್ನು ಗೆದ್ದು ದಾಖಲೆ ನಿರ್ಮಿಸಿದರು. ಅಲ್ಲಿ, ರವಿ ದಹಿಯಾ ಮತ್ತು ಬಜರಂಗ್ ಪೂನಿಯಾ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಕುಸ್ತಿಯಲ್ಲಿ ಭಾರತ ಹೊಸ ಎತ್ತರಕ್ಕೆ ಏರುತ್ತಿರುವ ಹೊತ್ತಿನಲ್ಲಿ ಉಂಟಾದ ಗೊಂದಲದ ವಾತಾವರಣವು ಕ್ರೀಡೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಭಾರತ ಕುಸ್ತಿ ಫೆಡರೇಷನ್‌ನ ಹಿಂದಿನ ಅಧ್ಯಕ್ಷರ ವಿರುದ್ಧ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ದೌರ್ಜನ್ಯ ನೀಡಿದ ಗಂಭೀರ ಆರೋಪ ಕೇಳಿಬಂತು. ಹೀಗಾಗಿ ಅವರ ವಿರುದ್ಧ ಖ್ಯಾತನಾಮ ಕುಸ್ತಿಪಟುಗಳು ಬೀದಿಗೆ ಇಳಿದು, ಸುದೀರ್ಘ ಸಮಯ ಪ್ರತಿಭಟನೆ ನಡೆಸಿದರು. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಸುದ್ದಿಯಾಯಿತು.

ಮತ್ತೊಂದೆಡೆ ರಾಷ್ಟ್ರೀಯ ಶಿಬಿರಗಳು ಮತ್ತು ರಾಷ್ಟ್ರ ಮಟ್ಟದ ಸ್ಪರ್ಧೆಗಳು ಸ್ಥಗಿತಗೊಂಡವು. ನಿಗದಿತ ಸಮಯಕ್ಕೆ ಚುನಾವಣೆ ನಡೆಸದ ಕಾರಣ ಭಾರತ ಕುಸ್ತಿ ಫೆಡರೇಷನ್ ಅನ್ನು ವಿಶ್ವ ಕುಸ್ತಿ ಸಂಸ್ಥೆ ಅಮಾನತು ಮಾಡಿತ್ತು. ನಂತರದಲ್ಲಿ ಚುನಾವಣೆ ನಡೆದು, ಹೊಸ ಸಮಿತಿ ಅಸ್ತಿತ್ವಕ್ಕೆ ಬಂದು ಅಮಾನತು ರದ್ದುಗೊಂಡಿದೆ. ಈ ಎಲ್ಲಾ ಬೆಳವಣಿಗೆಗಳ ನಡುವೆಯೂ ಪ್ಯಾರಿಸ್ ಕೂಟಕ್ಕೆ ಒಬ್ಬ ಪುರುಷ ಮತ್ತು ಐವರು ಮಹಿಳಾ ಕುಸ್ತಿಪಟುಗಳು ಅರ್ಹತೆ ಸಂಪಾದಿಸಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್ ಭಾರತದ ಕುಸ್ತಿಪಟುಗಳು

ಹೆಸರು	ವಿಭಾಗ
ಅಮನ್ ಸೆಹ್ರಾವತ್	ಪುರುಷರ 57 ಕೆಜಿ
ವಿನೇಶಾ ಫೋಗಾಟ್	ಮಹಿಳೆಯರ 50 ಕೆಜಿ
ಅಂತಿಮ ಪಂಘಲ್	ಮಹಿಳೆಯರ 53 ಕೆಜಿ
ಅನ್ಶು ಮಲಿಕ್	ಮಹಿಳೆಯರ 57 ಕೆಜಿ
ನಿಶಾ ದಹಿಯಾ	ಮಹಿಳೆಯರ 68 ಕೆಜಿ
ರಿತಿಕಾ ಹೂಡಾ	ಮಹಿಳೆಯರ 76 ಕೆಜಿ


ವಿನೇಶಾ ಅಂತಿಮ ಅನ್ಶು ರಿತಿಕಾ ಅಮನ್ ನಿಶಾ

ಬ್ಯಾಸ್ಕೆಟ್‌ಬಾಲ್: ಜೆಎಸ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಎಸ್‌ಸಿ ತಂಡವು ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಲೀಗ್ ಪಂದ್ಯದಲ್ಲಿ 67–63ರಿಂದ ಯಂಗ್ ಒರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಮಣಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಜೆಎಸ್‌ಸಿ ತಂಡದ ಸಂಜನಾ (22), ಆಧ್ಯಾ (21) ಮತ್ತು ಒರಿಯನ್ಸ್‌ನ ಸರಯು (20) ಅಮೋಘ ಆಟವಾಡಿದರು.

ಮೌಂಟ್ಸ್ ಕ್ಲಬ್ ತಂಡವು 59–48 ರಿಂದ ಸೌಥರ್ನ್ ಬ್ಲ್ಯೂ ತಂಡದ ವಿರುದ್ಧ ಗೆಲುವು ಸಾಧಿಸಿತು. ಮೌಂಟ್ಸ್ ಪರ ಪಾವನಿ 24 ಮತ್ತು ಸೌಥರ್ನ್ ಬ್ಲ್ಯೂ ಪರ ನಿಧಿ 16 ಅಂಕ ಗಳಿಸಿದರು.

ಬೀಗ್ಲೆಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 73–55ರಿಂದ ರಾಜ್‌ಮಹಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಸೋಲಿಸಿತು. ಬೀಗ್ಲೆಸ್ ಪರ ಸಂಜನಾ 19, ಚಂದನಾ 18, ಮತ್ತು ರಾಜ್‌ಮಹಲ್ ಪರ ನಿಖಿತಾ 15, ಆಧ್ಯಾ 12 ಅಂಕ ಗಳಿಸಿದರು.

ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಮೈಸೂರು ತಂಡವು 82–37ರಿಂದ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ವಿದ್ಯಾನಗರ ತಂಡವನ್ನು ಸುಲಭವಾಗಿ ಸೋಲಿಸಿತು. ಮೈಸೂರು ಪರ ಮೇಘನಾ 24, ಪ್ರೀತಿ 13, ಶಕ್ತಿ 10 ಮತ್ತು ವಿದ್ಯಾನಗರ ಪರ ದೀಪಿಕಾ 15 ಅಂಕ ದಾಖಲಿಸಿದರು.

ಸಂಜೆ ನಡೆದ ಪಂದ್ಯದಲ್ಲಿ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಮೈಸೂರು ತಂಡವು 50–43ರಿಂದ ಸೌಥರ್ನ್ ಬ್ಲ್ಯೂ ತಂಡವನ್ನು ಸೋಲಿಸಿತು.

ಬೀಗ್ಲೆಸ್ ತಂಡವು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 72–33ರಿಂದ ಜೆಎಸ್‌ಸಿ ತಂಡವನ್ನು ಮಣಿಸಿತು. ಯಂಗ್ ಒರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು 73–70ರಿಂದ ರಾಜ್‌ಮಹಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿತು. ಮೌಂಟ್ಸ್ ಕ್ಲಬ್ ತಂಡವು 60–39ರಿಂದ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ವಿದ್ಯಾನಗರ ತಂಡದ ವಿರುದ್ಧ ಗೆಲುವು ಸಾಧಿಸಿತು.


ಕರ್ನಾಟಕ ಕ್ರಿಕೆಟ್ ಅಂಪೈರ್‌ಗಳ ಸಂಘಕ್ಕೆ ಆಯ್ಕೆಯಾದ ಪದಾಧಿಕಾರಿಗಳು. (ಎಡದಿಂದ), ಕುಳಿತವರು: ನಿಕಟಪೂರ್ವ ಅಧ್ಯಕ್ಷ ವಿವೇಕಾನಂದ ಕಿಣಿ , ಗೌರವ ಕಾರ್ಯದರ್ಶಿ ಜೆ.ನಾಗರಾಜ, ಅಧ್ಯಕ್ಷ ಆರ್‌.ವಿ.ಪ್ರಧಾನಕುಮಾರ್ ಅರಸ್, ಉಪಾಧ್ಯಕ್ಷ ಬಿ.ಎಸ್. ರಘೋತ್ತಮ್, ಖಜಾಂಚಿ ಜೆ. ರಾಹುಲ್ ರಾಜ್, ಜಂಟಿ ಗೌರವ ಕಾರ್ಯದರ್ಶಿ ಎಂ.ಆರ್. ಯೋಗಾನರಸಿಂಹ, ನಿಂತಿರುವವರು; ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ಆರ್. ರವೀಂದ್ರನಾಥ್, ಎನ್.ಶಶಿಧರ್, ಎಂ.ಎಸ್.ಸುಹಾಸ್, ಮಿಥುನ್ ಎಸ್.ಪಾಟೀಲ.

ಸೆಮಿಫೈನಲ್‌ಗೆ ಸರ್ವಜ್ಞನಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಜ್ಞನಗರ ಮತ್ತು ಸಿ.ವಿ.ರಾಮನ್ ನಗರ ವಿಧಾನಸಭಾ ಕ್ಷೇತ್ರ ತಂಡಗಳು ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿವೆ.

ಸರ್ವಜ್ಞನಗರ ತಂಡವು 3–0 ಗೋಲುಗಳ ಅಂತರದಲ್ಲಿ ಕೆ.ಆರ್. ಪುರ ತಂಡವನ್ನು ಸೋಲಿಸಿತು. ಸರ್ವಜ್ಞ ನಗರದ ಪರ ಮೊದಲ ಗೋಲು ಗಳಿಸಿದ ಯೋಗಿತ್ (45ನೇ ನಿ) ತಂಡಕ್ಕೆ ಮುನ್ನಡೆ ಒದಗಿಸಿದರು.


ನಂತರ ಪೆನಾಲ್ಟಿ ಅವಕಾಶವನ್ನು ಬಳಸಿಕೊಂಡ ನರೇಂದ್ರ ಪ್ರಸಾದ್ (49ನೇ ನಿ) ಚೆಂಡನ್ನು ಗೋಲು ಪೆಟ್ಟಿಗೆಗೆ ಸೇರಿಸಿದರು. ನರೇಂದ್ರ (55ನೇ ನಿ) ಮತ್ತೊಂದು ಗೋಲನ್ನು ತಂಡಕ್ಕೆ ಉಡುಗುರೆಯಾಗಿ ನೀಡಿದರು.

ಉತ್ತಮ ಪೈಪೋಟಿ ನೀಡಿದ ಕೆ.ಆರ್.ಪುರ ತಂಡ ಗೋಲು ಗಳಿಸುವ ಅವಕಾಶಗಳನ್ನು ಕೈಚೆಲ್ಲಿತು.

ನಿಖಿಲ್ ರಾಜ್ ಎಂ.(23 ಮತ್ತು 49ನೇ ನಿ) ಅವರ ಉತ್ತಮ ಆಟದ ನೆರವಿನಿಂದ ಸಿ.ವಿ.ರಾಮನ್‌ನಗರ ವಿಧಾನಸಭಾ ಕ್ಷೇತ್ರ ತಂಡವು 2–0 ಅಂತರದಲ್ಲಿ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ತಂಡದ ವಿರುದ್ಧ ಜಯಗಳಿಸಿತು.

ಶುಕ್ರವಾರ ಶಾಂತಿನಗರ ಮತ್ತು ರಾಜಾಜಿನಗರ, ಸರ್ವಜ್ಞನಗರ ಮತ್ತು ಸಿ.ವಿ.ರಾಮನ್ ನಗರ ತಂಡಗಳು ಫೈನಲ್ ಪ್ರವೇಶಕ್ಕಾಗಿ ಸೆಣಸಲಿವೆ.

ಜೂನಿಯರ್ ಸ್ಕ್ವಾಷ್: ಶೌರ್ಯಗೆ ಕಂಚಿನ ಪದಕ



ನವದೆಹಲಿ (ಪಿಟಿಐ): ಭಾರತದ ಶೌರ್ಯ ಬಾವಾ ಅವರು ಹೂಸ್ಟನ್‌ನಲ್ಲಿ ನಡೆಯುತ್ತಿರುವ ವಿಶ್ವ ಜೂನಿಯಷ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕಕ್ಕೆ ತೃಪ್ತಿಪಟ್ಟರು.

ಪುರುಷರ ಸಿಂಗಲ್ಸ್‌ನ ಸೆಮಿಫೈನಲ್‌ನಲ್ಲಿ 5-11, 5-11, 9-11ರಿಂದ ಮೊಹಮ್ಮದ್ ಜಕಾರಿಯಾ (ಈಜಿಪ್ಟ್) ಅವರಿಗೆ ಮಣಿದರು.

ಕುಶ್ ಕುಮಾರ್ (2014) ನಂತರ ವಿಶ್ವ ಜೂನಿಯರ್‌ನಲ್ಲಿ ಸೆಮಿಫೈನಲ್ ತಲುಪಿದ ಭಾರತದ ಎರಡನೇ ಸ್ಪರ್ಧಿ ಶೌರ್ಯ ಆಗಿದ್ದಾರೆ.

ಫೆನ್ಸಿಂಗ್: ಸೆಜಲ್‌ಗೆ ಡಬಲ್ ಪದಕ

ಪ್ರಜಾವಾಣಿ ವಾರ್ತೆ


ಬೆಳ್ಳಿ ಪದಕದೊಂದಿಗೆ ಸೆಜಲ್

ಬೆಂಗಳೂರು: ಇಲ್ಲಿನ ಆರ್ಮಿ ಪಬ್ಲಿಕ್ ಸ್ಕೂಲ್‌ನ ಸೆಜಲ್ ಗುಲಿಯಾ ಅವರನ್ನು ಒಳಗೊಂಡ ಭಾರತ ತಂಡವು ನ್ಯೂಜಿಲೆಂಡ್‌ನ ಕ್ರೈಸ್ಟ್‌ಚರ್ಚ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕೆಡೆಟ್ ಫೆನ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿತು.


ಜುಲೈ 12ರಿಂದ 14ರವರೆಗೆ ನಡೆದ ಟೂರ್ನಿಯ ಫೈನಲ್‌ನಲ್ಲಿ ಇಂಗ್ಲೆಂಡ್ ತಂಡದ ವಿರುದ್ಧ ಪೈಪೋಟಿ ನೀಡಿದ ಭಾರತ ಕೂದಲೆಳೆಯ ಅಂತರದಲ್ಲಿ ಚಿನ್ನವನ್ನು ತಪ್ಪಿಸಿಕೊಂಡಿತು. ಟೂರ್ನಿ ಯುದ್ದಕ್ಕೂ ಸೆಜಲ್ ಉತ್ತಮ ಆಟ ಪ್ರದರ್ಶಿಸಿದರು. ಅವರು ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಾರೆ.

ವೈಯಕ್ತಿಕ ಸ್ಪರ್ಧೆಯಲ್ಲಿ ಕಂಚು: ಇದೇ ಕೂಟದಲ್ಲಿ ಸೆಜಲ್ ಅವರು ವೈಯಕ್ತಿಕ ಜೂನಿಯರ್ ಬಾಲಕಿಯರ ಎಪಿ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು.

2022ರಲ್ಲಿ ಲಂಡನ್‌ನಲ್ಲಿ ನಡೆದ ಕಾಮನ್‌ವೆಲ್ತ್ ಫೆನ್ಸಿಂಗ್ ಚಾಂಪಿಯನ್ ಷಿಪ್‌ನಲ್ಲಿ ಕಂಚು ಗೆದ್ದ ಭಾರತ ತಂಡದಲ್ಲಿ ಸೆಜಲ್ ಅತಿ ಕಿರಿಯ ಆಟಗಾರ್ತಿ ಯಾಗಿದ್ದರು. ಈ ವರ್ಷದ ಫೆಬ್ರುವರಿ ಯಲ್ಲಿ ಬಹರೈನ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲೂ ಅವರು ಭಾರತವನ್ನು ಪ್ರತಿನಿಧಿಸಿದ್ದರು.

ಕೆಎಸ್‌ಸಿಎ ಟಿ20 ಸೂಪರ್ ಲೀಗ್: ಸಾಹಿಲ್ ಮಿಂಚು

ಜೈದುರ್‌ಗೆ ಎರಡನೇ ಜಯ



ಬೆಂಗಳೂರು: ಸಾಹಿಲ್ ಶರ್ಮಾ ಅವರ ಪರಿಣಾಮಕಾರಿ ಬೌಲಿಂಗ್ ದಾಳಿ (14ಕ್ಕೆ3) ಮತ್ತು ಆರ್ಯನ್ ಬಿ.ವಿ. (66 ರನ್) ಅವರ ಅರ್ಧಶತಕದ ನೆರವಿನಿಂದ ಜೈದುರ್ ಕ್ರಿಕೆಟರ್ಸ್ ತಂಡವು ಕೆಎಸ್‌ಸಿಎ ಟಿ20 ಸೂಪರ್ ಲೀಗ್ ಜಿ. ಕಸ್ತೂರಿರಂಗನ್ ಸ್ಮಾರಕ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಜಯ ದಾಖಲಿಸಿತು.

ಆಲೂರು ಕ್ರೀಡಾಂಗಣ–1ರಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜಯನಗರ ಕ್ರಿಕೆಟರ್ಸ್ ತಂಡವು 20 ಓವರ್‌ಗಳಲ್ಲಿ ಎಂಟು ವಿಕೆಟ್‌ಗೆ 152 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಜೈದುರ್ ತಂಡವು ಇನ್ನೂ ಎಂಟು ಎಸೆತ ಬಾಕಿ ಇರುವಂತೆ ಏಳು ವಿಕೆಟ್‌ಗೆ 153 ರನ್ ಗಳಿಸಿ ಮೂರು ವಿಕೆಟ್‌ಗಳ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಆಲೂರು ಕ್ರೀಡಾಂಗಣ–1: ಜಯನಗರ ಕ್ರಿಕೆಟರ್ಸ್: 20 ಓವರ್‌ಗಳಲ್ಲಿ 8ಕ್ಕೆ 152 (ಪೃಥ್ವಿರಾಜ್ 54, ಸೀನ್ ಪ್ರತ್ಯೂಷ್ ಸಿರಿಲ್ 40, ಶಾಹಿಲ್ ಶರ್ಮಾ 14ಕ್ಕೆ 3, ನವೀನ್ ಎಂ.ಬಿ. 26ಕ್ಕೆ 2). ಜೈದುರ್ ಕ್ರಿಕೆಟರ್ಸ್: 18.4 ಓವರ್‌ಗಳಲ್ಲಿ 7ಕ್ಕೆ 153 (ಆರ್ಯನ್ ಬಿ.ವಿ. 66, ಸಂಜು ಬಿ.ಟಿ. ಔಟಾಗದೇ 34, ಪೃಥ್ವಿರಾಜ್ 22ಕ್ಕೆ 3, ಶೀತಲ್ ಕುಮಾರ್ 25ಕ್ಕೆ 2). ಫಲಿತಾಂಶ: ಜೈದುರ್ ತಂಡಕ್ಕೆ ಮೂರು ವಿಕೆಟ್‌ಗಳ ಜಯ.

ಗ್ರೀನ್ ಸ್ಪೋರ್ಟ್ಸ್ ವಿಲೇಜ್: ಜವಾಹರ್ ಸ್ಪೋರ್ಟ್ಸ್ ಕ್ಲಬ್: 20 ಓವರ್‌ಗಳಲ್ಲಿ 8ಕ್ಕೆ 127 (ಆನಂದ್ ಗೌಡ 35, ಗೌರವ್ ವೆಂಕಟೇಶ್ 28ಕ್ಕೆ 2, ಕುಶಾಲ್ 23ಕ್ಕೆ 2). ಸಿಟಿ ಜಿಮ್‌ಖಾನಾ 18.2 ಓವರ್‌ಗಳಲ್ಲಿ 38 (ಮೊಹಮ್ಮದ್ ಸುಫಿಯಾನ್ ಶರೀಫ್ 9ಕ್ಕೆ 6). ಫಲಿತಾಂಶ: ಜವಾಹರ್ ತಂಡಕ್ಕೆ 89 ರನ್‌ಗಳ ಜಯ.

ಸಿಎಂಆರ್ ಯುನಿವರ್ಸಿಟಿ: ಬೆಂಗಳೂರು ಒಕೇಷನಲ್ಸ್: 20 ಓವರ್‌ಗಳಲ್ಲಿ 4ಕ್ಕೆ 221 (ರಾಜವೀರ್ ವಾಧ್ವಾ 46, ಸೂರಜ್ ಅಹುಜಾ 40, ಕ್ರಾಂತಿ ಕುಮಾರ್ 47, ದಕ್ಷತ್ ಪಿ. 53ಕ್ಕೆ 2). ಫ್ರೆಂಡ್ಸ್ ಇಲೆವೆನ್ ಸಿಸಿ (ದೊಡ್ಡಬಳ್ಳಾಪುರ) 20 ಓವರ್‌ಗಳಲ್ಲಿ 8 ವಿಕೆಟ್‌ಗೆ 76 (ಮಿಲನ್ ಬೋಪಣ್ಣ, ನಮನ್ ಜಿ.ಡಿ. 5ಕ್ಕೆ 4, ಕ್ರಾಂತಿ ಕುಮಾರ್ 9ಕ್ಕೆ 2). ಫಲಿತಾಂಶ: ಬೆಂಗಳೂರು ಒಕೇಷನಲ್ಸ್ ತಂಡಕ್ಕೆ 145 ರನ್‌ಗಳ ಜಯ.

(ಮಾಹಿತಿ: ಕೆಎಸ್‌ಸಿಎ ವೆಬ್‌ಸೈಟ್)

ಶ್ರೀಲಂಕಾ ಕ್ರಿಕೆಟಿಗ ಧಮ್ಮಿಕಾ ಹತ್ಯೆ

ಕೊಲಂಬೊ: ಶ್ರೀಲಂಕಾ 19 ವರ್ಷದೊಳಗಿನವರ ಕ್ರಿಕೆಟ್ ತಂಡದ ಮಾಜಿ ನಾಯಕ ಧಮ್ಮಿಕಾ ನಿರೋಷನ ಅವರನ್ನು ಬುಧವಾರ ದುಷ್ಕರ್ಮಿಯೊಬ್ಬ ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ.

41 ವರ್ಷದ ನಿರೋಷನ್ ಅವರು ಅಂಬಲಂಗೊಡಾದಲ್ಲಿರುವ ತಮ್ಮ ಮನೆಯ ಹೊರಗೆ ಓಡಾಡುತ್ತಿದ್ದರು. ಈ ಸಂದರ್ಭದಲ್ಲಿ ಅಪರಿಚಿತನೊಬ್ಬ ಗುಂಡಿಕ್ಕಿ ಪರಾರಿ ಯಾದನೆನ್ನಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಚುರುಕುಗೊಳಿಸಿದ್ದಾರೆ ಎಂದು ಕ್ರಿಕ್‌ಇನ್ಫೋ ಡಾಟ್ ಕಾಮ್ ವೆಬ್‌ಸೈಟ್ ವರದಿ ಮಾಡಿದೆ.